ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 14 | ಮಾರ್ಚ್ 30–ಏಪ್ರಿಲ್ 5, 2020 | ಪುಟ 16 | ರೂ. 10

web: www.janashakthi.co.in e-mail : js_weekly@yahoo.com



ಲಾಕ್‌ಡೌನ್ ಏನೋ ಸರಿ

ಆದರೆ ಜನಗಳ ಪಾಡೇನು?



ಉದ್ದೇಶವನ್ನೇ ವಿಫಲಗೊಳಿಸುವ ಕೋವಿಡ್ ಪ್ಯಾಕೇಜ್

ಪರಿಹಾರ ಪ್ಯಾಕೇಜ್ ಎಲ್ಲಾ ಅಸಂಘಟಿತರಿಗೆ ತಲುಪಲಿ



ಪೌರರಿಂದ ಕೇಳುತ್ತಿದ್ದೀರಿ ಅವರಿಗೆ ಕೊಟ್ಟಿರುವುದೇನು?

ಪ್ರಧಾನಿಗಳಿಗೆ ಬಹಿರಂಗ ಪತ್ರ

ಹಸಿದ ಜನಗಳ ಹೊಟ್ಟೆ ಹೇಗೆ ತುಂಬಿಸುತ್ತೀರಿ?

ಮುಖ್ಯಮಂತ್ರಿಗಳಿಗೆ ಬಹಿರಂಗ ಪತ್ರ





ಕೋವಿಡ್ 19 ವಿರುದ್ಧ ಸಮರ

ಕೇರಳಕ್ಕೆ ಮತ್ತು ಕೇರಳದಿಂದ ಪಾಠಗಳು ದೈಹಿಕ ದೂರ, ಸಾಮಾಜಿಕ ಐಕ್ಯತೆಯ ಗುರಿಯೊಂದಿಗೆ ಕಾರ್ಯಾಚರಣೆ

ಹಣಕಾಸು ಮಂತ್ರಿಗಳ ಕೋವಿಡ್ ಪ್ಯಾಕೇಜ್ ಏನೇನೂ ಸಾಲದು–ಸೀತಾರಾಂ ಯೆಚುರಿ

"ಇದು 'ಸಮುದಾಯ–ಹರಡಿಕೆ'ಯನ್ನು ತಡೆಗಟ್ಟುವ ಗುರಿಯನ್ನು ವಿಫಲಗೊಳಿಸುತ್ತದೆ"



ಮಾರ್ಚ್ 26ರಂದು, ಪ್ರಧಾನ ಮಂತ್ರಿಗಳ 'ಜನತಾ ಕರ್ಫ್ಯೂ' ಕರೆಯ 6 ದಿನಗಳ ನಂತರ, 21 ದಿನಗಳ 'ಲಾಕ್‌ಡೌನ್'ನ 36 ಗಂಟೆಗಳ ನಂತರ, ಕೊನೆಗೂ ಮೋದಿ ಸರಕಾರದ ಹಣಕಾಸು ಮಂತ್ರಿಗಳು ಕೋವಿಡ್–19ರಿಂದ ಉಂಟಾಗಿರುವ ಪರಿಸ್ಥಿತಿಯನ್ನು ಎದುರಿಸಲೆಂದು ಒಂದು ಆರ್ಥಿಕ ಪ್ಯಾಕೇಜನ್ನು ಪ್ರಕಟಿಸಿದ್ದಾರೆ.

ಆದರೆ ಇದು ಸಮಸ್ಯೆಗಳ ಅಗಾಧತೆಯ ಎದುರು ಏನೇನೂ ಸಾಲದು, ಇದರಲ್ಲಿ ವಲಸೆ ಕಾರ್ಮಿಕರು ತಮ್ಮ ರಾಜ್ಯಗಳಿಗೆ ಮರಳುತ್ತಿರುವ ಪ್ರಮುಖ ಪ್ರಶ್ನೆಯೇ ಕಾಣೆಯಾಗಿರುವುದು 21 ದಿನಗಳ ದಿಗ್ಬಂಧನದ ಉದ್ದೇಶವನ್ನೇ ಸೋಲಿಸಿದೆ, ಏಕೆಂದರೆ ಸಾಗರದಂತೆ ಹರಿವ ದೊಡ್ಡ ಜನಜಂಗುಳಿ ಸೋಂಕು "ಸಮುದಾಯದಲ್ಲಿ ಹರಡದಂತೆ" ತಡೆಯುವುದಕ್ಕೆ ಮಾರಕ. ಇದನ್ನು ತಕ್ಷಣವೇ ಸರಿಪಡಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಈ ಕುರಿತು ಒಂದು ಹೇಳಿಕೆ ನೀಡಿ ಆಗ್ರಹಿಸಿದ್ದಾರೆ.

ಆದ್ಯತೆ ಕೊಡಬೇಕಾದ್ದು ಮಾನವ ಜೀವಗಳನ್ನು ಉಳಿಸಲು ಮತ್ತು ಮಹಾಮಾರಿಯನ್ನು ಸೋಲಿಸಲು. ಈ ಪ್ಯಾಕೇಜ್ ಅದಕ್ಕೆ ಏನೇನೂ ಸಾಲದು, ಸರಕಾರ ತಕ್ಷಣವೇ ಬೇರೇನು ಮಾಡಬೇಕಾಗಿದೆ ಎಂದು ಯೆಚುರಿ ತಮ್ಮ ಹೇಳಿಕೆಯಲ್ಲಿ ಪಟ್ಟಿ ಮಾಡಿದ್ದಾರೆ.

ಅವರ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ.

ಇದಕ್ಕೆ ಮೊದಲು ಮಾರ್ಚ್ 23, ಅಂದರೆ ಪ್ರಧಾನ ಮಂತ್ರಿಗಳ ಮೊದಲ ಪ್ರಸಾರ ಭಾಷಣದ ನಂತರ ಸೀತಾರಾಂ ಯೆಚುರಿ ಕೋವಿಡ್–19ರ ಕುರಿತು ಅವರಿಗೆ ಪತ್ರ ಬರೆದು ಇದೀಗ ಸರಕಾರ ಹಣಕಾಸು ಶಿಸ್ತಿನ ಬಗ್ಗೆಯೇ ಚಿಂತಿಸುತ್ತ ಕೂರುವ ಸಮಯವಲ್ಲ, ನಮ್ಮ ಸಂಪನ್ಮೂಲಗಳನ್ನು ಜೀವಗಳು, ಜೀವನಾಧಾರಗಳನ್ನು ಉಳಿಸಲು ಬಳಸಬೇಕಾದ ಸಮಯ ಎಂದು ನೆನಪಿಸಿದ್ದರು. ಮಾರ್ಚ್ 24ರ ಎರಡನೇ ಪ್ರಸಾರ ಭಾಷಣದಲ್ಲೂ ಜನಗಳಿಗೆ ಪರಿಹಾರದ ಬಗ್ಗೆ ಏನೂ ಇಲ್ಲದ್ದರ ಬಗ್ಗೆ ಜನರ ನಿರಾಶೆಯ ಬಗ್ಗೆ ಒಂದು ಬಹಿರಂಗ ಪತ್ರ ಬರೆದರು. ಅವನ್ನೂ ಈ ಪುಟದಲ್ಲಿ ಕೊಡಲಾಗಿದೆ.

ಸೀತಾರಾಂ ಯೆಚುರಿ ಹೇಳಿಕೆ, ಮಾರ್ಚ್ 26

ಸಮಯ ವ್ಯರ್ಥಮಾಡುವಂತಿಲ್ಲ.

ಬದುಕುಗಳು ಮೂರಾಬಟ್ಟೆಯಾಗಿವೆ, ಏಕೆಂದರೆ, ಎರಡು ತಿಂಗಳ ಎಚ್ಚರಿಕೆ ಇದ್ದರೂ ಕೇಂದ್ರ ಸರಕಾರ ಯಾವುದೇ ಪೂರ್ವ ಯೋಜನೆ ಇಲ್ಲದೆ ಒಂದು ದಿಗ್ಬಂಧನವನ್ನು ಸಾರಿದೆ.

ಇದು 'ಹಣಕಾಸು–ಕೊರತೆ'ಯ ಬಗ್ಗೆಯೇ ಯೋಚಿಸುತ್ತ ಕೂರುವ ಸಮಯವಲ್ಲ.

ಶ್ರೀಮಂತರ ರೂ.7.78ಲಕ್ಷ ಕೋಟಿ ರೂ.ಗಳಷ್ಟು ಸಾಲಗಳನ್ನು ಮನ್ನಾ ಮಾಡಬಹುದಾದರೆ, ಸಂಪನ್ಮೂಲಗಳ ಕೊರತೆಯೇನೂ ಇಲ್ಲ ಎಂಬುದು ಸುಸ್ಪಷ್ಟ.

ಆದ್ಯತೆ ಕೊಡಬೇಕಾದ್ದು ಮಾನವ ಜೀವಗಳನ್ನು ಉಳಿಸಲು ಮತ್ತು ಮಹಾಮಾರಿಯನ್ನು ಸೋಲಿಸಲು.

ಇಂದು ಪ್ರಕಟಿಸಿರುವ ರೂ.1.75ಲಕ್ಷ ಕೋಟಿ ಪ್ಯಾಕೇಜ್‌ನಲ್ಲಿ ವಲಸೆ ಕಾರ್ಮಿಕರು ತಮ್ಮ ರಾಜ್ಯಗಳಿಗೆ ಮರಳುತ್ತಿರುವ ಪ್ರಮುಖ ಪ್ರಶ್ನೆ ಕಾಣೆಯಾಗಿದೆ. ನಾವು ಹಲವು ದೇಶಗಳಿಂದ ಭಾರತೀಯರನ್ನು ವಿಮಾನ ಮೂಲಕ ವಾಪಾಸು ಕರೆ ತಂದಿದ್ದೇವೆ; ಖಂಡಿತವಾಗಿಯೂ ನಮ್ಮದೇ ಬಂಧುಗಳಿಗೆ ಅವರು ಸದ್ಯಕ್ಕೆ ಇದ್ದಲ್ಲೇ ಇರಲು ಅನ್ನ, ಸೂರುಗಳನ್ನು ಒದಗಿಸಬೇಕಾಗಿತ್ತು, ಇಲ್ಲವೇ ಅವರವರ ರಾಜ್ಯಗಳಿಗೆ ಕಳಿಸಲು ವ್ಯವಸ್ಥೆ ಮಾಡಬೇಕಿತ್ತು.

ಈ ವಿಫಲತೆ 21 ದಿನಗಳ ದಿಗ್ಬಂಧನದ ಉದ್ದೇಶವನ್ನೇ ಸೋಲಿಸಿದೆ, ಏಕೆಂದರೆ ಸಾಗರದಂತೆ ಹರಿವ ದೊಡ್ಡ ಜನಜಂಗುಳಿ ಸೋಂಕು "ಸಮುದಾಯದಲ್ಲಿ ಹರಡದಂತೆ" ತಡೆಯುವುದಕ್ಕೆ ಮಾರಕ. ಇದನ್ನು ತಕ್ಷಣವೇ ಸರಿಪಡಿಸಬೇಕು.

ಆಹಾರಧಾನ್ಯಗಳನ್ನು ದ್ವಿಗುಣಗೊಳಿಸುವುದು, ಮೂರು ತಿಂಗಳಿಗೆ ಉಚಿತ ಅನಿಲ ಸಿಲಿಂಡರುಗಳು ಮುಂತಾದ ಕೆಲವು ಯೋಗ್ಯ ಪ್ರಸ್ತಾವಗಳು ಸರಕಾರ ಈಗ ಪ್ರಕಟಿಸಿರುವ ಪ್ಯಾಕೇಜಿನಲ್ಲಿ ಇವೆಯಾದರೂ, ಪ್ರತಿ ಕುಟುಂಬಕ್ಕೆ ಒಂದು ಕೆ.ಜಿ. ಬೇಳೇಕಾಳು ಏನೇನೂ ಸಾಲದು. ಕೋವಿಡ್–19ನ್ನು ಎದುರಿಸಲು ಬಹಳ ಮುಖ್ಯವಾದದ್ದು ಉತ್ತಮ ಪೋಷಕಾಂಶಗಳು. ಇದಿಲ್ಲದೆ ಉದ್ದೇಶ ಸಾಧನೆಯಾಗುವುದಿಲ್ಲ.**ಪುಟ 12 ನೋಡಿ**



"ಪ್ಯಾಕೇಜ್‌ನಲ್ಲಿ ವಲಸೆ ಕಾರ್ಮಿಕರು ತಮ್ಮ ರಾಜ್ಯಗಳಿಗೆ ಮರಳುತ್ತಿರುವ ಪ್ರಮುಖ ಪ್ರಶ್ನೆ ಕಾಣೆಯಾಗಿದೆ. ಅವರು ಸದ್ಯಕ್ಕೆ ಇದ್ದಲ್ಲೇ ಇರಲು ಅನ್ನ, ಸೂರುಗಳನ್ನು ಒದಗಿಸಬೇಕಾಗಿತ್ತು, ಇಲ್ಲವೇ ಅವರವರ ರಾಜ್ಯಗಳಿಗೆ ಕಳಿಸಲು ವ್ಯವಸ್ಥೆ ಮಾಡಬೇಕಿತ್ತು. ಈ ವಿಫಲತೆ 21 ದಿನಗಳ ದಿಗ್ಬಂಧನದ ಉದ್ದೇಶವನ್ನೇ ಸೋಲಿಸಿದೆ, ಏಕೆಂದರೆ ಸಾಗರದಂತೆ ಹರಿವ ದೊಡ್ಡ ಜನಜಂಗುಳಿ ಸೋಂಕು "ಸಮುದಾಯದಲ್ಲಿ ಹರಡದಂತೆ" ತಡೆಯುವುದಕ್ಕೆ ಮಾರಕ."

"ಇದೀಗ ಜನಗಳ ಜೀವಗಳನ್ನು ಉಳಿಸಲು ಸಂಪನ್ಮೂಲಗಳನ್ನೆಲ್ಲ ಬಳಸಬೇಕಾದ ಸಮಯ"

ಮಾರ್ಚ್ 23 ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಕೋವಿಡ್–19ರ ಕುರಿತು ಬರೆದಿರುವ ಪತ್ರದಲ್ಲಿ ಇದೀಗ ಸರಕಾರ ಹಣಕಾಸು ಶಿಸ್ತಿನ ಬಗ್ಗೆಯೇ ಚಿಂತಿಸುತ್ತ ಕೂರುವ ಸಮಯವಲ್ಲ, ನಮ್ಮ ಸಂಪನ್ಮೂಲಗಳನ್ನು ಜೀವಗಳು, ಜೀವನಾಧಾರಗಳನ್ನು ಉಳಿಸಲು ಬಳಸಬೇಕಾದ ಸಮಯ ಎಂದು ನೆನಪಿಸಿದ್ದಾರೆ.

ಅಲ್ಲದೆ, ಕೇವಲ ಅಮೆರಿಕಾದ, ಯುರೋಪಿನ ಸಂಸ್ಥೆಗಳು ಮಂಜೂರು ಮಾಡಿದ ತಪಾಸಣಾ ಕಿಟ್‌ಗಳನ್ನು ಬಳಸಬೇಕೆಂಬ ವಿಚಿತ್ರ ಸುತ್ತೋಲೆಯನ್ನು ಹಿಂತೆಗೆದುಕೊಂಡು ನ ರಾಷ್ಟ್ರೀಯ ವೈರಾಣುಶಾಸ್ತ್ರ ಸಂಸ್ಥೆ ಮಂಜೂರು ಮಾಡಿರುವ ಎಲ್ಲ ತಪಾಸಣಾ ಕಿಟ್‌ಗಳನ್ನು ಬಳಸಲೇಬೇಕಾಗಿದೆ ಎಂದೂ ಯೆಚುರಿ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ದೇಶ ಮತ್ತು ಜನತೆ ಈಗ ಕೋವಿಡ್–19ರ ಹರಡಿಕೆ ವಿರುದ್ಧ ಒಂದು ಗಂಭೀರ ಯುದ್ಧದಲ್ಲಿ ತೊಡಗಿದ್ದಾರೆ. ಹಲವು ರಾಜ್ಯಗಳಲ್ಲಿ ಈ ಮಾರಕ ವೈರಸ್‌ನ ಸಾಮುದಾಯಿಕ ಹರಡಿಕೆಯನ್ನು ತಡೆಯಲು ನಿರ್ಬಂಧಗಳನ್ನು ಜಾರಿ ಮಾಡಲಾಗಿದೆ.

ಇಂತಹ ನಿರ್ಬಂದಿತ ಅವಧಿಯಲ್ಲಿ ಜನಗಳ, ಅದರಲ್ಲೂ ರೋಗಲಕ್ಷಣಗಳುಳ್ಳವರ ತಪಾಸಣೆಯ ಪ್ರಮಾಣವನ್ನು ಹೆಚ್ಚಿಸಲೇ ಬೇಕಾಗುತ್ತದೆ. ಇದರ ಆಧಾರದಲ್ಲಿ ವೈರಸ್‌ನ ಹರಡಿಕೆ ಹೆಚ್ಚು ಸಂಭವವಿರುವ ಸ್ಥಳಗಳನ್ನು ಗುರುತಿಸಿ ನಿರ್ಬಂಧಗಳನ್ನು ಜಾರಿ ಮಾಡಬಹುದು. ಇದಕ್ಕೆ ರಾಷ್ಟ್ರೀಯ ವೈರಾಣುಶಾಸ್ತ್ರ ಸಂಸ್ಥೆ(ನ್ಯಾಶನಲ್ ಇನ್ಸ್‌ಟಿಟ್ಯುಟ್ ಆಫ್ ವೈರೋಲೊಜಿ–ಎನ್‌ಐವಿ) ಮಂಜೂರು ಮಾಡಿರುವ ಎಲ್ಲ ತಪಾಸಣಾ ಕಿಟ್‌ಗಳನ್ನು ಬಳಸಲೇ ಬೇಕಾಗುತ್ತದೆ. ಆದರೆ ಕೇಂದ್ರ ಆರೋಗ್ಯ ಮಂತ್ರಾಲಯ ಅಮೆರಿಕದ 'ಯುಎಸ್‌ಎಫ್‌ಡಿಎ' ಮತ್ತು 'ಯುರೋಪಿಯನ್ ಇಸಿ' ಮಂಜೂರು ಮಾಡಿದ ಕಿಟ್ ಗಳನ್ನು ಮಾತ್ರ ಬಳಸಬೇಕು ಎಂದು ಸುತ್ತೋಲೆ ಹೊರಡಿಸಿರುವುದು ವಿಚಿತ್ರವಾಗಿದೆ. ಇಂತಹ ಕಿಟ್‌ಗಳ ತಯಾರಕರು ನಮ್ಮ ದೇಶದಲ್ಲಿ ಇರುವುದು ಒಬ್ಬರು ಮಾತ್ರ. ಈ ಕಂಪನಿ ಗುಜರಾತದಲ್ಲಿದೆ. ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡು ಈ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ಎನ್‌ಐವಿ ಮಂಜೂರು ಮಾಡಿದ ಎಲ್ಲ ಕಿಟ್‌ಗಳನ್ನು ತುರ್ತಾಗಿ ತಪಾಸಣೆಗೆ ಬಳಸುವಂತಾಗಬೇಕು ಎಂದು ಯೆಚುರಿ ಹೇಳಿದ್ದಾರೆ.

ಕೋಟ್ಯಂತರ ಕುಟುಂಬಗಳು ತಮ್ಮ ಕುಟುಂಬದ ಸದಸ್ಯರ ದಿನಗೂಲಿಗಳಿಂದ ಬದುಕುಳಿದಿವೆ. ವೈರಸ್ ಹರಡಿಕೆ ತಡೆಯಲು ಹಾಕಿರುವ ನಿರ್ಬಂಧಗಳಿಂದಾಗಿ ಈ ಕುಟುಂಬಗಳೀಗ ತೀವ್ರ ಸಂಕಟಕ್ಕೊಳಗಾಗಿವೆ. ಆದ್ದರಿಂದ ತಕ್ಷಣವೇ ಜನಧನ ಖಾತೆಗಳಿಗೆ ಮತ್ತು ಬಿಪಿಎಲ್ ಫಲಾನುಭವಿಗಳಿಗೆ 5000ರೂ.ಗಳನ್ನು ವರ್ಗಾಯಿಸುವುದು ಅಗತ್ಯವಾಗಿದೆ.

ಮಧ್ಯಾಹ್ನದ ಊಟದ ಸ್ಕೀಮಿನ ಫಲ ಅನುಭವಿಸುತ್ತಿರುವ ಮಕ್ಕಳ ಕುಟುಂಬಗಳಿಗೆ ರೇಶನ್ ಕಿಟ್‌ಗಳನ್ನು ಪೂರೈಸಬೇಕು. ಎಲ್ಲ ಬಿಪಿಎಲ್/ಎಪಿಎಲ್ ಕುಟುಂಬಗಳಿಗೆ ಒಂದು ತಿಂಗಳ ಉಚಿತ ರೇಶನ್ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕೊಡಬೇಕು.

ಜಗತ್ತಿನಲ್ಲಿ ಹಲವು ಸರಕಾರಗಳು ಈಗ ಕೆಲಸಕ್ಕೆ ಹಾಜರಾಗಲಾರದ ಕಾರ್ಮಿಕರು ಇದುವರೆಗೆ ಪಡೆಯುತ್ತಿದ್ದ ಸಂಬಳದ ಕನಿಷ್ಟ 80ಶೇ.ದಷ್ಟು ಕೊಡುವ ಗ್ಯಾರಂಟಿ ಪ್ರಕಟಿಸಿವೆ. ಭಾರತ ಸರಕಾರವೂ ಇದನ್ನು ಅನುಸರಿಸಬೇಕು. ಇದರೊಂದಿಗೆ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಹಾಗೂ ಚಿಲ್ಲರೆ ವ್ಯಾಪಾರಸ್ಥರ ಬ್ಯಾಂಕ್ ಸಾಲಗಳ ಮರುಪಾವತಿಗೆ ಮತ್ತು ಇಎಂಐಗಳಿಗೂ ಒಂದು ವರ್ಷದ ವಿಳಂಬದ ಅವಕಾಶ ನೀಡಬೇಕು.

ವಿತ್ತೀಯ ಮಸೂದೆ ಈಗಾಗಲೇ ಸಂಸತ್ತಿನ ಮಂಜೂರಾತಿ ಪಡೆದಿರುವುದರಿಂದ ಕೇಂದ್ರ ಸರಕಾರ ಕೋಟ್ಯಂತರ ಜನಗಳ ಜೀವ ಮತ್ತು ಜೀವನಾಧಾರಗಳನ್ನು ಉಳಿಸಲು ಒಂದು ಗಮನಾರ್ಹ ಮೊತ್ತದ ಪ್ಯಾಕೇಜಿಗೆ ಹಣ ತೆಗೆದಿಡಬೇಕು.

ಇದು ಹಣಕಾಸು ಶಿಸ್ತಿನ ಬಗ್ಗೆಯೇ ಚಿಂತಿಸುತ್ತ ಕೂರುವ ಸಮಯವಲ್ಲ, ನಮ್ಮ ಸಂಪನ್ಮೂಲಗಳನ್ನು ಜೀವಗಳ ರಕ್ಷಣೆಗೆ ಬಳಸಬೇಕಾದ ಸಮಯ ಎಂದು ಸೀತಾರಾಂ ಯೆಚುರಿಯವರು ಪ್ರಧಾನ ಮಂತ್ರಿಗಳಿಗೆ ಬರೆದ ತಮ್ಮ ಪತ್ರದ ಕೊನೆಯಲ್ಲಿ ಹೇಳಿದ್ದಾರೆ.

ಎರಡನೇ ಪ್ರಸಾರ ಭಾಷಣದಲ್ಲೂ ಅಗತ್ಯ ನೆರವಿನ ಕ್ರಮಗಳನ್ನು ಅಥವ ಪರಿಹಾರಗಳನ್ನು ಪ್ರಕಟಿಸದಿರುವುದರಿಂದ ನಿರಾಶೆಯಾಗಿದೆ: ಪ್ರಧಾನಿಗಳಿಗೆ ಯೆಚುರಿ ಬಹಿರಂಗ ಪತ್ರ

ಪ್ರಧಾನ ಮಂತ್ರಿಗಳು ಕೋವಿಡ್–19ರ ವಿರುದ್ಧ ಸಮರದ ಸಂದರ್ಭದಲ್ಲಿ ಮಾರ್ಚ್ 24ರಂದು ಇಡೀ ದೇಶವನ್ನುದ್ದೇಶಿಸಿ ಮತ್ತೊಂದು ಪ್ರಸಾರ ಭಾಷಣ ಮಾಡಿದರು. ಆದರೆ ಇದರಲ್ಲೂ ಬಡವರು ಮತ್ತು ನೆರವಿನ ಅಗತ್ಯವಿರುವವವರಿಗೆ ಪರಿಹಾರ ಒದಗಿಸುವ, ಮತ್ತು ಈ ದಿಗ್ಬಂಧನದಲ್ಲಿ ಬದುಕುಳಿಯಲು ತುರ್ತು ಸಹಾಯ ಬೇಕಾದವರ ಸಂಕಟಗಳನ್ನು ಶಮನ ಮಾಡುವ, ಯಾವುದೇ ಮೂರ್ತ ಕ್ರಮಗಳನ್ನು ಪ್ರಕಟಿಸಿಲ್ಲ ಎಂದು ಇದರಿಂದ ಜನಗಳಿಗಾಗಿರುವ ನಿರಾಸೆಗೆ ದನಿ ನೀಡಿ ಸಿಪಿಐ(ಎಂ) ಪ್ರಧಾನಮಂತ್ರಿಗಳಿಗೆ ಒಂದು ಬಹಿರಂಗ ಪತ್ರವನ್ನು ಬರೆದಿದ್ದಾರೆ.

ಈ ಕಷ್ಟಕರ ದಿಗ್ಬಂಧನದ ಸಮಯದಲ್ಲಿ ಆರ್ಥಿಕ ನೆರವಿಗೂ ಮತ್ತು ನಾವು ಈಗಿಂದಲೇ ಕೈಗೊಳ್ಳಬೇಕಾದ ಪರೀಕ್ಷಣೆ, ಸೋಂಕು ಗುರುತಿಸುವುದು ಮತ್ತು ಸಾರ್ವಜನಿಕ ಆರೋಗ್ಯದ ಕ್ರಮಗಳಿಗೂ ಸ್ಪಷ್ಟ ಹೆಜ್ಜೆಗಳನ್ನು ಪ್ರಕಟಿಸಬೇಕು. ಇವೆರಡೂ, ಈ ಮಹಾಮಾರಿಯನ್ನು ಸೋಲಿಸಲು ನಮಗೆ ಸಾಧ್ಯವಾಗಬೇಕಾದರೆ ಮಹತ್ವದ್ದಾಗುತ್ತವೆ, ಇಲ್ಲವಾದರೆ ಬಹಳ ತಡವಾದೀತು ಎಂದು ಯೆಚುರಿ ತಮ್ಮ ಬಹಿರಂಗ ಪತ್ರದಲ್ಲಿ ಎಚ್ಚರಿಸಿದ್ದಾರೆ.

ಈ ಸಮಯದಲ್ಲಿ ಕೋವಿಡ್–19ನ ಎದುರು ಸಮರಕ್ಕೆ ದೇಶ ಒಟ್ಟಾಗಿ ನಿಂತಿದೆ. "ಆದರೆ ನಿಮ್ಮ ಸರಕಾರ ನಾಗರಿಕರಿಂದ ಪ್ರತಿಯೊಂದನ್ನೂ ಕೇಳುತ್ತಿದೆ, ನೀವು ಮಾತ್ರ ಸರಕಾರ ಅವರ ಜೀವನಾಧಾರಗಳನ್ನು ನೋಡಿಕೊಳ್ಳುವ ಬಗ್ಗೆ ಯಾವುದೇ ಆಶ್ವಾಸನೆಗಳನ್ನು ಕೊಟ್ಟಿಲ್ಲ" ಎನ್ನುತ್ತ ನಮ್ಮ ಜನರು ಜೀವಂತವಾಗುಳಿಯಲು ಮತ್ತು ಆರೋಗ್ಯವಂತರಾಗಿ ಇರಲಿಕ್ಕಾಗಿ ಇದನ್ನು ಮಾಡಿ ಎಂದು ಸೀತಾರಾಂ ಯೆಚುರಿ ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಸೀತಾರಾಂ ಯೆಚುರಿಯವರ ಬಹಿರಂಗ ಪತ್ರದ ಪೂರ್ಣ ಪಾಟಕ್ಕೆ ಪುಟ–12 ನೋಡಿ

ಸಂಪಾದಕೀಯ

ಪರಿಹಾರ ಪ್ಯಾಕೇಜ್ ಎಲ್ಲ ಅಸಂಘಟಿತ ದುಡಿಮೆಗಾರರಿಗೆ ತಲುಪಲಿ

ವಿಶ್ವದಾದ್ಯಂತ ಸುಮಾರು 25 ಸಾವಿರ ಜನರನ್ನು ಬಲಿಪಡೆದ ಭೀಕರ ಕೊರೊನಾ ವೈರಸ್ 3ನೇ ಹಂತಕ್ಕೆ ತಲುಪುತ್ತಿದೆ ಎನ್ನಲಾಗುತ್ತಿದೆ. ದೇಶದೆಲ್ಲೆಡೆ ವ್ಯಾಪಕವಾಗಿ ಹಬ್ಬುತ್ತಿರುವ ಸೋಂಕನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೆಲವು ಕಟ್ಟುನಿಟ್ಟಿನ ನಿರ್ಬಂಧಗಳನ್ನು ಜಾರಿಗೆ ತರಲು ಶ್ರಮಿಸುತ್ತವೆ. ಈ ನಿರ್ಬಂಧಗಳಿಂದ ಎಷ್ಟೇ ಅನಾನೂಕೂಲತೆ ಅನುಭವಿಸುವಂತಾದರೂ, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಅಗತ್ಯತೆಯ ದೃಷ್ಟಿಯಿಂದ ಅನಿವಾರ್ಯವೂ ಅವಶ್ಯವೂ ಆಗಿವೆ. ಇಂದು ಪರಿಸ್ಥಿತಿ ಜನತೆಯ ತ್ಯಾಗವನ್ನು ಬಯಸುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಇನ್ನೂ ಹೆಚ್ಚಿನ ಹೊಣೆಗಾರಿಕೆಯಿಂದ ಪರಿಸ್ಥಿತಿಯನ್ನು ನಿಭಾಯಿಸಬೇಕು. ಕೇಂದ್ರ ಸರ್ಕಾರ 1.70 ಲಕ್ಷ ಕೋಟಿ ರೂ. ಮೊತ್ತದ ಪರಿಹಾರ ಪ್ಯಾಕೇಜ್ ಪ್ರಕಟಿಸಿದೆ. ಇದು ಸ್ವಾಗತಾರ್ಹವಾಗಿದ್ದರೂ ಏನೇನು ಸಾಲದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇನ್ನೂ ಹೆಚ್ಚಿನ ಮೊತ್ತವನ್ನು ನೀಡಬೇಕು. ನೆರವು ಮುಖ್ಯವಾಗಿ ಕೆಲಸವನ್ನು ಕಳೆದುಕೊಂಡಿರುವ ನಿತ್ಯದ ಅನ್ನಕ್ಕಾಗಿ ದುಡಿಯುವ ಎಲ್ಲರಿಗೂ ತಲುಪಬೇಕು. ಬ್ಯಾಂಕ್ ಖಾತೆ, ರೇಷನ್ ಕಾರ್ಡ್ ಇಲ್ಲದ ಎಲ್ಲ ಬಡವರಿಗೆ ಪರಿಹಾರ ದೊರಕಬೇಕು. ನಿತ್ಯದ ದುಡಿಮೆಯನ್ನು ಅವಲಂಭಿಸಿರುವ ಮನೆ ಕೆಲಸಗಾರರು, ಬೀದಿಯಲ್ಲಿ ಮೂಟೆ ಹೊರುವ ಹಮಾಲಿ ಕಾರ್ಮಿಕರು, ಬೀಡಿ ಕಾರ್ಮಿಕರು, ಆಟೋ ಚಾಲಕರು, ಎಲ್ಲಾ ವಿಭಾಗದ ಗುತ್ತಿಗೆ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ಕೃಷಿ ಕೂಲಿಕಾರರು ಮುಂತಾದ ಎಲ್ಲ ಅಸಂಘಟಿತ ಕಾರ್ಮಿಕರಿಗೆ ನೆರವು ದೊರೆಯಬೇಕು.

ಪೊಲೀಸ್ ಅತಿರೇಖ ನಿಲ್ಲಲಿ

ಲಾಕ್‌ಡೌನ್ ಕಟ್ಟು ನಿಟ್ಟಾಗಿ ಜಾರಿಗೊಳಿಸುವ ಹೆಸರಿನಲ್ಲಿ ಜನರ ಮೇಲೆ ಪೊಲೀಸ್ ದೌರ್ಜನ್ಯ ಹೆಚ್ಚುತ್ತಿದೆ. ಬೀದಿಗೆ ಬಂದವರನ್ನೆಲ್ಲಾ ಲಾಠಿಗಳಿಂದ ಹೊಡೆದು ಗಾಯಗೊಳಿಸಿದರೆ ಅದು ಬಡವನ ಪಾಲಿಗೆ ಕೊರೊನಾಗಿಂತ ಹೆಚ್ಚು ಆಘಾತಕಾರಿಯಾಗುತ್ತದೆ. ದಿನನಿತ್ಯದ ಅವಶ್ಯಕತೆಗಳಿಗಾಗಿ ಅಂಗಡಿಗಳಿಗೆ, ತರಕಾರಿ ಮಾರುಕಟ್ಟೆಗೆ ಹೋಗುವುದು ಅನಿವಾರ್ಯವಾಗಿರುತ್ತದೆ. ಅಗತ್ಯ ವಸ್ತುಗಳನ್ನು ಮನೆ ಮನೆಗಳಿಗೆ ತಲುಪಿಸುವ ವ್ಯವಸ್ಥೆ ಇಲ್ಲವಲ್ಲ. ಇಂತಹ ಸಂಕಷ್ಟದ ಕಾಲದಲ್ಲಿ ಯಾರೂ ಬೀದಿಗಳಲ್ಲಿ ಅನಗತ್ಯವಾಗಿ ಓಡಾಡುವುದಿಲ್ಲ. ಅಂತವರನ್ನು ನಿಲ್ಲಿಸಿ ಬೆದರಿಸಿ ಕಳುಹಿಸಬಹುದು. ಪೊಲೀಸರು ಇಂತಹ ಅಸಹಾಯಕ ಪರಿಸ್ಥಿತಿಯ ಲಾಭ ಪಡೆಯುತ್ತಿರುವುದು ಖೇದದ ಸಂಗತಿ. ಮಾಂಸ ಮಾರಾಟ ಮಾಡುವವನಿಂದ 2 ಕೆ.ಜಿ. ಮಾಂಸವನ್ನು ಉಚಿತವಾಗಿ ಪಡೆದು ಆ ಮಾಂಸ ವ್ಯಾಪಾರಿಗೆ ಕದ್ದು ಮುಚ್ಚಿ ಮಾಂಸ ಮಾರಾಟ ಮಾಡಲು ಇದೇ ಪೊಲೀಸರು ಅವಕಾಶ ಮಾಡಿಕೊಡುತ್ತಾರೆ. ಇಂತಹ ಪೊಲೀಸರ ವಿರುದ್ಧ ಕ್ರಮ ಅಗತ್ಯವಿದೆ. ಪೊಲೀಸರ ಕೈಯಲ್ಲಿರುವ ಲಾಠಿ ಜನರನ್ನು ಹೊಡೆದು ಕೊಲ್ಲುವುದಕ್ಕಲ್ಲ.

ಕರೋನಾ ವೈರಸ್ ನಿಯಂತ್ರಣದ ಪ್ಯಾಕೇಜ್ ಘೋಷಿಸಲು ಒತ್ತಾಯ

ಮುಖ್ಯಮಂತ್ರಿಗಳಿಗೆ ಪತ್ರ,

ದೇಶದಾದ್ಯಂತ ಕರೋನಾ ವೈರಸ್ ಹಾವಳಿಯು ಮೂರನೇ ಹಂತ ತಲುಪುವ ಸಂಕಷ್ಟದಲ್ಲಿ ನಾವಿದ್ದೇವೆ. ಇದು ಇದುವರೆಗಿನ ಪರಿಸ್ಥಿತಿಗಿಂತ ಮತ್ತಷ್ಟು ಗಂಭೀರ ಪರಿಸ್ಥಿತಿಯನ್ನುಂಟು ಮಾಡಲಿದೆ. ಅದಾಗಲೇ ರಾಜ್ಯದಾದ್ಯಂತ ಸಾರ್ವಜನಿಕ ಆರೋಗ್ಯ ಹಾಗೂ ಸೇವೆಯಲ್ಲಿ ಮತ್ತು ಒಟ್ಟು ಆಂತರಿಕ ಉತ್ಪಾದನೆಯ ಮೇಲೆ ಅದರ ದುಷ್ಪರಿಣಾಮವನ್ನು ಕಾಣುತ್ತಿದ್ದೇವೆ. ಇನ್ನು ಮುಂದೆಯೂ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ ಮೇಲೆ, ಅದೇ ರೀತಿ ಬಡ ಜನತೆಯ ಮೇಲೆ ಅದರ ಗಂಭೀರ ಪರಿಣಾಮ ಕಾಣಬಹುದಾಗಿದೆ. ಒಂದೆಡೆ ಕರೋನಾ ಸಮಸ್ಯೆ ಮತ್ತೊಂದೆಡೆ ನಿರುದ್ಯೋಗದ ಸಮಸ್ಯೆ ಬಾಧಿಸಲಿದೆ. ಇದೇ ಸಂದರ್ಭದಲ್ಲಿ ಇತ್ತೀಚಿನ ಬಜೆಟ್ ಪೂರ್ವ ಮತ್ತು ನಂತರ ಏರಿಸಲಾದ ಅಗತ್ಯ ವಸ್ತುಗಳ ಬೆಲೆಗಳು ಜನತೆಯ ಆದಾಯವನ್ನು ಬಾಧಿಸಿವೆ.

ಈ ಹಿನ್ನೆಲೆಯಲ್ಲಿ, ಸದರಿ ಕರೋನಾ ಸಮಸ್ಯೆಯನ್ನು ಎದುರಿಸಲು ದೇಶದ ಹಾಗೂ ರಾಜ್ಯದ ಜನತೆ, ಸಾಕಷ್ಟು ಮುಂಜಾಗ್ರತೆಯ ಕ್ರಮವನ್ನು ಕೈಗೊಳ್ಳುವ ಮೂಲಕ ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳು, ಆರೋಗ್ಯ ಮತ್ತಿತರೇ ಇಲಾಖೆಗಳ ಮೂಲಕ ಸಾಕಷ್ಟು ಬಂಡವಾಳವನ್ನು ತೊಡಗಿಸಿ ಸಂಕಷ್ಟಕ್ಕೆ ಸಿಲುಕುವ ಜನತೆಗೆ ನೆರವಾಗ ಬೇಕಾಗಿದೆ. ಈ ವಿಚಾರದಲ್ಲಿ ಇದುವರೆಗೆ ಕೇಂದ್ರ ಹಾಗೂ ಎಲ್ಲ ರಾಜ್ಯಸರಕಾರಗಳಿಗೆ ಹೋಲಿಸಿದರೇ, ಚಿಕ್ಕ ರಾಜ್ಯ ಕೇರಳ ಸರಕಾರದ ಬಂಡವಾಳ ಹೂಡಿಕೆ (20 ಸಾವಿರ ಕೋಟಿ) ಜನ ಮೆಚ್ಚುಗೆ ಪಡೆದಿದೆ. ಆದರೇ, ಕೇಂದ್ರ ಸರಕಾರ ಹಾಗೂ ನಮ್ಮ ರಾಜ್ಯ ಸರಕಾರಗಳ ಇದುವರೆಗಿನ ಕ್ರಮಗಳು ಬೆಳೆಯುತ್ತಿರುವ ಸಂಕಷ್ಟಗಳಿಗೆ ಹೋಲಿಸಿದರೇ ಖಂಡಿತಾ ತೃಪ್ತಿದಾಯಕವಾಗಿಲ್ಲ.

ಆದ್ದರಿಂದ, ಕೇಂದ್ರ ಹಾಗೂ ತಮ್ಮ ಸರಕಾರ ಕೆಳಕಂಡ ಹಕ್ಕೊತ್ತಾಯಗಳನ್ನು ಪರಿಗಣಿಸಿ ತುರ್ತು ಕ್ರಮವಹಿಸಲು ವಿನಂತಿಸುವೆವು.

ಹಕ್ಕೊತ್ತಾಯಗಳು :

1. ವಿಶೇಷವಾಗಿ ನೆಗಡಿ, ಜ್ವರ, ಕೆಮ್ಮು ಇತ್ಯಾದಿ ಲಕ್ಷಣಗಳಿರುವವರನ್ನು ಪರೀಕ್ಷಿಸಲು ಸಾಧ್ಯವಾಗುವಂತೆ ತಪಾಸಣಾ ಕೇಂದ್ರಗಳನ್ನು ಹೆಚ್ಚಿಸಬೇಕು. ಕನಿಷ್ಠ ಪ್ರತಿ ಜಿಲ್ಲೆಯಲ್ಲೂ ಲಭ್ಯವಿರುವಂತೆ ತಕ್ಷಣವೇ ಕ್ರಮವಹಿಸಬೇಕು. ಅಗತ್ಯ ಔಷಧಿ ಮತ್ತಿತರೇ ವ್ಯವಸ್ಥೆ ಒದಗಿಸಬೇಕು.
2. ಉಚಿತ ತಪಾಸಣೆ ನಡೆಸಲು, ಆಸ್ಪತ್ರೆಗಳಲ್ಲಿ ಸೌಲಭ್ಯಗಳು, ಆರೈಕೆ ಕೇಂದ್ರಗಳು (ಕ್ವಾರಂಟೈನ್ಡ್) ಮತ್ತು ವೆಂಟಿಲೇಟರ್‌ಗಳನ್ನು ಒದಗಿಸಲು ಸಾಧ್ಯವಾಗುವಂತೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಹೆಚ್ಚಿನ ಧನ ಸಹಾಯವನ್ನು ಪ್ರಕಟಿಸಬೇಕು. ಕರೋನಾ ಪೀಡಿತರಿಗೆ ಪರಿಹಾರವನ್ನು ಘೋಷಿಸಬೇಕು.
3. ಜನಧನ್ ಖಾತೆ ಮತ್ತು ಬಿಪಿಎಲ್ ಫಲಾನುಭವಿಗಳಿಗೆ ಕೂಡಲೇ ರೂ. 5000 ನಗದು ವರ್ಗಾವಣೆ ಮಾಡಬೇಕು. ವಿಧವಾ, ವೃದ್ಧಾಪ್ಯ ಮುಂತಾದ ಪಿಂಚಣಿ ಮತ್ತಿತರೇ ಮಾಸಿಕ ಸಹಾಯಧನಗಳನ್ನು ಪಡೆಯುವವರಿಗೆ ಕನಿಷ್ಠ 3 ತಿಂಗಳ ಹಣವನ್ನು ಮುಂಗಡವಾಗಿ ಕೂಡಲೇ ಬಿಡುಗಡೆ ಮಾಡಬೇಕು
4. ಎಲ್ಲಾ ಬಿಪಿಎಲ್/ಎಪಿಎಲ್ ಕುಟುಂಬಗಳಿಗೆ, ವಲಸೆ ಕಾರ್ಮಿಕರಿಗೆ, ದಿನಗೂಲಿ ನೌಕರರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕನಿಷ್ಠ ಎರಡು ತಿಂಗಳ ಅಗತ್ಯ ಉಚಿತ ರೇಶನ್‌ನ್ನು ಕೊಡಬೇಕು. ಪಡಿತರ ವ್ಯವಸ್ಥೆಯಲ್ಲಿನ ರೇಷನ್ ಮಾತ್ರವಲ್ಲಾ, ಇತರೇ ಅಗತ್ಯ ಆಹಾರ ಧಾನ್ಯಗಳಾದ ಬೇಳೆಕಾಳು, ಅಡುಗೆ ಎಣ್ಣೆ ಮುಂತಾಗಿ 16 ಅಗತ್ಯ ಸಾಮಾನುಗಳನ್ನು ಉಚಿತವಾಗಿ ಒದಗಿಸಬೇಕು. ಕಳೆದ ಬಜೆಟ್‌ನಲ್ಲಿ ಕರ್ನಾಟಕ ಸರಕಾರ ತಲಾ ವ್ಯಕ್ತಿಗೆ ಅಕ್ಕಿ ವಿತರಣೆಯಲ್ಲಿ ಎರಡು ಕೇಜಿ ಕಡಿತ ಮಾಡಿರುವುದನ್ನು ವಾಪಾಸು ಪಡೆದು ಕನಿಷ್ಠ 12 ಕೇಜಿಯಂತೆ ವಿತರಿಸಬೇಕು. ಇದಕ್ಕೆ ಎಫ್‌ಸಿಐ ಗೋದಾಮುಗಳಲ್ಲಿ ದಾಸ್ತಾನಿರುವ 7.5 ಕೋಟಿ ಟನ್‌ಗಳ ಧಾನ್ಯಗಳನ್ನು ಬಳಸಬೇಕು. ಈ ಎಲ್ಲ ಕುಟುಂಬಗಳಿಗೂ ಅಗತ್ಯವಿರುವಷ್ಟು ಮಾಸ್ಕ್ ಹಾಗೂ ಸ್ಯಾನಿಟೈಜರ್ ಗಳನ್ನು ಉಚಿತವಾಗಿ ಒದಗಿಸಬೇಕು.
5. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು 200 ದಿನಗಳಿಗೆ ವಿಸ್ತರಿಸಿ ಕೆಲಸ ಕೇಳುವವರಿಗೆಲ್ಲರಿಗೂ ಕೊಡಬೇಕು. ಕೂಲಿಯನ್ನು 700 ರೂಗಳಿಗೆ ಹೆಚ್ಚಿಸಬೇಕು.
6. ಮಹಿಳೆಯರು, ದಲಿತರು,ಕೂಲಿಕಾರರು, ರೈತರು, ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ಪಡೆದಿರುವ ಎಲ್ಲಾ ರೀತಿಯ ಸಾಲಗಳ ಮೇಲಿನ ಬಡ್ಡಿಯನ್ನು ಕರೋನಾ ವೈರಸ್ ಸಮಸ್ಯೆ ಆರಂಭದಿಂದ ಅದು ಕೊನೆಗೊಂಡಿದೆಯೆಂದು ಹೇಳಲಾಗುವ ದಿನಗಳ ವರೆಗೆ ಬಡ್ಡಿ ಮನ್ನಾ ಘೋಷಿಸಬೇಕು. ಸಾಲ ವಾಪಾಸು ನೀಡಲು ಸಮಯಾವಕಾಶ ಇರುವಂತೆ ಕ್ರಮವಹಿಸಬೇಕು.
7. ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಯೋಜನೆಯ ಬದಲು, ರೇಶನ್ ಕಿಟ್‌ಗಳನ್ನು ಮಕ್ಕಳ ಮನೆಗಳಿಗೆ/ ಕುಟುಂಬಗಳಿಗೆ ಒದಗಿಸಬೇಕು.
8. ಈ ಮಹಾ ವೈರಾಣುವಿನಿಂದ ಬಾಧಿತಗೊಂಡಿರುವ ವಲಯಗಳಿಗೆ ಹಣಕಾಸು ಪ್ಯಾಕೇಜುಗಳನ್ನು ಸ್ಥಾಪಿಸಬೇಕು. ಈ ಹಣಕಾಸು ಬೆಂಬಲವನ್ನು ಕಂಪನಿಗಳು ಮತ್ತು ಉದ್ದಿಮೆಗಳಿಗೆ ಮುಂದಿನ ಮೂರು ತಿಂಗಳು ಲೇ-ಆಫ್ ಮಾಡುವುದಿಲ್ಲ, ಕೆಲಸದಿಂದ ತೆಗೆದು ಹಾಕುವುದಿಲ್ಲ ಎಂಬ ಷರತ್ತಿನ ಮೇಲೆ ಕೊಡಬೇಕು.
9. ಅನೌಪಚಾರಿಕ ಮತ್ತು ಅಸಂಘಟಿತ ವಲಯಗಳಲ್ಲಿ ಜೀವನಾಧಾರಗಳಿಗೆ ತೊಂದರೆಯಾಗಿರುವ ಎಲ್ಲ ಕಾರ್ಮಿಕರಿಗೆ ಹಣಕಾಸು ನೆರವು/ಭತ್ಯೆಯನ್ನು ನೀಡಲು ಒಂದು ನಿಧಿಯನ್ನು ಸ್ಥಾಪಿಸಬೇಕು.
10. ಕೊರೊನ ವೈರಸ್ ಸೋಂಕಿನಿಂದಾಗಿ ಕೆಲಸದಿಂದ ದೂರವಿರಬೇಕಾದ ಕಾರ್ಮಿಕರು ಮತ್ತು ನೌಕರರಿಗೆ ಸಂಬಳ ಸಹಿತ ಕಾಯಿಲೆ ರಜಾ ನೀಡಬೇಕು.
11. ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಬ್ಯಾಂಕು ಸಾಲಗಳ ಮರುಪಾವತಿಯಲ್ಲಿ ಒಂದು ವರ್ಷದ ಋಣ ವಿಳಂಬದ ಸೌಲಭ್ಯವನ್ನು ನೀಡಬೇಕು.
12. ಇಂದಿರಾ ಕ್ಯಾಂಟೀನ್ ಗಳಲ್ಲಿ ಮೂರು ಹೊತ್ತು ಆಹಾರ ಲಭ್ಯವಾಗುವಂತೆ ಕ್ರಮವಹಿಸಬೇಕು.

ಯು. ಬಸವರಾಜ
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಜನಶಕ್ತಿ ಮೀಡಿಯಾ ಯೂಟ್ಯೂಬ್ ನಲ್ಲಿ

'ಜನಶಕ್ತಿ ಮೀಡಿಯಾ' ಯೂಟ್ಯೂಬ್ ಈಗ ಸಕ್ರಿಯವಾಗಿದ್ದು ಈ ವಾರ 17 ವಿಡಿಯೊಗಳನ್ನು ಅಪ್ ಲೋಡ್ ಮಾಡಲಾಗಿದೆ. ಈ ವಾರ ಅಪ್ ಲೋಡ್ ಮಾಡಲಾದ ಕೆಲವು ಪ್ರಮುಖ ವಿಡಿಯೊಗಳು ಹೀಗಿವೆ :

* ಪರಿಹಾರ ಘೋಷಿಸಿದ ಪಿಣರಾಯಿ, ಪ್ರಧಾನಿಯವರ ಭಾಷಣದಲ್ಲಿ ಏನಿದೆ? (ಮಾ. 20)
* ಕೋಳಿ ಸಾಕಾಣಿಕೆದಾರರ ನಷ್ಟ ಭರಿಸಲು ಆಗ್ರಹ. (ಮಾ. 18)
* ರಾಯಚೂರು ವಿವಿಗೆ ಸರಕಾರದ ತೂಗುಕತ್ತಿ! (ಮಾ. 18)
* ಕನ್ನಡ ನಾಡಿನ ಸಾಕ್ಷಿ ಪ್ರಜ್ಞೆ ಪಾಟೀಲ್ ಪುಟ್ಟಪ್ಪ ಇನ್ನಿಲ್ಲ (ಮಾ. 17)
* ಕೊರೊನಾ ಕುರಿತು ಜಾಗೃತಿ ಹಾಡು (ಮಾ. 17)
* ಶಾಸಕ ಯತ್ನಾಳ ವಿರುದ್ಧ DHS ಪ್ರತಿಭಟನೆ (ಮಾ. 16)
* ಕೊರೊನಾ ವೈರಸ್ ಅದೊಂದು ವೈರಲ್ ಅಷ್ಟೆ, ಭಯ ಬೇಡ, ಜಾಗೃತಿ ಬೇಕು (ಮಾ. 14)

ಯೂಟ್ಯೂಬ್ ನಲ್ಲಿ **'Janashakthi Media'** ಎಂದು ಸರ್ಚ್ ಕೊಡಿ.
ನಂತರ ಅಲ್ಲಿ ಕಾಣುವ 'Subscribe'ನ್ನು ಕ್ಲಿಕ್ ಮಾಡಿ.
ನಂತರದಲ್ಲಿ ಕಾಣುವ 'ಬೆಲ್ ಐ ಕಾನ್ ಬಟನ್' ಒತ್ತಿ. ನಿರಂತರ ನೊಟೀಫಿಕೇಶನ್ ಬರುತ್ತದೆ.
ಈ ಮೂಲಕ ಜನಶಕ್ತಿ ಮೀಡಿಯಾ ಯೂಟ್ಯೂಬ್ ಪ್ರೋತ್ಸಾಹಿಸಿ.

ಉಡುಪಿ: ಕೃಷಿ ಕೂಲಿಕಾರರ ಸಂಘದ ನಿವೇಶನ ರಹಿತರ ಹೋರಾಟಕ್ಕೆ ಸಂದ ಜಯ

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮನೆ, ನಿವೇಶನ ರಹಿತರಿಗೆ ಸರಕಾರಿ ನಿವೇಶನ ಗುರುತಿಸಿ ಜಾಗಕೊಡಬೇಕೆಂದು ಒತ್ತಾಯಿಸಿ, ಜಿಲ್ಲೆಯಾದ್ಯಂತ ನಿವೇಶನ ರಹಿತರನ್ನು ವಿಶಾಲವಾಗಿ ಸಂಘಟಿಸಿರುವುದಲ್ಲದೆ, ಎಡೆಬಿಡದೆ ನಿರಂತರವಾಗಿ ಹಲವಾರು ಹಂತದ ಹೋರಾಟವನ್ನು ಯಶಸ್ವಿಯಾಗಿ ಮಾಡಿದೆ. ಪ್ರಮುಖವಾಗಿ ಸ್ಥಳೀಯ ಮಟ್ಟದಲ್ಲಿ ಗ್ರಾಮ ಪಂಚಾಯತ್ ಕಚೇರಿ ಮುತ್ತಿಗೆ ಹೋರಾಟ, ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ, ಅನಿರ್ದಿಷ್ಟಾವಧಿ ಧರಣಿ, ಹಗಲೂ ರಾತ್ರಿ ಸತ್ಯಾಗ್ರಹ, ತಾಲೂಕು ಪಂಚಾಯತ್ ಕಚೇರಿ ಮುತ್ತಿಗೆ ಹೋರಾಟದಲ್ಲಿ ಪೊಲೀಸ್ ಬಂಧನಕ್ಕೊಳಪಟ್ಟಿರುವುದು. "ಜೈಲ್ ಭರೋ" ದಂತಹ ಸಮರಧೀರ ಹೋರಾಟ ಸಂಘಟಿಸಿದೆ. ಮನೆ, ನಿವೇಶನ ರಹಿತರು, ಕುಂದಾಪುರ ಮತ್ತು ಬೈಂದೂರು ಎರಡೂ ವಿಧಾನ ಸಭಾ ಕ್ಷೇತ್ರದ ಶಾಸಕರ ಮನೆ ಎದುರು "ಎಂಎಲ್ಎ ಮನೆ ಚಲೋ" ಯಶಸ್ವಿ ಹೋರಾಟ ಮಾಡಿ, ಶಾಸಕರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳೂ, ಕೂಲಿಕಾರರ ಸಂಘದ ಪ್ರತಿನಿಧಿಗಳೂ ಜತೆ ಜಂಟಿ ಸಭೆ ಜರಗಿಸಲು ಸಾಧ್ಯವಾಯಿತು. ಇತ್ತೀಚೆಗೆ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಜಿಲ್ಲಾವ್ಯಾಪಿ ಗ್ರಾಮಾಂತರ ಪ್ರದೇಶದಿಂದ ಸಹಸ್ರಾರು ಬಡ ನಿವೇಶನ ರಹಿತರನ್ನು ಸಂಘಟಿಸಿ ಅನಿರ್ದಿಷ್ಟಾವಧಿ ಯಶಸ್ವಿ ಧರಣಿ ಮುಷ್ಕರದಂತಹ ಸಂಘರ್ಷಾತ್ಮಕ ಹೋರಾಟ ಮಾಡಿರುವುದು ಗಮನಾರ್ಹವಾಗಿದೆ. ಕುಂದಾಪುರ ತಾಲೂಕಿನ ಕಂದಾವರ ಮತ್ತು ಕೆದೂರು ಗ್ರಾಮಗಳ ಪಂಚಾಯತ್ ವ್ಯಾಪ್ತಿಯ ಸರಕಾರಿ ಜಾಗದಲ್ಲಿ ನಮ್ಮ ಕೃಷಿಕೂಲಿಕಾರರ ಸಂಘದ ಮುಖಂಡತ್ವದಲ್ಲಿ ನಿವೇಶನ ರಹಿತರು ನೂರಾರು ಗುಡಿಸಲನ್ನು ಕಟ್ಟಿ ವಾಸವಾಗಿದ್ದ ಭೂಮಿಯ ಹಕ್ಕಿಗಾಗಿ ನಡೆಸಲಾದ ಹೋರಾಟವನ್ನು ಹತ್ತಿಕ್ಕಲು ಕಂದಾಯ ಇಲಾಖಾಧಿಕಾರಿಗಳು ಪೊಲೀಸ್ ಬಲದೊಂದಿಗೆ ಜೆಸಿಬಿ ಮೂಲಕ ಗುಡಿಸಲನ್ನು ಕೆಡವಿ, ನೆಲಸಮ ಮಾಡಿ ಬಡನಿವೇಶನ ರಹಿತರನ್ನು ಬಲವಂತವಾಗಿ ತೆರವುಗೊಳಿಸಿದಾಗ, ಪ್ರತಿರೋಧ ವ್ಯಕ್ತಪಡಿಸಿ ಪ್ರತಿಭಟಿಸಿದ ಕೂಲಿಕಾರರ ಸಂಘದ ಮುಖಂಡರು ಪೊಲೀಸ್ ಬಂಧನಕ್ಕೊಳ ಪಟ್ಟು ಐತಿಹಾಸಿಕ ಯಶಸ್ವಿ ಹೋರಾಟ ಮಾಡಿದ ಹೆಮ್ಮೆಹಾಗೂ ಗೌರವ ನಮ್ಮ ಕೃಷಿಕೂಲಿಕಾರರ ಸಂಘಕ್ಕೆ ಸಲ್ಲುತ್ತದೆ. ಈ ಎಲ್ಲಾ ಹೋರಾಟದ ಪರಿಣಾಮವಾಗಿ ತಾಲೂಕು ತಹಶೀಲ್ದಾರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ಮತ್ತು ಕೂಲಿಕಾರರ ಸಂಘದ ಮುಖಂಡರ ಜತೆ ಜಂಟಿ ಸಭೆಗಳನ್ನು ವಿವಿಧ ಹಂತದಲ್ಲಿ ಯಶಸ್ವಿಯಾಗಿ ಜರಗಿಸಲು ಸಾಧ್ಯವಾಗಿದೆ. ಈ ಎಲ್ಲಾ ಬೆಳವಣಿಗೆಗಳ ಆಧಾರದಲ್ಲಿ ಜಿಲ್ಲಾಡಳಿತ ಹಲವಾರು ಗ್ರಾಮಗಳಲ್ಲಿ ಸರಕಾರಿ ಜಾಗ ಗುರುತಿಸಿ, ನಿವೇಶನ ರಹಿತರಿಗೆ ನಿವೇಶನ ಸ್ಥಳ ಕೊಡುವ ಪ್ರಕ್ರೀಯೆ ಜರಗಿಸುತ್ತಿರುವುದು ಸ್ವಾಗತಾರ್ಹ ವಿಚಾರವಾಗಿದೆ. ಅಂತೆಯೆ ಈಗಾಗಲೇ ಬಸ್ರೂರು, ಕಾವ್ರಾಡಿ, ಕಂಡ್ಲೂರು, ಅಂಪಾರು ಗ್ರಾಮಗಳಲ್ಲಿ ನಿವೇಶನ ಜಾಗ ಗುರುತಿಸಿ ಹಕ್ಕು ಪತ್ರವಿತರಣೆಯಾಗಿದ್ದು, ಕಂದಾವರ ಗ್ರಾಮ, ಬಳ್ಕೂರು ಗ್ರಾಮ ಹಾಗೂ ತ್ರಾಸಿ, ಹೊಸಾಡು ಗ್ರಾಮಗಳ ವ್ಯಾಪ್ತಿಯ ಮೊವ್ವಾಡಿ ಪ್ರದೇಶದಲ್ಲಿ ನಿವೇಶನಕ್ಕಾಗಿ ಸರಕಾರಿ ಜಾಗ ಮಂಜೂರಾತಿಯ ಆದೇಶದಂತೆ ಈಗಾಗಲೇ ಗ್ರಾಮ ಪಂಚಾಯತಿಗೆ ಜಾಗ ಕಾಯ್ದಿರಿಸಲಾಗಿದ್ದು, ಗ್ರಾಮ ಪಂಚಾಯತಿಗೆ ಸ್ಥಳದ ನಕ್ಷೆಯೊಂದಿಗೆ ಭೌತಿಕ ಹಸ್ತಾಂತರವಾಗಿದ್ದ, ಈ ಜಾಗದಲ್ಲಿ ಸಣ್ಣ, ಸಣ್ಣ ಕಟ್ಟಿಗೆ ಮರಗಳಿರುತ್ತದೆ. ಜಾಗವನ್ನು ಸಮತಟ್ಟು ಮಾಡಿ, ನಿವೇಶನಗಳನ್ನು ರಚಿಸಲು ಮರಗಳನ್ನು ತಕ್ಷಣ ತೆರವು ಗೊಳಿಸಲು ಆರಣ್ಯ ಇಲಾಖಾಧಿಕಾರಿಗೆ ಕೋರಲಾಗಿದೆ ಎಂದು ನಮ್ಮ ಕೃಷಿಕೂಲಿಕಾರರ ಸಂಘಕ್ಕೆ ಮಾಹಿತಿ ತಿಳಿಸಲಾಗಿದೆ. ಹಾಗೆಯೆ ಜಿಲ್ಲೆಯಾದ್ಯಂತ ಇನ್ನುಳಿದ ಗ್ರಾಮಾಂತರ ಪ್ರದೇಶದಲ್ಲಿ ಮನೆ, ನಿವೇಶನಕ್ಕಾಗಿ ಜಾಗ ಕಾಯ್ದಿರಿಸಲು ನಮ್ಮ ಸಂಘಟನೆಯ ವತಿಯಿಂದ ಹೋರಾಟ ಇನ್ನಷ್ಟು ತೀವ್ರ ಗೊಳಿಸಲಾಗುವುದು.

ವರದಿ: ವೆಂಕಟೇಶ ಕೋಣಿ



ಯೇ.. ಡಿಸ್ಟ್ರಿಕ್ಟ್ ಮಿನರಲ್ ಫಂಡ್ ಕ್ಯಾ ಹೋತಾಹೈ?!!

ಈವತ್ತು ನಿರ್ಮಲಾ ಮೇಮ್ ಡಿಸ್ಟ್ರಿಕ್ಟ್ ಮಿನರಲ್ ಫಂಡ್ ನಿಂದ ಕೊರೋನಾ ತಪಾಸಣೆ ಮತ್ತಿತರ ಖರ್ಚುಗಳನ್ನು ಜಿಲ್ಲಾವಾರು ನಿಭಾಯಿಸಿ ಅಂದ್ರಲ್ಲ ಹಾಗೆಂದ್ರೆ ಏನು ಅಂತ ಹುಡುಕಿದರೆ ಈ ಮಾಹಿತಿಗಳು ಸಿಕ್ಕವು. ಅಲ್ಲಿ ಬಳಕೆ ಆಗದೇ ಉಳಿದ ಹಣ ಸಾಕಷ್ಟಿದೆ. ಇಷ್ಟರ ಮಟ್ಟಿಗೆ ಹಣ ಎಲ್ಲಿದೆ ಅಂತ ಹುಡುಕಿಕೊಟ್ಟ (ಯಾಕೆಂದರೆ, ಮನೆಯಲ್ಲಿ ಕಾಸು ಖಾಲಿ ಆದಾಗ ಹುಡುಕುವುದೇ ಸಾಸಿವೆ – ಚಹಾಪುಡಿ ಡಬ್ಬಿಗಳನ್ನು. ಇಲ್ಲೂ ಹೀಗೇ ಆಗಿದೆ. ಭೂಮಾತೆಯ ಕಾಸಿನ ಡಬ್ಬಿ ಇದು!) ಅಧಿಕಾರಿಗಳಿಗೆ ಶಬ್ಬಾಸ್ ಅನ್ನಲೇ ಬೇಕು.

ಗಣಿ ಇಲಾಖೆಯಲ್ಲಿ ಕರ್ನಾಟಕದಲ್ಲೇ 1885.06ಕೋಟಿ ರೂಗಳು ಈ ನಿಧಿಯಲ್ಲಿ ಸಂಗ್ರಹದಲ್ಲಿವೆ. ಇವು ಮಂಜೂರಾದ ಗಣಿ ಗುತ್ತಿಗೆಗಳ ಮೇಲೆ ಸಂಗ್ರಹಿಸಿದ 30% ರಾಜಧನದ (2015ಕ್ಕೆ ಮುನ್ನ ಇದು 30% ಇತ್ತು.)ಬಾಬ್ತುಗಳು.

ಇವು ಗಣಿಗಾರಿಕೆ ಪ್ರದೇಶಗಳ ಕಲ್ಯಾಣಕ್ಕೆ ಬಳಕೆ ಆಗದೇ ಉಳಿದಿರುವ ಬಗ್ಗೆ ಕೆಲ ಸಮಯದ ಹಿಂದೆ ನ್ಯಾಯಾಲಯದ ಬಾಗಿಲನ್ನೂ ಬಡಿಯಲಾಗಿತ್ತು.

ರಾಜರಾಮ್ ತಲ್ಲೂರ್

ಜನಗಣತಿ ಮುಂದೂಡಲು ಮತ್ತು NPR ಗಣತಿ ಕೈ ಬಿಡಲು ಒತ್ತಾಯಿಸಿ ಮನವಿ

ದೇಶದಾದ್ಯಂತ ಕರೋನಾ ವೈರಸ್ ಹಾವಳಿಯು ಮೂರನೇ ಹಂತ ತಲುಪುವ ಸಂಕಷ್ಟದಲ್ಲಿ ನಾವಿದ್ದೇವೆ. ಅದು ನಿಯಂತ್ರಣಕ್ಕೆ ಬಾರದಿದ್ದಲ್ಲಿ ನಾಲ್ಕನೇ ಹಂತಕ್ಕೆ ಸಾಗ ಬಹುದೆನ್ನಲಾಗಿದೆ. ಈ ರೀತಿಯಲ್ಲಿ ದೇಶಕ್ಕೆ ದೇಶವೇ ಸಂಕಷ್ಟಕ್ಕೆ ಹಾಗೂ ಆತಂಕಕ್ಕೆ ಸಿಲುಕುತ್ತಿರುವಾಗ ಜನಗಣತಿಯನ್ನು ಹೇಗೆ ಮುನ್ನಡೆಸುವುದು. ಆದ್ದರಿಂದ ಜನಗಣತಿಯನ್ನು ಮತ್ತು ಅದರ ಸಿದ್ಧತೆಯನ್ನು ಮುಂದೂಡಲು ವಿನಂತಿಸುವೆವು.

ಮಾತ್ರವಲ್ಲಾ, ಭಾರತದ ಜಾತ್ಯತೀತ ಪ್ರಜಾ ಸತ್ತೆಗೆ ಧಕ್ಕೆ ತರುವ ಮತ್ತು ಧರ್ಮದ ಆದಾರದಲ್ಲಿ ದೇಶವನ್ನು ಒಡೆಯುವ ಸಂಚಿನ ಭಾಗವಾಗಿ ಬಂದಿರುವ ಪೌರತ್ವ ತಿದ್ದುಪಡಿ ಕಾಯ್ದೆ – 2019 ಹಾಗೂ ಪೌರತ್ವ ತಿದ್ದುಪಡಿ ಕಾಯ್ದೆ– 2013 ರ ರೂಲ್ಸ್ ನಂಬರ್ 3,4,5,5,(a)(b) ಮತ್ತು 6 (a),(b)(c) ಇವುಗಳನ್ನು ಕೈ ಬಿಡುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು ಮತ್ತು ರಾಷ್ಟ್ರೀಯ ಪೌರತ್ವ ನೊಂದಾವಣೆ ಮಾಡುವ ರಾಷ್ಟ್ರೀಯ ಜನಸಂಖ್ಯಾ ದಾಖಲಾತಿ (NPR) ಯು ಅಗತ್ಯವಲ್ಲ.

ಇದರ ವಿರುದ್ಧ ದೇಶ ಹಾಗೂ ರಾಜ್ಯದಾದ್ಯಂತ ವ್ಯಾಪಕ ಪ್ರತಿರೋಧ ಬಂದಿದೆ. ರಾಜ್ಯದ ಬಹುತೇಕ ದಲಿತರು, ಬಡವರು, ರೈತರು ಕಾರ್ಮಿಕರು, ಹಿರಿಯ ನಾಗರೀಕರು ಅಸ್ಸಾಂ ನ ಅನುಭವದಿಂದ ಆತಂಕಿತರಾಗಿದ್ದಾರೆ. NPR ನಲ್ಲಿನ ಪ್ರಶ್ನೆಗಳು ಆನಂತರ NRC ಪಟ್ಟಿಯಲ್ಲಿ ಹೆಸರಿನ ಮುಂದೆ ಇರಬಹುದಾದ ಅನುಮಾನಾಸ್ಪದರೆಂಬ ಕಪ್ಪು ಚುಕ್ಕೆಯಿಂದ ಭೀತರಾಗಿದ್ದಾರೆ. ಬೇರೆ ದೇಶಗಳ ನಿರಾಶ್ರಿತರಿಗೆ ಪೌರತ್ವ ನೀಡುವ ಉದ್ದೇಶದಿಂದ ಜಾರಿಗೊಳಿಸಲಾಗುತ್ತಿದೆಯೆಂಬ ಈ ಕೆಲಸವು ಸಾವಿರಾರು ವರ್ಷಗಳಿಂದ ಇರುವ ಇಲ್ಲಿನ ಮೂಲ ನಿವಾಸಿಗಳನ್ನು ದೇಶ ಭ್ರಷ್ಟರನ್ನಾಗಿಸಿ ಡಿಟೆನ್ಷನ್ ಸೆಂಟರ್ ಗೆ ತಳ್ಳಲಿದೆಯೆಂಬ ಆತಂಕ ವ್ಯಾಪಕವಾಗಿದೆ. ಆದ್ದರಿಂದ ಈ ಜನವಿರೋದಿ NPR ಗಣತಿಯನ್ನು ರಾಜ್ಯದಲ್ಲಿ ಜಾರಿಗೆ ತರಬಾರದೆಂದು ಮತ್ತು ಅದನ್ನು ಕೂಡಲೇ ರದ್ದು ಪಡಿಸಬೇಕೆಂದು ಒತ್ತಾಯಿಸುವೆವು.

ಯು. ಬಸವರಾಜ
ರಾಜ್ಯ ಕಾರ್ಯದರ್ಶಿ

ಬಿಬಿಎಂಪಿ ಪುನರಚನೆ: 2015ರ ಮಸೂದೆಗೆ ಅಂಕಿತ ಪಡೆಯಿರಿ ಪ್ರತ್ಯೇಕ ಮಸೂದೆ ಹಿಂಪಡೆಯಿರಿ – ಸಿಪಿಐ(ಎಂ)

ಬೃಹತ್ ಬೆಂಗಳೂರು ಕುರಿತು ವಿಧಾನಸಭಾ ಅಧಿವೇಶನದ ಕೊನೆಯ ದಿನ ತರಾತುರಿಯಲ್ಲಿ ಮಂಡಿಸಿರುವ ಪ್ರತ್ಯೇಕ ಮಸೂದೆಯನ್ನು ಕೂಡಲೇ ಹಿಂಪಡೆಯಬೇಕು ಮತ್ತು 2015ರಲ್ಲಿ ರಾಜ್ಯ ಶಾಸನಸಭೆ ಅಂಗೀಕರಿಸಿರುವ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ತಿದ್ದುಪಡಿ ಮಸೂದೆಗೆ ಕೇಂದ್ರ ಬಿಜೆಪಿ ಸರ್ಕಾರದ ಮೇಲೆ ಒತ್ತಡ ತಂದು ಅಂಕಿತ ಪಡೆಯಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಬೆಂಗಳೂರು ದಕ್ಷಿಣ ಸಮಿತಿಯು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

2014 ರಲ್ಲಿ ಅಂದಿನ ರಾಜ್ಯ ಸರ್ಕಾರವು ನೇಮಿಸಿದ್ದ ಬಿ.ಎಸ್.ಪಾಟೀಲ್ ನೇತೃತ್ವದ ತಜ್ಞರ ಸಮಿತಿಯು ಬಿಬಿಎಂಪಿ ಯನ್ನು 5 ಚಿಕ್ಕ ಮಹಾನಗರ ಪಾಲಿಕೆಗಳನ್ನಾಗಿ ಮಾರ್ಪಡಿಸಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಗೆ ಅಗತ್ಯ ಪ್ರತ್ಯೇಕ ಶಾಸನ ರೂಪಿಸಲು ಶಿಫಾರಸ್ಸು ಮಾಡಿತ್ತು. ಅದರಂತೆ ಅಂದಿನ ರಾಜ್ಯ ಸರ್ಕಾರವು ಕೆ.ಎಂ.ಸಿ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿ ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿತ್ತು. ಅಂದು ವಿರೋಧ ಪಕ್ಷವಾಗಿದ್ದ ಬಿಜೆಪಿಯು ಅದನ್ನು ವಿರೋಧಿಸಿತ್ತು. ಆದಕಾರಣ 5 ವರ್ಷವಾದರೂ ಸಹಾ ಮಸೂದೆಗೆ ಅಂಕಿತ ಸಿಗಲೇ ಇಲ್ಲ. ಪರಿಣಾಮವಾಗಿ ಮಹಾನಗರದ ಜನತೆಯ ಚಿಕ್ಕ ಹಾಗೂ ಚೊಕ್ಕ ಆಡಳಿತದ ಕನಸು ನನಸಾಗಲೇ ಇಲ್ಲ. ಆದರೆ ಇದೀಗ ಬಿಬಿಎಂಪಿಗೆ ಪ್ರತ್ಯೇಕ ಶಾಸನವನ್ನು ತರಾತುರಿಯಲ್ಲಿ ರೂಪಿಸಿ ವಿಧಾನಸಭೆಯಲ್ಲಿ ಮಂಡಿಸಿದೆ. ತನ್ನ ಸ್ವಪಕ್ಷೀಯ ಶಾಸಕರು, ಮತ್ತು ವಿರೋಧ ಪಕ್ಷಗಳ ಶಾಸಕರ ಒತ್ತಾಯದ ಮೇರೆಗೆ ಮಸೂದೆಯನ್ನು ಸದನದ ಜಂಟಿ ಪರಿಶೀಲನ ಸಮಿತಿಗೆ ವಹಿಸಲಾಗಿದೆ, ಈ ಮಸೂದೆಯು ಬಿ.ಎಸ್.ಪಾಟೀಲ್ ನೇತೃತ್ವದ ತಜ್ಞರ ಸಮಿತಿಯ ವರದಿಯನ್ನು ಕಸದ ಬುಟ್ಟಿಗೆ ಎಸೆಯಲಿದೆ,

ವಿರೋಧ ಪಕ್ಷವಾದ ಕಾಂಗ್ರೆಸ್ ಸಹಾ ತನ್ನ ಆಡಳಿತ ಅವಧಿಯಲ್ಲಿ ರೂಪಿಸಿದ್ದ ಮಸೂದೆಯನ್ನು ಮರೆತಂತೆ ಕಾಣುತ್ತಿದೆ, ಕಲಾಪ ಸಲಹಾ ಸಮಿತಿಯ ಅನುಮೋದನೆಯನ್ನು ಪಡೆಯದ ರಾಜ್ಯ ಹಾಗೂ ಮಹಾನಗರದ ಜನತೆ ಕೊರೋನ ಭೀತಿಯಲ್ಲಿ ಲಾಕೌನ್ ನಲ್ಲಿರುವಾಗ ಇಂತಹ ಮಸೂದೆ ಮಂಡಿಸಿ ಅಂಗೀಕರಿಸಲು ಮುಂದಾಗಿರುವುದು ಬಿಜೆಪಿಯ ದುಷ್ಟತನ ತೋರುತ್ತದೆ ಎಂದು ಸಿಪಿಐ(ಎಂ) ಖಂಡಿಸಿದೆ.

ಇಂದಿರಾ ಕ್ಯಾಂಟೀನ್ ಆಹಾರ್ ವಿತರಣೆ ಸ್ಥಗಿತ :

ಬಿಜೆಪಿ ಸರ್ಕಾರದ ಆಡಳಿತ ವೈಫಲ್ಯದ ಸೂಚಕ ಕೊರೋನ ಆಪಾಯದ ಹಿನ್ನೆಲೆಯಲ್ಲಿ ಇಡೀ ರಾಜ್ಯ ಹಾಗೂ ದೇಶ ಲಾಕೌನ್ ಆಗಿರುವುದರಿಂದ ಬದುಕು ಕಳೆದುಕೊಂಡಿರುವ ಅಸಂಘಟಿಶರಿಗೆ ಆರಂಭದಲ್ಲಿ ಮೂರು ಹೊತ್ತು ಉಚಿತ ಆಹಾರ ನೀಡುವ ಕ್ರಮ ಜರುಗಿಸಿ ಒಂದೇ ದಿನದಲ್ಲಿ ಅದನ್ನು ಹಿಂಪಡೆದಿರುವ ಕ್ರಮವು ರಾಜ್ಯ ಬಿಜೆಪಿ ಸರ್ಕಾರದ ಕ್ರಿಮಿನಲ್ ಹೊಣೆಗೇಡಿತನವಾಗಿದೆ ಎಂದು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಖಂಡಿಸಿದೆ. ದಿನ ಒಂದಕ್ಕೆ ಸರಾಸರಿ 1.76 ಲಕ್ಷ ಬಡ ಜನತೆ ಪ್ರತಿನಿತ್ಯ ಬೆಂಗಳೂರಿನಲ್ಲಿ ಆಹಾರ ಸೇವಿಸುತ್ತಿದ್ದರು. 23 ಮಾರ್ಚ್ ಒಂದು ದಿನ ಲಾಕೌನ್‌ನಿಂದಾಗಿ ಆ ಸಂಖ್ಯೆ 2.5 ಲಕ್ಷಕ್ಕೆ ಏರಿತ್ತು ಎಂಬ ವರದಿಯಿದೆ, ಆಹಾರ ಪಡೆಯುವವರು ಮುಗಿಬಿದ್ದರು ಆದರಿಂದ ಸೋಷಿಯಲ್ ಡಿಸೆಂಸಿಂಗ್‌ಗೆ ತೊಡಕಾಗುತ್ತದೆ, ಕೋರೋನ ಹರಡುವಿಕೆಗೆ ಸಹಾಯವಾಗುತ್ತದೆ ಎಂಬ ಕುಂಟು ನೆಪ ನೀಡಿ ಇಂದಿರಾ ಕ್ಯಾಂಟಿನ್ ಮುಚ್ಚಿರುವುದು ಬಿಜೆಪಿ ರಾಜ್ಯ ಸರ್ಕಾರದ ಆಡಳಿತ ವೈಫಲ್ಯವನ್ನು ಎತ್ತಿ ತೋರುತ್ತದೆ,

ರಾಜ್ಯ ಸರ್ಕಾರ ಅನುದಾನ ನೀಡಿಲ್ಲ ಎಂಬ ನೆಪ ನೀಡಿ ಈ ಹಿಂದೆಯೇ ಬಿಬಿಎಂಪಿ ಯಲ್ಲಿನ ಬಿಜೆಪಿ ಆಡಳಿತ ಇಂದಿರಾ ಕ್ಯಾಂಟೀನ್ ಮುಚ್ಚಲು ಮುಂದಾಗಿತ್ತು. ರಾಜ್ಯ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಅವುಗಳನ್ನು ಮುಚ್ಚಲು ಹವಣಿಸುತ್ತಿತ್ತು. ಇದೀಗ ಕೊರೋನ ಭೀತಿಯ ನೆಪ ನೀಡಿ ತನ್ನ ರಾಜಕೀಯ ಹಿತಾಸಕ್ತಿಗೆ ಪೂರಕವಾಗಿ ಇಂದಿರಾ ಕ್ಯಾಂಟೀನ್ ಮುಚ್ಚಿ ಬಡ ಜನತೆಗೆ ಅಸಂಘಟಿತರಿಗೆ ದ್ರೋಹ ಎಸಗಿದೆ ಎಂದು ಸಿಪಿಐ(ಎಂ) ಖಂಡಿಸಿದೆ. ಕೂಡಲೇ ಇಂದಿರಾ ಕ್ಯಾಂಟಿನ್ ತೆರೆದು ಮೂರು ಹೊತ್ತು ಉಚಿತ ಆಹಾರ ಒದಗಿಸಬೇಕು ಮಾತ್ರವಲ್ಲ ಅಗತ್ಯವುಳ್ಳವರ ಮನೆಗೆ ಸರಬರಾಜು ಮಾಡಬೇಕೆಂದು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಕೆ.ಎನ್. ಉಮೇಶ್
ಕಾರ್ಯದರ್ಶಿ

ರಾಜ್ಯದ ಬಡವರ ಹಸಿವನ್ನು ಹೇಗೆ ನಿವಾರಿಸುತ್ತೀರಿ? ಮುಖ್ಯಮಂತ್ರಿಗೊಂದು ಬಹಿರಂಗ ಪ್ರಶ್ನೆ..

ಮುಖ್ಯಮಂತ್ರಿ ಗಳಿಗೆ ನೀಡುವ ಅಂತಿಮಗೊಳಿಸಲಾದ ಈ ಕೆಳಂಡ ಮನವಿಯನ್ನು ಈಗ ಮುಖ್ಯಮಂತ್ರಿ ಕಚೇರಿಗೆ ಕಳಿಸಲಾಗಿದೆ ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸರಕಾರದ ಹೆಚ್ಚುವರಿ ಮುಖ್ಯ ಪ್ರಧಾನ ಕಾರ್ಯದರ್ಶಿ ಶ್ರೀ ರವಿಕುಮಾರ್ ಅವರನ್ನು ಫೋನ್ ನಲ್ಲಿ ಸಂಪರ್ಕಿಸಿದ್ದಾಗ ನಮ್ಮ ಪ್ರಯತ್ನಕ್ಕೆ ಪ್ರಸಂಸೆ ವ್ಯಕ್ತಪಡಿಸಿದ್ದಾರೆ. ಅಲ್ಲದೆ ನೇರವಾಗಿ ಭೇಟಿ ಮಾಡಲು ಸಾಧ್ಯವಾಗದಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿ ಮುಖ್ಯ ಮಂತ್ರಿ ಕಚೇರಿಯ ಇ.ಮೇಲ್ ಕಳಿಸಿ ಎಂದು ಕೋರಿದ್ದಾರೆ. ಈ ಹಿನ್ನಲೆಯಲ್ಲಿ ನಿಮ್ಮೆಲ್ಲರ ಸಹಮತದ ಈ ಮನವಿಯನ್ನು ಅವರಿಗೆ ಕಳಿಸಲಾಗುತ್ತಿದೆ. ಬಡವರು ಹಾಗೂ ಶ್ರಮಜೀವಿಗಳ ಕುರಿತಾಗಿ ತಾವು ವ್ಯಕ್ತ ಪಡಿಸಿದ ಕಳಕಳಿಗೆ ಧನ್ಯವಾದಗಳು

ಕೊನೆಯದಾಗಿ ನಾವು ನಮ್ಮ ಕೈಲಾದ ಸಹಾಯವನ್ನು ರಾಜ್ಯದ ಅಸಂಘಟಿತ ಕಾರ್ಮಿಕರಿಗಾಗಿ ಮಾಡೋಣ ಎನ್ನುವ ಪ್ರಯತ್ನ ಗಳು ಈಗಾಗಲೇ ಆರಂಭಗೊಂಡಿವೆ ಇದಕ್ಕೂ ತಾವು ತಮ್ಮ ಕೈಲಾದ ಸಹಾಯವನ್ನು ಹಣ ಹಾಗೂ ಪದಾರ್ಥಗಳ ರೂಪದಲ್ಲಿ ಮಾಡಬಹುದು ಇದಕ್ಕೂ ತಮ್ಮ ಸಹಕಾರ ಕೋರುತ್ತೇವೆ.

ಸಹಮತ ವ್ಯಕ್ತಪಡಿಸಿದವರ ಪರವಾಗಿ
ಕೆ.ಮಹಾಂತೇಶ

ಗೆ,

ದಿನಾಂಕ :25–03–2020

ಮಾನ್ಯ ಮುಖ್ಯಮಂತ್ರಿ
ಶ್ರೀ ಯಡಿಯೂರಪ್ಪನವರಿಗೆ
ಒಂದು ಬಹಿರಂಗ ಪತ್ರ

ಮಾನ್ಯರೇ.

ವಿಷಯ: ಕರೋನಾ ಭೀತಿಯಿಂದ ಸಂಕಷ್ಟಕ್ಕೆ ಒಳಗಾಗಿರುವ ಬಡ ಅಸಂಘಟಿತ ಜನರ ಹೊಟ್ಟೆ ತುಂಬಿಸಲು ಈ ಕೆಳಕಂಡ ತುರ್ತು ಕಾರ್ಯಕ್ರಮಗಳಿಗಾಗಿ ಆಗ್ರಹಿಸಿ

ರಾಜ್ಯದ ಹಿರಿಯ ಚಿಂತಕರು, ಬರಹಗಾರರು, ಕಲಾವಿದರು, ರಂಗಕರ್ಮಿಗಳು, ಹಿರಿಯ ಪತ್ರಕರ್ತರು, ವಕೀಲರು, ಅದ್ಯಾಪಕರು, ಕಾರ್ಮಿಕ, ರೈತ ಸಂಘಗಳ ಧುರೀಣರು, ಸಾಮಾಜಿಕ ಕಾರ್ಯಕರ್ತರು, ಮಹಿಳಾ ವಿದ್ಯಾರ್ಥಿ ಯುವಜನ ಸಂಘಟನೆಗಳ ಮುಖಂಡರುಗಳು ಸಹಮತದಿಂದ ರೂಪಿಸಿ ಸಲ್ಲಿಸಲಾಗುತ್ತಿರುವ ಮನವಿ

ಮಾನ್ಯ ಯಡಿಯೂರಪ್ಪನವರೇ,

ಇಂದಿರಾ ಕ್ಯಾಂಟೀನ್ ಮೂಲಕ ಬಡವರಿಗೆ ಊಟ ಕೊಡಲು ತಮ್ಮ ಸರಕಾರ ತೀರ್ಮಾನಿಸಿದ್ದ ನಿರ್ಧಾರವನ್ನು ವಾಪಸ್ ಪಡೆದಿರುವುದಾಗಿ ಮಾಧ್ಯಮಗಳಲ್ಲಿ ಪ್ರಕಟಗೊಂಡಿದೆ.ರಾಜ್ಯದ ಜನರು ಜೀವನ ಮತ್ತು ಅಭಿವೃದ್ಧಿ ದೃಷ್ಟಿಯಿಂದಲೂ ನಿಮ್ಮ ನಿರ್ಧಾರ ಸರಿಯಲ್ಲ ಎನ್ನುವದು ನಮ್ಮ ಭಾವನೆ.

ರಾಜ್ಯದಲ್ಲಿ ಗ್ರಾಮೀಣ ಪ್ರದೇಶದ ಕೃಷಿಕೂಲಿಕಾರರು ಸೇರಿ 3 ಕೋಟಿ ಕಾರ್ಮಿಕರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅದರಲ್ಲಿ ಬಹುಮುಖ್ಯವಾಗಿ ಕಟ್ಟಡ ನಿರ್ಮಾಣ ವಲಯದ ಕಾರ್ಮಿಕರು, ಎಪಿಎಂಸಿ ಮಾರುಕಟ್ಟೆ ಸೇರಿ ವಿವಿಧ ನಗರ ಪ್ರದೇಶಗಳಲ್ಲಿ ಹಮಾಲಿ ಕಾರ್ಮಿಕರು ಆಟೋ, ಟ್ಯಾಕ್ಸಿ ಚಾಲಕರು, ಬೀದಿ ಬದಿ, ಮನೆಕೆಲಸ, ಬೀಡಿ, ಅಗರ ಬತ್ತಿ, ಮೊದಲಾದ ಕಾರ್ಮಿಕರು ಅಂಗನವಾಡಿ, ಆಶಾ, ಬಿಸಿಯೂಟ ಹೀಗೆ ವಿವಿಧ ಸರಕಾರ ಹಾಗೂ ಖಾಸಗಿ ವಲಯದ ಹತ್ತಾರು ವಿಭಾಗಗಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಇದ್ದಕ್ಕಿದ್ದಂತೆ ದಾಳಿ ನಡೆಸಿರುವ ಕರೋನಾ ವೈರಸ್ ಈ ಕೋಟ್ಯಾಂತರ ಶ್ರಮಜೀವಿಗಳ ಉದ್ಯೋಗ ಮತ್ತು ಅನ್ನ ಎರಡನ್ನೂ ಕಸಿದುಕೊಂಡಿರುವ ಬಗ್ಗೆ ಈಗಾಗಲೇ ಮಾಧ್ಯಮಗಳು ಬೆಳಕು ಚೆಲ್ಲಿ ವಿಶೇಷ ವರದಿಗಳನ್ನು ಪತ್ರಿಕೆ ಗಳಲ್ಲಿ ಪ್ರಕಟ ಮಾಡಿವೆ. ಹಾಗೂ ಸುದ್ದಿವಾಹಿನಿಗಳಲ್ಲಿ ಕೂಡ ವಿಶೇಷ ವರದಿಗಳನ್ನು ಬಿತ್ತರಿಸಿವೆ.

ತಮ್ಮ ಸರಕಾರದ ಆಹಾರ ಸರಬರಾಜು ಇಲಾಖಾ ಸಚಿವರಾದ ಶ್ರೀ ಗೋಪಾಲಯ್ಯ ನವರು ಸೋಮವಾರದಿಂದ ಎಲ್ಲರಿಗೂ ಎರಡು ತಿಂಗಳ ರೇಷನ್ ನೀಡುವುದಾಗಿ ಪ್ರಕಟಿಸಿದ್ದರು. ಆದರೆ ಇದುವರೆಗೂ ಎಲ್ಲೂ ಸರಕಾರಿ ರೇಷನ್ ಅಂಗಡಿಗಳು ಬಾಗಿಲು ತೆರೆದಿಲ್ಲ. ಈಗ ಏಪ್ರಿಲ್ ಮೊದಲವಾರದಿಂದ ಎಂದು ಘೋಷಿಸಲಾಗಿದೆ ಮನೆಮಂದಿಯಲ್ಲ ಈಗ ಕೂತು ತಿನ್ನುವ ಹೊತ್ತು ಬಂದಿದೆ ಇಂತಹ ಸಮಯದಲ್ಲಿ ಅಗತ್ಯ ಸಾಮಾಗ್ರಿಗಳ ತುರ್ತು ಅಗತ್ಯವಿದೆ.

ಈಗ ನೀವು ಇಂದಿರಾ ಕ್ಯಾಂಟೀನ್‌ನಲ್ಲಿ ಊಟ ವಿತರಿಸಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿದ್ದೀರಿ.

ಹಾಗಾದರೆ ಈ ಬಡಜನರ ಹಸಿವನ್ನು ನಿವಾರಿಸಲು ನಿಮ್ಮ ಸರಕಾರ ಕೈಗೊಂಡ ನಿರ್ದಿಷ್ಟ ಯೋಜನೆ ಮತ್ತು ಕಾರ್ಯಕ್ರಮಗಳೇನು? ಇದನ್ನು ನೀವು ಕೂಡಲೇ ಸ್ಪಷ್ಟಪಡಿಸಬೇಕಾಗುತ್ತದೆ ಈಗಂತೂ ಮತ್ತೆ ಮಾನ್ಯ ಪ್ರಧಾನ ಮಂತ್ರಿಗಳು ಏಪ್ರಿಲ್ 14 ರವರೆಗೂ ಕರ್ಫ್ಯೂ ಘೋಷಿಸಿದ್ದಾರೆ ಆದರೆ ಯಾವುದೇ ಕಲ್ಯಾಣ ಕಾರ್ಯಕ್ರಮಗಳನ್ನು ಬಡವರು ಮತ್ತು ಅಸಂಘಟಿತರಿಗೆ ಅವರು ಪ್ರಕಟಿಸದಿರುವುದು ಖೇಧಕರ 21 ದಿನಗಳ ಕರ್ಫ್ಯೂ ಎಂದರೆ ಶ್ರಮಜೀವಿಗಳ ಪಾಲಿಗೆ ಅದೊಂದು ದೀರ್ಘಾವಧಿ. ಇಂತಹ ಸಂಕಷ್ಟದ ಸಮಯದಲ್ಲಿ ಪ್ರತಿಯೊಂದು ಸರಕಾರಗಳು ಜನತೆಯ ಬದುಕನ್ನು ಸಂರಕ್ಷಣೆ ಮಾಡುವ ಕರ್ತವ್ಯ ವನ್ನು ಪ್ರಜ್ಞಾಪೂರ್ವಕವಾಗಿ ನಿರ್ವಹಿಸಲೇಬೇಕು ಕರೋನಾ ವೈರಸ್ ಸೋಂಕನ್ನು ನಿಯಂತ್ರಿಸುವುದೆಂದರೆ ಬಡಜನರಿಗೆ ಅಗತ್ಯವಿರುವ ಪೌಷ್ಟಿಕಾಹಾರ ನೀಡಿ ಅವರಿಗೆ ಸೋಂಕು ತಗುಲದಂತೆ ಕ್ರಮ ವಹಿಸುವುದು ಕೂಡ ಒಂದು ಪ್ರಮುಖ ಹಾಗೂ ಆದ್ಯತೆಯ ಕೆಲಸವಾಗಬೇಕು ಇದರಲ್ಲಿ ನಾವು ವಿಫಲವಾದಲ್ಲಿ ಹಸಿವಿನಿಂದ ನೂರಾರು ಜನರು ಸಾಯಬಹುದಾದ ಸ್ಥಿತಿಯನ್ನು ಕಣ್ಣಾರೆ ನೋಡಬೇಕಾದ ಪರಿಸ್ಥಿತಿ ಬರಬಹುದು.

ಶ್ರೀಮಂತರು ಹಾಗೂ ಮಧ್ಯಮ ವರ್ಗದ ಜನರು ಹೇಗೋ ಆನ್ ಲೈನ್ ಹಾಗೂ ಹೋಟೆಲ್ ಗಳನ್ನು ಬಳಸಿ ಆಹಾರ ಧಾನ್ಯ ಊಟ ತರಿಸಿ ಬದುಕುತ್ತಾರೆ ಅಲ್ಲದೆ ಅದರಲ್ಲಿ ಕೆಲವರಿಗೆ ಮನೆಯಿಂದಲೂ ಕೆಲಸ ಮಾಡುವ ಅವಕಾಶ ಇರುವುದರಿಂದ ಜೀವನ ಮಾಡಲು ಆರ್ಥಿಕ ಸಮಸ್ಯೆ ಕೂಡ ಅಷ್ಟೊಂದು ಕಾಡದು. ಆದರೆ ಲಕ್ಷಾಂತರ ಸಂಖ್ಯೆಯಲ್ಲಿರುವ ಅಸಂಘಟಿತ ಶ್ರಮಜೀವಗಳ ಬದುಕಿನ ಮೇಲೆ ಈಗಾಗಲೇ ಕರೋನಾ ಪರಿಣಾಮ ಗಾಢವಾಗಿ ತಟ್ಟಿದೆ. ಇನ್ನು ಮುಂದೆಯೂ ಅದು ಇನ್ನಷ್ಟು ಬೇಸಿಗೆಯ ಬಿಸಿಲಿಗಿಂತಲೂ ತೀವ್ರಗೊಳ್ಳಲಿದೆ.

ಬರಗಾಲದಲ್ಲಿ ಹಸಿವು ಜಾಸ್ತಿ ಎನ್ನುವಂತೆ ಬಡವರು ತಮ್ಮ ದುಡಿತದ ಬಹುಪಾಲು ಆದಾಯವನ್ನು ಊಟಕ್ಕಾಗಿಯೇ ವಿನಿಯೋಗಿಸುತ್ತಿರುವುದು ವಾಸ್ತವ. ಆದರೆ ಈಗ ದುಡಿಮೆ ಎನ್ನುವ ಆದಾಯವೇ ನಿಂತು ಹೋಗಿದೆ. ಇರೋ ಬರೋ ಹಣ ಖರ್ಚು ಮಾಡಿ ಸಾಲ ಶೂಲ ಮಾಡಿ ಇನ್ನೊಂದು ವಾರ ಅವರು ಬದುಕು ದೂಡಬಹುದು ಆದರೆ ಮುಂದೇನೂ?

ಬಡವರ ಇಂತಹ ಹಸಿವನ್ನೇ ಕುರಿತೇ ಕನ್ನಡದ ಖ್ಯಾತ ಕವಿ ದ.ರಾ ಬೇಂದ್ರೇ ದೇವರನ್ನು ಕುರಿತು ಹೀಗೊಂದು ಕವನ ಬರೆದಿದ್ದರು.

ದೇವರೆ ದೇವರೇ
ಎಂತಹ ಕೆಲಸ ಮಾಡಿದೆ
ಹುಟ್ಟಿಸುವಾಗ ಅನ್ನ ಒಳಗಿಟ್ಟು
ಹಸಿವನ್ನಾ ಹೊರಗಿಡಬಾರದಿತ್ತೇ?

ಈ ನಾಲ್ಕು ಕವನದ ಸಾಲುಗಳೇ ಬಡವರು ಹಾಗೂ ಶ್ರಮಜೀವಿಗಳ ಹಸಿವಿನ ಚಿತ್ರಣವನ್ನು



ಹಾಗೂ ಅವರಿಗೆ ಅನ್ನದ ಅವಶ್ಯಕತೆಯನ್ನು ಪರಿಣಾಮಕಾರಿಯಾಗಿ ನಮಗೆಲ್ಲ ಮನಗಾಣಿಸುತ್ತಿವೆ.

ನಿಮ್ಮ ಸರಕಾರ ಕರೋನಾ ವೈರಸ್ ಸೋಂಕು ಹರಡದಂತೆ ಕೈಗೊಂಡಿರುವ ಕ್ರಮಗಳನ್ನು ನಾವೆಲ್ಲ ಮನಃಪೂರ್ವಕವಾಗಿ ಒಪ್ಪುತ್ತೇವೆ ಮತ್ತು ಈ ಮಹಾಮಾರಿ ವಿರುದ್ಧ ಹೋರಾಟದಲ್ಲಿ ನಿಮ್ಮ ಜೊತೆ ಕೈ ಜೋಡಿಸಿದ್ದೇವೆ ಕೂಡ.

ಆದರೆ ರಾಜ್ಯದಲ್ಲಿರುವ ಲಕ್ಷಾಂತರ ಬಡವರು ವಿಶೇಷವಾಗಿ ಒಂದು ನಿಗದಿತ ಆದಾಯದಿಂದ ವಂಚಿತರಾಗಿರುವ ಅಸಂಘಟಿತ ವಲಯದ ಕಾರ್ಮಿಕರು ಹಾಗೂ ಅವರ ಕುಟುಂಬಗಳನ್ನು ಹಸಿವುನಿಂದ ಪಾರು ಮಾಡಲು ಕೆಳಕಂಡ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕೆಂದು ಆಗ್ರಹಪೂರ್ವಕವಾಗಿ ವಿನಂತಿಸುತ್ತೇವೆ.

ತುರ್ತಾದ ಹಕ್ಕೋತ್ತಾಯಗಳು

1. ಎಲ್ಲಾ ಅಸಂಘಟಿತ ಕಾರ್ಮಿಕ ಕುಟುಂಬಗಳಿಗೆ ಆಯಾ ಜಿಲ್ಲಾಧಿಕಾರಿಗಳ ಮೂಲಕ ಕೂಡಲೇ ಅವರ ಬ್ಯಾಂಕ್ ಖಾತೆಗೆ ರೂ. 5000 ಹಣ ಜಮಾ ಮಾಡಬೇಕು ಈಗಾಗಲೇ ಕಟ್ಟಡ ನಿರ್ಮಾ ಕಾರ್ಮಿಕರಿಗೆ ತಾವು ಮಂಡಳಿಯ ಹಣದಿಂದ ಮಾಸಿಕ ರೂ. 1000 ನೆರವನ್ನು ಘೋಷಿಸಿರುವುದು ಸ್ವಾಗತಾರ್ಹ ಆದರೆ ಅದನ್ನು ಕೂಡಲೇ ರೂ. 3000 ಕ್ಕೆ ಹೆಚ್ಚಿಸಲು ಕ್ರಮವಹಿಸಬೇಕು. ಇತರೆ ಅಸಂಘಟಿತ ಕಾರ್ಮಿಕರಿಗೂ ಇದೇ ರೀತಿಯ ಆರ್ಥಿಕ ನೆರವು ಸರಕಾರದ ಅನುದಾನದಲ್ಲಿ ಕೂಡಲೇ ಪ್ರಕಟಿಸಬೇಕು.
2. ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಮತ್ತು ಕೃಷಿಕೂಲಿಕಾರರಿಗೆ BPL-APL ಎನ್ನುವ ತಾರತಮ್ಯ ವಿಲ್ಲದಂತೆ ಕೇರಳದ ಮಾದರಿಯಲ್ಲಿ 16 ಅಗತ್ಯ ಆಹಾರ ಧಾನ್ಯಗಳ ಕಿಟ್ ಗಳನ್ನು ಅವರ ಮನೆಗಳಿಗೆ ತಲುಪಿಸಬೇಕು. ಮತ್ತು ವಾರಕ್ಕೊಮ್ಮೆ ತರಕಾರಿ ಹಾಗೂ ಹಣ್ಣುಗಳನ್ನು ನೀಡಬೇಕು ಜೊತೆಗೆ ರೋಗ ನಿಯಂತ್ರಕ್ಕಾಗಿ ಎಲ್ಲಾ ಕುಟುಂಬಗಳಿಗೆ ಅಗತ್ಯವಿರುವ ಶಾನೀಟೈಜರ್ (Sanitizers) ಗಳನ್ನು ಉಚಿತವಾಗಿ ಕೂಡಲೇ ವಿತರಿಸಬೇಕು
3. ಬಹುಪಾಲು ಈ ಶ್ರಮಜೀವಿಗಳು ಸಾಲದಲ್ಲೆ ಬದುಕು ಸಾಗಿಸುವಂತಹವರು. ಹಾಗಾಗಿ ಸಹಕಾರ ಸಂಘ, ಬ್ಯಾಂಕ್ ಹಾಗೂ ವಿವಿಧ ಸ್ವಸಹಾಯ ಸಂಘಗಳಿಂದ ಪಡೆದಿರುವ ಸಾಲಗಳ ಕಂತುಗಳು ಹಾಗೂ ನೀರು, ವಿದ್ಯುತ್ ಬಿಲ್ಲುಗಳ ಪಾವತಿಗೂ ಮೂರು ತಿಂಗಳ ಸಮಯ ವಿಸ್ತರಿಸಬೇಕು.
4. ಬಡವರು ಮತ್ತು ಅಸಂಘಟಿತ ಕಾರ್ಮಿಕರು ಹಾಗೂ ಬಡವರ ಮನೆಗಳಲ್ಲಿ ಇರುವ ಮತ್ತು ಈ ಕರೋನಾ ವೈರಸ್ ದಾಳಿಗೆ ಸಿಲುಕುವ ಸಾಧ್ಯತೆ ಇರುವ 60 ವರ್ಷ ದಾಟಿದ ಹಾಗೂ 10 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಹಾಲು, ಮೊಳಕೆ ಕಾಳು ಮೊದಲಾದ ಪೌಷ್ಟಿಕಾಂಶ ಆಹಾರ ನೀಡಲು ಕ್ರಮವಹಿಸಬೇಕು
5. ಈ ಕರೋನಾ ಸೋಂಕು ನಿಯಂತ್ರಣ ಕ್ಕಾಗಿ ಹಗಲಿರುಳು ದುಡಿಯುತ್ತಿರುವ ಆರೋಗ್ಯ ಹಾಗೂ ಪಂಚಾಯತ್ ರಾಜ್, ಮಹಿಳಾ ಮಕ್ಕಳ ಇಲಾಖೆ, ಶಿಕ್ಷಣ ಕಂದಾಯ ಇಲಾಖೆ ಮಹಾನಗರ, ನಗರ ಪಾಲಿಕೆ ಪುರಸಭೆ ಮೊದಲಾದ ಕಡೆಗಳಲ್ಲಿ ಗುತ್ತಿಗೆ ಹೊರಗುತ್ತಿಗೆ ಆಧಾರದಲ್ಲಿ ಸಾವಿರಾರು ವೈಧ್ಯರು, ಅಧಿಕಾರಿಗಳು ಹಾಗೂ ನೌಕರರು ದುಡಿಯುತ್ತಿದ್ದಾರೆ. ಅವರಿಗೆಲ್ಲಾ ಹಲವು ತಿಂಗಳುಗಳ ಸಂಬಳವೇ ಬಂದಿಲ್ಲ ಕೂಡಲೇ ತಮ್ಮ ಸರಕಾರ ಅವರಿಗೆ ಬಾಕಿ ಸಂಬಳದ ಜೊತಗೆ ವಿಶೇಷ ಭತ್ಯೆಯನ್ನು ಪ್ರಕಟಿಸಿ ಅವರು ಈ ನಾಡಿಗೆ ಸಲ್ಲಿಸುತ್ತಿರುವ ಸೇವೆಯನ್ನು ಗೌರವಿಸಬೇಕು
6. ರಾಜ್ಯದಲ್ಲಿ ವಸತಿ ರಹಿತರು ಸಾವಿರಾರು ಸಂಖ್ಯೆಯಲ್ಲಿ ಬೀದಿಗಳಲ್ಲಿ ವಾಸಿಸುತ್ತಿದ್ದಾರೆ. ಅಂತಹವರನ್ನು ಸಮೀಪದ ಶಾಲೆ ಮತ್ತು ಕಲ್ಯಾಣ ಮಂಟಪಗಳಿಗೆ ಸ್ಥಳಾಂತರಿಸಿ ಅವರಿಗೆ ಈ ಕರೋನಾ ವೈರಸ್ ಹರಡದಂತೆ ರಕ್ಷಣೆ ಒದಗಿಸಬೇಕು ಹಾಗೂ ಅವರಿಗೆ ಅಗತ್ಯ ಊಟ ಅಥವಾ ಆಹಾರ ಸಾಮಾಗ್ರಿಗಳನ್ನು ಆಯಾ ಜಿಲ್ಲಾ ಡಳಿತದ ಮೂಲಕ ತಲುಪಿಸುವಂತಾಗಬೇಕು.

ಮೇಲ್ಕಂಡ ಅಂಶಗಳ ಕುರಿತು ಅಗತ್ಯ ಕ್ರಮ ವಹಿಸುತ್ತೀರೆಂದು ಭಾವಿಸುತ್ತೇವೆ.

ತಮ್ಮ ವಿಶ್ವಾಸಿಗಳು

ಡಾ ಜಿ.ರಾಮಕೃಷ್ಣ (ಜಿ.ಆರ್) ಬೆಂಗಳೂರು, ಚಿದಂಬರ್ ರಾವ್ ಜಂಬೆ ರಂಗ ನಿರ್ದೇಶಕರು, ರಹಮತ್ ತರಿಕೆರೆ ಚಿಂತಕರು ಹಂಪಿ ವಿವಿ, ಕಾತ್ಯಾಯಿನಿ ಚಾಮರಾಜ್ ಸಿವಿಕ್ ಬೆಂಗಳೂರು, ರೇಣುಕಾ ನಿಡುಗುಂದಿ ಬರಹಗಾರರು ನವದಹೆಲಿ, ಡಾ. ಡಿ.ಎಸ್ ಚೌಗಲೆ ನಾಟಕಕಾರ ಬೆಳಗಾವಿ, ರಂಜಾನ್ ದರ್ಗಾ ಹಿರಿಯ ಪತ್ರಕರ್ತರು, ಸನತ್ ಕುಮಾರ್ ಬೆಳಗಲಿ ಹಿರಿಯ ಪತ್ರಕರ್ತರು, ದಿನೇಶ ಅಮ್ಮಿನಮಟ್ಟು ಹಿರಿಯ ಪತ್ರಕರ್ತರು, ಆರ್.ಜಿ. ಹಳ್ಳಿ ನಾಗರಾಜ್ ಹಿರಿಯ ಪತ್ರಕರ್ತರು, ಶಿವ ಸುಂದರ್ ಚಿಂತಕರು ಅಂಕಣಕಾರರು, ಹಸನ್ ನಯೀ ಸುರಕೋಡ ಬರಹಗಾರರು ರಾಮದುರ್ಗ,

ಪುಟ 14 ಕ್ಕೆ



ಪ್ರೊ. ಟಿ.ಆರ್. ಚಂದ್ರಶೇಖರ

ಆರ್ಥಿಕ ಕುಸಿತ ಮತ್ತು ಕೋವಿಡ್ ಮಹಾದುರಂತಗಳ ಮಾರಣಾಂತಿಕ ಪರಿಣಾಮಗಳಿಂದ ಕೂಲಿಕಾರರ ಬದುಕನ್ನು ಸಂರಕ್ಷಿಸುವ ಬಗ್ಗೆ ಕರ್ನಾಟಕ ಸರ್ಕಾರವು ಜರೂರಾಗಿ ಪ್ಯಾಕೇಜ್ ಪ್ರಕಟಿಸಬೇಕು. ನಗರ ಪ್ರದೇಶಗಳಿಗೆ ಅಪಾರ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶದಿಂದ ಕೂಲಿಕಾರರು ಬದುಕನ್ನು ಅರಸಿಕೊಂಡು ವಲಸೆ ಬರುತ್ತಿದ್ದಾರೆ. ಇವರ ಬದುಕನ್ನು ಭದ್ರಗೊಳಿಸುವುದಕ್ಕೆ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿರುವಂತೆ (ಮನರೇಗ)ಇಲ್ಲಿಯೂ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೊಳಿಸಬೇಕು. ಕನಿಷ್ಟ ರೂ. 500 ದಿನಗೂಲಿಯಲ್ಲಿ ವಾರ್ಷಿಕ 100 ದಿನಗಳ ಕೂಲಿ ಕೆಲಸವನ್ನು ಇವರಿಗೆ ನೀಡುವಂತಾಗಬೇಕು.


ಆರ್ಥಿಕ ಅಸ್ವಸ್ಥತೆ ಮತ್ತು ಕೋವಿಡ್ ಮಹಾರೋಗ

ನಮ್ಮ ಆರ್ಥಿಕತೆಯು ಕಳೆದ ಎರಡು ವರ್ಷಗಳಿಂದ ನೆಲಕಚ್ಚಿದೆ. ಯಾವುದೇ ಅಭಿವೃದ್ಧಿ ಸೂಚಿ ತೆಗೆದುಕೊಂಡರೂ ಅಲ್ಲಿ ಆರ್ಥಿಕ ಮಹಾಕುಸಿತ ಕಣ್ಣಿಗೆ ರಾಚುತ್ತದೆ. ಜಿಡಿಪಿ ಕುಸಿತ ಮುಂದುವರಿದಿದೆ. ಜನರ ಮಾಸಿಕ ತಲಾ ಅನುಭೋಗ ವೆಚ್ಚದಲ್ಲಿ ಕುಸಿತ ದಾಖಲಾಗಿದೆ. ಇಂದಿನ ನಿರುದ್ಯೋಗ ಪ್ರಮಾಣ ಕಳೆದ 40 ವರ್ಷಗಳಲ್ಲಿ ಅತ್ಯಧಿಕವೆಂದು ಹೇಳಲಾಗುತ್ತಿದೆ. ಈ ಆರ್ಥಿಕ ಮಹಾಅಸ್ವಸ್ಥತೆಯನ್ನು ಮತ್ತಷ್ಟು ಉಲ್ಬಣಗೊಳಿಸುವ ರೀತಿಯಲ್ಲಿ ಕೋವಿಡ್ ಮಹಾರೋಗ ದೇಶದ ಮೇಲೆ ಬರಸಿಡಲಿನಂತೆ ಅಪ್ಪಳಿಸಿದೆ. ಈ ಮಹಾರೋಗ 2020ರ ಮಾರ್ಚ್ ತಿಂಗಳಲ್ಲಿ ದೇಶವನ್ನು ಅಪ್ಪಳಿಸಿತು. ಆದರೆ ನಮ್ಮ ಆರ್ಥಿಕತೆ ಮತ್ತು ಪ್ರಮುಖವಾಗಿ ಆರ್ಥಿಕ ನಿರ್ವಹಣೆಯು 2018–19ರಲ್ಲಿಯೇ ದಾರಿತಪ್ಪಿತ್ತು. ಆರ್ಥಿಕ ನಿರ್ವಹಣೆಯ ವೈಫಲ್ಯದಿಂದಾಗಿ 2019–2020ರಲ್ಲಿ ಆರ್ಥಿಕ ಕುಸಿತವು ಮತ್ತಷ್ಟು ಉಲ್ಬಣಕ್ಕೆ ಒಳಗಾಯಿತು. ಆರ್ಥಿಕ ಕುಸಿತವನ್ನು ಸರ್ಕಾರ ಒಪ್ಪಲು ಸಿದ್ದವಿಲ್ಲದಿದ್ದರೂ 2020–2021ರ ಬಜೆಟ್ಟಿನ ಅಂಕಿಸಂಖ್ಯೆಗಳು ಕುಸಿತದ ವಿರಾಟ್ ರೂಪವನ್ನು ಬಹಿರಂಗಪಡಿಸಿದವು.

ಆರ್ಥಿಕ ಅಸ್ವಸ್ಥತೆ ಮತ್ತು ಕೋವಿಡ್ ಮಹಾರೋಗಗಳಿಂದ ನಮ್ಮ ಆರ್ಥಿಕತೆಯಲ್ಲಿ ದುಡಿಯುವ ವರ್ಗದ ಬದುಕು ಮೂರಾಬಟ್ಟೆಯಾಗಿದೆ. ಅಮರ್ತ್ಯ ಸೇನ್ ಪ್ರಕಾರ ನಿರುದ್ಯೋಗ ಎನ್ನುವುದು ಕೆಲಸವಿಲ್ಲದ ಸ್ಥಿತಿಯಲ್ಲ. ಏಕೆಂದರೆ ಯಾರೂ, ಅದರಲ್ಲೂ ಬಡವರು ದುಡಿಮೆಯಿಲ್ಲದೆ ಮನೆಯಲ್ಲಿ ಸುಮ್ಮನೆ ಕೂರುವುದು ಸಾಧ್ಯವಿಲ್ಲ. ಎರಡೊತ್ತು ಊಟಕ್ಕಾಗಿ ಕನಿಷ್ಟ ಕೂಲಿಗೆ, ತಮಗೆ ಇಷ್ಟವಿಲ್ಲದಿದ್ದರೂ 'ಯೋಗ್ಯ' ಎಂದು ಕರೆಯಲು ಸಾಧ್ಯವಿಲ್ಲದ ಉದ್ಯೋಗಗಳನ್ನು ಮಾಡಲು ತೊಡಗುತ್ತಾರೆ. ಕೇಂದ್ರ ಸರ್ಕಾರವಾಗಲಿ ಅಥವಾ ಕರ್ನಾಟಕ ಸರ್ಕಾರವಾಗಲಿ ಟಿವಿಗಳಲ್ಲಿ ಕೋವಿಡ್ ಬಗ್ಗೆ ಎಚ್ಚರಿಕೆಯ ಭಾಷಣ ಮಾಡುವುದನ್ನು ಬಿಟ್ಟರೆ ದಿನಗೂಲಿ ದುಡಿಮೆಗಾರರು (51.65 ಲಕ್ಷ), ಬಡವರು(ಎಮ್‌ಪಿಐ – ತಲೆ ಏಣಿಕೆ 135 ಲಕ್ಷ. ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ 2015)), 19.65 ಲಕ್ಷ ಮಹಿಳೆಯರು ಮುಖ್ಯಸ್ಥರಾಗಿರುವ ಕುಟುಂಬಗಳು, ದಲಿತರು(20.80 ಲಕ್ಷ ದಿನಗೂಲಿಗಳು), ಆದಿವಾಸಿಗಳು(9.10 ಲಕ್ಷ ದಿನಗೂಲಿಗಳು) 'ಲಾಕ್ ಡೌನ್' ಸ್ಥಿತಿಯಲ್ಲಿ ಹೇಗೆ ಬದುಕು ನಿರ್ವಹಿಸುತ್ತಾರೆ ಎಂಬುದರ ಬಗ್ಗೆ ಚಕಾರವೆತ್ತುತ್ತಿಲ್ಲ (ಮೂಲ. ಜನಗಣತಿ 2011). ಕಳೆದ ವರ್ಷ ಕೇಂದ್ರವು ಉದ್ದಿಮೆಗಳು ಸಂಕಷ್ಟದಲ್ಲಿವೆಯೆಂದು ರೂ. 1.45 ಲಕ್ಷ ಕೋಟಿ ತೆರಿಗೆ ವಿನಾಯಿತಿ ಘೋಷಿಸಿತು. ಪ್ರಸಕ್ತ ಬಜೆಟ್ಟಿನಲ್ಲಿ ಸುಮಾರು ರೂ 65 ಸಾವಿರ ಕೋಟಿ ವಿನಾಯಿತಿಯನ್ನು ಉಳ್ಳವರಿಗೆ ನೀಡಿದೆ. ಆದರೆ ಕೋವಿಡ್ ಮಹಾರೋಗದಿಂದಾಗಿ ಕೋಟ್ಯಾಂತರ ದಿನಗೂಲಿಗಳ ಬದುಕು ಚಿಂತಾಜನಕವಾಗಿರುವಾಗ ಅವರ ಬದುಕನ್ನು ಸಂರಕ್ಷಿಸುವ ಬಗ್ಗೆ ಸರ್ಕಾರಕ್ಕೆ ಚಿಂತೆಯೇ ಇರುವಂತೆ ಕಾಣುವುದಿಲ್ಲ.

ಕೋವಿಡ್‌ನಿಂದಾಗಿ ಬೀದಿಗೂ ಬೀಳಲು ಸಾಧ್ಯವಿಲ್ಲದೆ ಮನೆಗಳಲ್ಲಿಯೇ ಹಸಿವಿನಿಂದ ನರಳುತ್ತಿರುವ ದಿನಗೂಲಿ ದುಡಿಮೆಗಾರರಿಗೆ ಪ್ಯಾಕೇಜ್ ಏಕಿಲ್ಲ? (ಇವರನ್ನು ಬೀದಿಗೆ ಬಿದ್ದಿದ್ದಾರೆ ಎನ್ನುವಂತಿಲ್ಲ. ಏಕೆಂದರೆ ಬೀದಿಗೆ ಬೀಳಲೂ ಅನುಮತಿಯಿಲ್ಲ). ಉದ್ದಿಮೆಗಳಿಗೆ ಜರೂರು ಪ್ಯಾಕೇಜ್ ಪ್ರಕಟಿಸುವ ಕೇಂದ್ರ ಕೂಲಿಕಾರರಿಗೆ ಏಕೆ ಪ್ಯಾಕೇಜ್ ಪ್ರಕಟಿಸಲು ಹಿಂದೇಟು ಹಾಕುತ್ತಿದೆ? ಜನತಾ ಕರ್ಫ್ಯೂ ಸರಿ. ಅದರ ವಿಜಯೋತ್ಸವವೂ ಸರಿ. ಆದರೆ ಇದರಿಂದ ದುಡಿಮೆಯೇ ಇಲ್ಲದಿದ್ದಾಗ ಇಷ್ಟೊಂದು ದುಡಿಮೆಗಾರರು ಹೇಗೆ ಬದುಕಬೇಕು? ಈಗಾಗಲೆ ಉದ್ದಿಮೆಗಾರರು ಜಿಡಿಪಿಯ ಶೇ.2 ರಷ್ಟನ್ನು, ಅಂದರೆ ರೂ. 2 ಲಕ್ಷ ಕೋಟಿಯ ಪ್ಯಾಕೇಜ್ ಪ್ರಕಟಿಸಬೇಕೆಂದು ಕೇಂದ್ರದ ಮೇಲೆ ಒತ್ತಡ ಹೇರುತ್ತಿದ್ದಾರೆ. ಇದು ಸರಿ. ಒಪ್ಪೋಣ. ಆದರೆ ಕೋಟ್ಯಾಂತರ ಕೂಲಿಕಾರರಿಗೆ ಪ್ಯಾಕೇಜ್ ಬೇಡವೇ? ಇದನ್ನು ಯಾವ ಶಾಸಕರೂ, ಸಂಸದರೂ ಕೇಳುತ್ತಿಲ್ಲ.

ಕೋವಿಡ್‌ನಿಂದಾಗಿ ಬೀದಿಗೂ ಬೀಳಲು ಸಾಧ್ಯವಿಲ್ಲದೆ ಮನೆಗಳಲ್ಲಿಯೇ ಹಸಿವಿನಿಂದ ನರಳುತ್ತಿರುವ ದಿನಗೂಲಿ ದುಡಿಮೆಗಾರರಿಗೆ ಪ್ಯಾಕೇಜ್ ಏಕಿಲ್ಲ? (ಇವರನ್ನು ಬೀದಿಗೆ ಬಿದ್ದಿದ್ದಾರೆ ಎನ್ನುವಂತಿಲ್ಲ. ಏಕೆಂದರೆ ಬೀದಿಗೆ ಬೀಳಲೂ ಅನುಮತಿಯಿಲ್ಲ).



ಕೃಪೆ: ಸತೀಶ್ ಆಚಾರ್ಯ

ಇದನ್ನು ಕಾರ್ಮಿಕ ಸಂಘಟನೆಗಳು ಒತ್ತಾಯಿಸಬೇಕು. ಆದರೆ ಅವುಗಳನ್ನು ಕಳೆದ 6 ವರ್ಷಗಳಲ್ಲಿ ಸರ್ಕಾರವು ಅಪ್ರಸ್ತುತಗೊಳಿಸಿದೆ. ಅವುಗಳನ್ನು ಅಭಿವೃದ್ಧಿಗೆ 'ಕಂಟಕ' ಎನ್ನುವ ರೀತಿಯಲ್ಲಿ ಬಣ್ಣಿಸುತ್ತಿದೆ. ವಿದೇಶಗಳಲ್ಲಿ ಈಗಾಗಲೆ ಸಂರಕ್ಷಣಾ ಪ್ಯಾಕೇಜುಗಳನ್ನು ಸರ್ಕಾರಗಳು ಪ್ರಕಟಿಸುತ್ತಿವೆ. ಉದಾ: ಬ್ರಿಟನ್ 33845 ಕೋಟಿ ಡಾಲರ್, ಕೆನಡ 2700 ಕೋಟಿ ಡಾಲರ್, ಅಮೆರಿಕ ಒಂದು ಲಕ್ಷ ಕೋಟಿ ಡಾಲರ್ ಮತ್ತು ಫ್ರಾನ್ಸ್ 4830 ಕೋಟಿ ಡಾಲರ್ ಪ್ಯಾಕೇಜ್ ಘೋಷಿಸಿವೆ. ಇವೆಲ್ಲವೂ ಉದ್ದಿಮೆಗಳಿಗೆ ಘೋಷಿಸಿರುವ ಭದ್ರತೆ ನೆರವು.

ಕೋವಿಡ್ ಮಹಾರೋಗದಿಂದ ಕೂಲಿಕಾರರ ಬದುಕು ಜರ್ಜರಿತವಾಗುತ್ತಿದೆ. ಇದು ರೋಗದ ಪರಿಣಾಮಕ್ಕಿಂತ ಇದು ಆರ್ಥಿಕ ಅಸ್ವಸ್ಥತೆಯ ಸಮಸ್ಯೆ. ಮೂಲಭೂತವಾಗಿ ಕೂಲಿಕಾರರಿಗೆ ಉದ್ಯೋಗವಿಲ್ಲ. ರೇಶನ್ ಕೊಳ್ಳಲು ರೊಕ್ಕವಿಲ್ಲ ಅಥವಾ ರೇಶನ್ ಅಂಗಡಿಗೆ ಹೋಗುವುದು ಹೇಗೆ? ಮನೆಯಲ್ಲಿ ದಿನಸಿ/ರೊಕ್ಕ ಇಲ್ಲ. ಆರ್ಥಿಕತೆಯು ಸ್ತಬ್ದವಾಗಿದೆ. ಕೂಲಿಕಾರರ ಉಸಿರು ಸ್ತಬ್ಧವಾಗುವ ಚಿನ್ಹೆಗಳು ಢಾಳಾಗಿ ಕಂಡುಬರುತ್ತಿವೆ.

ಉದ್ದಿಮೆಗಾರರೇ ವೆಲ್ಥ್ ಕ್ರಿಯೆಟರ್ಸ್ ಎಂದು ಘೋಷಿಸುತ್ತಿರುವ ಕೇಂದ್ರದ ಆಳ್ವಿಕೆಯಲ್ಲಿ ಇದು ಆಶ್ಚರ್ಯದ ಸಂಗತಿಯೇನಲ್ಲ. ಏಕೆಂದರೆ 2019–2020ರ ಆರ್ಥಿಕ ಸಮೀಕ್ಷೆಯ ಮೊದಲ ಸಂಪುಟದಲ್ಲಿ ಅಭಿವೃದ್ಧಿಗೆ 'ಪ್ರೋ–ಬ್ಯುಸಿನೆಸ್' ಪಾಲಿಸಿಗಳು ಬೇಕು ಎಂದು ಸಲಹೆ ನೀಡಲಾಗಿದೆ(ಅಧ್ಯಾಯ: 3). ಸರ್ಕಾರವು 'ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್' ಆರಾಧನೆಯಲ್ಲಿ ತೊಡಗಿದೆ. ಸುಮಾರು 600 ಪುಟಗಳ ಎರಡು ಸಂಪುಟಗಳಲ್ಲಿರುವ 2019–2020ರ ಆರ್ಥಿಕ ಸಮೀಕ್ಷೆಯಲ್ಲಿ ಉದ್ಯೋಗದ ಬಗ್ಗೆ 10ನೆಯ ಅಧ್ಯಾಯದ ಸಣ್ಣ ಭಾಗದಲ್ಲಿ(10 ಪುಟಗಳು) ಚರ್ಚೆಯಿದೆ. ಆದರೆ ಇಲ್ಲಿ ಕಾರ್ಮಿಕರ ಬದುಕು–ಬವಣೆ ಬಗ್ಗೆ ಚರ್ಚೆಯಿಲ್ಲ. ಇಲ್ಲಿ ಅಷ್ಟು ಇಷ್ಟು ಸಾಧನೆಯನ್ನು ವೈಭವೀಕರಿಸುವ ಚರ್ಚೆಯಿದೆಯೇ ವಿನಾ ವೆಲ್ಥ್ ಕ್ರಿಯೇಶನ್ನಿನಲ್ಲಿ(ಜಿಡಿಪಿ) ಅವರ ಕಾಣಿಕೆ ಎಷ್ಟು ಮತ್ತು ಅದರಿಂದ ಅವರು ಪಡೆಯುತ್ತಿರುವ ಪ್ರತಿಫಲ ಎಷ್ಟು ಎಂಬುದನ್ನು ಇಲ್ಲಿ ಚರ್ಚೆಗೆ ಎತ್ತಿಕೊಂಡಿಲ್ಲ.

ಕೋವಿಡ್‌ನಿಂದಾಗಿ ಸಾವು–ನೋವುಗಳುಂಟಾತ್ತಿವೆ. ಮುಂದಿನ ತಿಂಗಳುಗಳಲ್ಲಿ ಇದರಿಂದ ಸಾವು–ನೋವುಗಳು ತೀವ್ರಗೊಳ್ಳಬಹುದು. ಆದರೆ ಇದರಿಂದ ಮಾರಣಾಂತಿಕ ಪೆಟ್ಟು ಮಾತ್ರ ಕೂಲಿಕಾರರ ಬದುಕಿನ ಮೇಲಾಗುತ್ತದೆ. ಕೋವಿಡ್ ನಿಂದಾಗಿ ಉಂಟಾಗಿರುವ ಇವರ ಅತಂತ್ರದ ಬದುಕನ್ನು ಭದ್ರಗೊಳಿಸಲು ಈಗ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಕೋವಿಡೋತ್ತರ ಭಾರತದ ಆರ್ಥಿಕತೆಯು ಮತ್ತಷ್ಟು ನೆಲ ಕಚ್ಚುವ ಸಾಧ್ಯತೆಯಿದೆ. ಆಗಲೂ ತೀವ್ರ ದುಸ್ಥಿತಿಗೆ ಒಳಗಾಗುವವರು ಬಡಕೂಲಿಕಾರರೇ ಆಗಿರುತ್ತಾರೆ. ಅತ್ಯಂತ ವಿಷಾದದ ಸಂಗತಿಯೆಂದರೆ ಅದು ಆರ್ಥಿಕ ಕುಸಿತವೇ ಇರಲಿ ಅಥವಾ ಮಹಾರೋಗದ ಪಿಡುಗೇ ಇರಲಿ ಮಾರಣಾಂತಿಕ ಪರಿಣಾಮಕ್ಕೆ ಒಳಗಾಗುವವರು ಮಾತ್ರ ಕೂಲಿಕಾರರು, ರೈತಾಪಿ ಜನರು ಮತ್ತು ಮಹಿಳೆಯರು.

ಆರ್ಥಿಕ ಕುಸಿತ ಮತ್ತು ಕೋವಿಡ್ ಮಹಾದುರಂತಗಳ ಮಾರಣಾಂತಿಕ ಪರಿಣಾಮಗಳಿಂದ ಕೂಲಿಕಾರರ ಬದುಕನ್ನು ಸಂರಕ್ಷಿಸುವ ಬಗ್ಗೆ ಕರ್ನಾಟಕ ಸರ್ಕಾರವು ಜರೂರಾಗಿ ಪ್ಯಾಕೇಜ್ ಪ್ರಕಟಿಸಬೇಕು. ನಗರ ಪ್ರದೇಶಗಳಿಗೆ ಅಪಾರ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶದಿಂದ ಕೂಲಿಕಾರರು ಬದುಕನ್ನು ಅರಸಿಕೊಂಡು ವಲಸೆ ಬರುತ್ತಿದ್ದಾರೆ. ಇವರ ಬದುಕನ್ನು ಭದ್ರಗೊಳಿಸುವುದಕ್ಕೆ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿರುವಂತೆ(ಮನರೇಗ) ಇಲ್ಲಿಯೂ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೊಳಿಸಬೇಕು. ಕನಿಷ್ಟ ರೂ.500 ದಿನಗೂಲಿಯಲ್ಲಿ ವಾರ್ಷಿಕ 100 ದಿನಗಳ ಕೂಲಿ ಕೆಲಸವನ್ನು ಇವರಿಗೆ ನೀಡುವಂತಾಗಬೇಕು. ಕೇವಲ ಸ್ಮಾರ್ಟ್ ಸಿಟಿ ಯೋಜನೆಯಿಂದ ಕೂಲಿಕಾರರ ಬದುಕು ಉತ್ತಮವಾಗುವುದಿಲ್ಲ. ಕೂಲಿಕಾರರದ್ದು ಸ್ಮಾರ್ಟ್ ಎಕನಾಮಿಕ್ಸ್. ವೆಲ್ಥ್ ಕ್ರಿಯೇಶನ್ನಿನಲ್ಲಿ ಇವರ ಕಾಣಿಕೆ ನಿರ್ಣಾಯಕ. ಡಿಜಿಟಲೈಜೇಶನ್ನೇ ಅಥವಾ ಪ್ರೋ–ಬ್ಯುಸಿನೆಸ್ ನೀತಿಗಳೇ ಅಥವಾ ಸ್ಮಾರ್ಟ್ ಸಿಟಿ ಯೋಜನೆಯೇ ಅಭಿವೃದ್ಧಿಯಲ್ಲ. ಆರ್ಥಿಕ ಸಮೃದ್ಧಿಗಿಂತ ಮುಖ್ಯವಾಗಿ ಜನರ ಬದುಕನ್ನು ಸಮೃದ್ಧಗೊಳಿಸುವ ಪ್ರಕ್ರಿಯೆಯೇ ಅಭಿವೃದ್ಧಿ. ಇಂದು ಆರ್ಥಿಕ ಅಸ್ವಸ್ಥತೆಯಿಂದಾಗಿ ಇದು ಸಮೃದ್ಧವಾಗಿಲ್ಲ. ಕೋವಿಡ್‌ನಿಂದಾಗಿ ಜನರ ಬದುಕೂ ಸಮೃದ್ಧವಾಗಿಲ್ಲ. ಕಳೆದ ಎರಡು ವರ್ಷಗಳಿಂದ ಆರ್ಥಿಕತೆಯನ್ನು ನಿರ್ವಹಿಸುವುದರಲ್ಲಿ ಪೂರ್ಣವಾಗಿ ವಿಫಲವಾಗಿರುವ ಕೇಂದ್ರ ಸರ್ಕಾರವು ಎರಡು ಮಹಾದುರಂತಗಳಿಂದ ನಮ್ಮ ಸಮಾಜವನ್ನು ಹೇಗೆ ರಕ್ಷಿಸುತ್ತದೆ ಎಂಬುದು ಒಗಟಾಗಿ ಪರಿಣಮಿಸಿದೆ.

ಇಂತಹ ದ್ವಿಮಾನ ದುರಂತಗಳ ಸಂದರ್ಭದಲ್ಲಿ ಖಾಸಗಿ ವಲಯವನ್ನು, ಮಾರುಕಟ್ಟೆ ವ್ಯವಸ್ಥೆಯನ್ನು ನಂಬಿದರೆ ಸಮಸ್ಯೆಯು ಬಗೆಹರಿಯುವುದಿಲ್ಲ. ಆದರೆ ಕೇಂದ್ರವು 'ಅಗೋಚರ ಶಕ್ತಿ'ಯ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ. ಆರ್ಥಿಕ ಸಮೀಕ್ಷೆಯು 'ಖಾಸಗೀಕರಣದಿಂದ ಮಾತ್ರ ವೆಲ್ಥ್ ಕ್ರಿಯೇಶನ್ ಸಾಧ್ಯ' ಎಂಬ ವಾದವನ್ನು ಪ್ರಬಲವಾಗಿ ಮಂಡಿಸಿದೆ. ಆರ್ಥಿಕ ಸಮೀಕ್ಷೆಯಲ್ಲಿನ ಸಲಹೆಗಳನ್ನು ಕೇಂದ್ರವು ಪಾಲಿಸಲೇ ಬೇಕು ಎಂದೇನಿಲ್ಲ. ಈ ಸಮೀಕ್ಷೆಯನ್ನು ಪಕ್ಕಕ್ಕಿಟ್ಟು ಕೇಂದ್ರವು ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆ ಮಾಡಿ ಆರ್ಥಿಕ ನಿರ್ವಹಣೆಯಲ್ಲಿ ಭಾಗವಹಿಸಬೇಕು. ಮಹಾಬಿಕ್ಕಟ್ಟಿನ ಸಂದರ್ಭದಲ್ಲಿ ಅಗೋಚರ ಹಸ್ತವು ಯಶಸ್ವಿಯಾಗುವುದು ಅನಿಶ್ಚಿತ. ಮಾರುಕಟ್ಟೆಗೆ ಸಂಬಂಧಿಸಿದ ಸತ್ಯವೇನೆಂದರೆ ಅದು ಸದಾ ಉಳ್ಳವರ, ಉದ್ದಿಮೆಗಾರರು–ವಾಣಿಜ್ಯೋದ್ಯಮಿಗಳು ಮತ್ತು ವ್ಯಾಪಾರಗಾರರ ಪರವಾಗಿ ಕೆಲಸ ಮಾಡುತ್ತದೆ. ಸಬಲರ ಪರವಾಗಿರುತ್ತದೆ ವಿನಾ ದುರ್ಬಲದ ಪರವಾಗಿರುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಅದು ದಲಿತ–ಆದಿವಾಸಿ ವಿರೋಧಿ ಕಾರ್ಯನೀತಿಯಾಗಿದೆ. ನಮಗೆ ಇಂದು ಅಗತ್ಯವಾಗಿರುವುದು 'ಬಂಡವಾಳ–ಲಾಭ ಪ್ರಣೀತ ಆರ್ಥಿಕ ವ್ಯವಸ್ಥೆ'ಯಲ್ಲ. ಇಂದಿನ ನಮ್ಮ ಸಮಸ್ಯೆಗೆ ಉತ್ತರ 'ಕಾರ್ಮಿಕ–ಕೂಲಿ ಪ್ರಣೀತ ಆರ್ಥಿಕ ವ್ಯವಸ್ಥೆ'.






ಪ್ರಧಾನಿಗಳು 'ಯಾರೂ ರಸ್ತೆಗೆ ಬರಬೇಡಿ, ಮನೆಯಲಲೇ ಇರಿ' ಎಂದು ಹೇಳುತ್ತ ಪ್ರಕಟಿಸಿದ ಲಾಕ್‌ಡೌನ್ ಹಲವಾರು ವಲಸೆ ಕಾರ್ಮಿಕರನ್ನು ತಮ್ಮ ಮನೆಗೆ ವಾಪಸಾಗಲು ರಸ್ತೆಯಲ್ಲಿ ಕಿ.ಮೀ.ಗಟ್ಟಲೆ ನಡೆದೇ ಹೋಗುವಂತೆ ಮಾಡಿತು.

ದಿಗ್ಬಂಧನವೇನೋ ಸರಿ, ಆದರೆ ಜನಗಳ ಪಾಡೇನು?

ಆರೋಗ್ಯ ಪರಿಣಿತರ ಪ್ರಕಾರ ಮೂರು ವಾರಗಳ ಸಂಪೂರ್ಣ ದಿಗ್ಬಂಧನ ಈ ಸೋಂಕು ಹರಡದಂತೆ ತಡೆಗಟ್ಟಲು ಅಗತ್ಯವಾಗಿದೆ. ಆದರೆ ಇದನ್ನು ನಿರ್ಲಕ್ಷ್ಯದಿಂದ ಮತ್ತು ಹೃದಯಹೀನವಾಗಿ ಮಾಡಲಾಗಿದೆ. ಏಕೆಂದರೆ, ನಮ್ಮ ಜನಸಂಖ್ಯೆಯ ಬಹುದೊಡ್ಡ ವಿಭಾಗಕ್ಕೆ ಇದರಿಂದಾಗಿ ತಮ್ಮ ಕುಟುಂಬಗಳ ಹಸಿವು ಹಿಂಗಿಸಲು ಮತ್ತು ಅಗತ್ಯ ವಸ್ತುಗಳನ್ನು ಖರೀದಿಸಲು ಹಣವಿಲ್ಲದಂತಾಗುತ್ತದೆ ಎಂಬುದು ವಾಸ್ತವ ಸಂಗತಿ. ಇಂತಹ ಒಂದು ತೀವ್ರತರ ಹೆಜ್ಜೆಯನ್ನು ಇಡುವ ಮೊದಲು ಆರ್ಥಿಕ ಉದ್ದಿಮೆಗಳನ್ನು ರಕ್ಷಿಸುವ ಮತ್ತು ಒಟ್ಟು ಆದಾಯವನ್ನು ಕಳಕೊಳ್ಳುವ ಜನಗಳಿಗೆ ಪರಿಹಾರ ಒದಗಿಸುವ ಕ್ರಮಗಳನ್ನು ಕೈಗೊಳ್ಳುವುದು ಸರಕಾರದ ಜವಾಬ್ದಾರಿಯಾಗಿತ್ತು. ಆದರೆ ಅದೇನನ್ನೂ ಮಾಡಲಲ್ಲ.

ಪ್ರಕಾಶ ಕಾರಟ್

ಪ್ರಧಾನ ಮಂತ್ರಿಗಳಿಂದ ಕೊರೊನ ವೈರಸ್ ಮಹಾಮಾರಿಯನ್ನು ಎದುರಿಸುವ ಬಗ್ಗೆ ಎರಡು ರಾಷ್ಟ್ರೀಯ ಪ್ರಸಾರ ಭಾಷಣಗಳು ಬಂದವು. ಆದರೆ ಮುಂಬರಲಿರುವ ಆರ್ಥಿಕ ಹಿಂಜರಿತ ಮತ್ತು ಜನಗಳ ಜೀವನಾಧಾರಗಳು ಮತ್ತು ಆದಾಯಗಳಿಗೆ ಆಗಿರುವ ಬೃಹತ್ ಭಂಗವನ್ನು ನಿಭಾಯಿಸಲು ಸರಕಾರದಿಂದ ಯಾವುದೇ ಆರ್ಥಿಕ ಕಮ್ರಗಳ ಪ್ರಸ್ತಾಪವೇ ಇವುಗಳಲ್ಲಿ ಇರಲಿಲ್ಲ.

ಮಾರ್ಚ್ 24ರಂದು ಪ್ರಧಾನ ಮಂತ್ರಿಗಳ ಎರಡನೇ ಭಾಷಣ 21ದಿನಗಳ ದೇಶವ್ಯಾಪಿ ದಿಗ್ಬಂಧನವನ್ನು (ಲಾಕ್‌ಡೌನ್) ಪ್ರಕಟಿಸಿತು. ಇಂತಹ ಒಂದು ತೀವ್ರತರ ಹೆಜ್ಜೆಯನ್ನು ಇಡುವ ಮೊದಲು ಆರ್ಥಿಕ ಉದ್ದಿಮೆಗಳನ್ನು ರಕ್ಷಿಸುವ ಮತ್ತು ಒಟ್ಟು ಆದಾಯವನ್ನು ಕಳಕೊಳ್ಳುವ ಜನಗಳಿಗೆ ಪರಿಹಾರ ಒದಗಿಸುವ ಕ್ರಮಗಳನ್ನು ಕೈಗೊಳ್ಳುವುದು ಸರಕಾರದ ಜವಾಬ್ದಾರಿಯಾಗಿತ್ತು. ಆದರೆ ಅದೇನನ್ನೂ ಮಾಡಲಿಲ್ಲ.

ಮಾರ್ಚ್ 20ರಂದು ತನ್ನ ಮೊದಲ ಭಾಷಣದಲ್ಲಿ ಪ್ರಧಾನ ಮಂತ್ರಿಗಳು ಒಂದು "ಜನತಾ ಕರ್ಫ್ಯೂ' ಪ್ರಕಟಿಸಿದರು. ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ಅರ್ಥವ್ಯವಸ್ಥೆಯ ಬಗ್ಗೆ ಒಂದು ಕಾರ್ಯಪಡೆಯನ್ನು ರಚಿಸಿರುವುದಾಗಿಯೂ ಹೇಳಿದರು. ಆದರೆ ಅದರ ಫಲಿತಾಂಶವೇನೂ ಕಾಣ ಬರಲಿಲ್ಲ. ಐದು ದಿನಗಳ ನಂತರ ಪ್ರಧಾನಿಗಳ ಎರಡನೇ ಭಾಷಣದಲ್ಲಿ ಈ ವಿಷಯದಲ್ಲಿ ಕೆಲವು ಪ್ರಕಟಣೆಗಳನ್ನು ನಿರೀಕ್ಷಿಸಲಾಗಿತ್ತು.

ಈ ಭಾಷಣದಲ್ಲಿದ್ದ ಒಂದೇ ಒಂದು ಪ್ರಕಟಣೆಯೆಂದರೆ ಹೆಚ್ಚು ವೆಂಟಿಲೇಟರುಗಳು, ವೈಯಕ್ತಿಕ ಸುರಕ್ಷಾ ಉಡುಗೆ-ತೊಡಿಗೆಗಳು ಮತ್ತು ಆಸ್ಪತ್ರೆಗಳಲ್ಲಿ ಪ್ರತ್ಯೇಕ ಶುಶ್ರೂಷೆ ವಾರ್ಡ್‌ಗಳಿಗೆಂದು 15,000 ಕೋಟಿ ರೂ.ಗಳನ್ನು ಆರೋಗ್ಯ ವಲಯಕ್ಕೆ ಕೊಡಲಾಗುವುದು ಎಂದು. ಆದರೆ ಹೆಚ್ಚು ತಪಾಸಣಾ ಕಿಟ್‌ಗಳ ಮತ್ತು ಬಹಳ ಹಿಂದೆ ಬಿದ್ದಿರುವ ತಪಾಸಣಾ ವ್ಯವಸ್ಥೆಯ ವಿಸ್ತರಣೆಯ ಪ್ರಸ್ತಾಪವೂ ಇರಲಿಲ್ಲ.

ಈ ಹಣವನ್ನು ಪ್ರಕಟಿಸಿರುವುದು ದೇಶದಲ್ಲಿ ಮೊದಲ ಕೊರೊನ ವೈರಸ್ ಪ್ರಕರಣ ದಾಖಲಾದ 53 ದಿನಗಳ ನಂತರ! ದೇಶದೆಲ್ಲೆಡೆ ಡಾಕ್ಟರುಗಳು ಮತ್ತು ನರ್ಸ್‌ಗಳು ಸುರಕ್ಷಾ ಸಾಧನಗಳ ಕೊರತೆಯ ಬಗ್ಗೆ ದೂರುತ್ತಲೇ ಇದ್ದರು. ಇದನ್ನು ಆದ್ಯತೆಯ ಮೇಲೆ ತಗೊಳ್ಳಬೇಕಾಗಿತ್ತು. ಆರೋಗ್ಯ ಮೂಲರಚನೆಗಳಲ್ಲಿ ಅಗತ್ಯವಾಗಿರುವ ಅಗಾಧ ವಿಸ್ತರಣೆಯನ್ನು ನೋಡಿದರೆ ಮಂಜೂರು ಮಾಡಿರುವ ಈ ಮೊತ್ತ ಏನೇನೂ ಸಾಲದು. ಆರೋಗ್ಯ ಒಂದು ರಾಜ್ಯಪಟ್ಟಿಯಲ್ಲಿನ ವಿಷಯವಾದ್ದರಿಂದ ಕೇಂದ್ರ ಸರಕಾರ ರಾಜ್ಯಸರಕಾರಗಳಿಗೆ ಉದಾರ ಅನುದಾನಗಳನ್ನು ನೀಡಬೇಕು. ಈ ಮಹಾಮಾರಿಯಾದರೂ ಸಾರ್ವಜನಿಕ ಆರೋಗ್ಯಪಾಲನೆಯನ್ನು ನಿರ್ಲಕ್ಷಿಸಿ ಖಾಸಗೀಕೃತ ಆರೋಗ್ಯ ವಲಯವನ್ನು ಪ್ರೋತ್ಸಾಹಿಸುವ ತಪ್ಪಿನ ಬಗ್ಗೆ ಕೇಂದ್ರ ಮತ್ತು ಹೆಚ್ಚಿನ ರಾಜ್ಯಸರಕಾರಗಳ ಕಣ್ಣು ತೆರೆಸಬೇಕು.

ಆರೋಗ್ಯ ಪರಿಣಿತರ ಪ್ರಕಾರ ಮೂರು ವಾರಗಳ ಸಂಪೂರ್ಣ ದಿಗ್ಬಂಧನ ಈ ಸೋಂಕು ಹರಡದಂತೆ ತಡೆಗಟ್ಟಲು ಅಗತ್ಯವಾಗಿದೆ. ಆದರೆ ಇದನ್ನು ನಿರ್ಲಕ್ಷ್ಯದಿಂದ ಮತ್ತು ಹೃದಯಹೀನವಾಗಿ ಮಾಡಲಾಗಿದೆ. ಏಕೆಂದರೆ, ನಮ್ಮ ಜನಸಂಖ್ಯೆಯ ಬಹುದೊಡ್ಡ ವಿಭಾಗಕ್ಕೆ ಇದರಿಂದಾಗಿ ತಮ್ಮ ಕುಟುಂಬಗಳ ಹಸಿವು ಹಿಂಗಿಸಲು ಮತ್ತು ಅಗತ್ಯ ವಸ್ತುಗಳನ್ನು ಖರೀದಿಸಲು ಹಣವಿಲ್ಲದಂತಾಗುತ್ತದೆ ಎಂಬುದು ವಾಸ್ತವ ಸಂಗತಿ. ಅನೌಪಚಾರಿಕ ವಲಯದಲ್ಲಿ ದಿನಗೂಲಿಗಳು, ಕ್ಯಾಶುವಲ್ ಕಾರ್ಮಿಕರು ಹೀನಾಯ ಪರಿಸ್ಥಿತಿಯಲ್ಲಿದ್ದಾರೆ. ಅನೌಪಚಾರಿಕ ವಲಯದಲ್ಲಿ 39 ಕೋಟಿ ಕಾರ್ಮಿಕರಿದ್ದಾರೆ. ಅವರಲ್ಲಿ ಹೆಚ್ಚಿನವರು ಉದ್ಯೋಗ ಕಳಕೊಂಡಿದ್ದಾರೆ. ಅವರನ್ನು ಅವರ ಮನೆಗಳಿಗೆ ಸೀಮಿತಗೊಳಿಸುವ ಮೊದಲು ಸರಕಾರ ಅವರಿಗೆ ಉಚಿತ ರೇಶನ್‌ಗಳನ್ನು ಮತ್ತು ಸ್ವಲ್ಪ ಆದಾಯ ಬೆಂಬಲವನ್ನು ಒದಗಿಸಬೇಕಾಗಿತ್ತು.; ಜನಧನ ಖಾತೆಯಲ್ಲಿ 5000 ರೂ.ಗಳನ್ನು ಹಾಕಬಹುದಾಗಿತ್ತು.

ವಲಸೆ ಕಾರ್ಮಿಕರು ಸಾವಿರ ಸಾವಿರ ಸಂಖ್ಯೆಯಲ್ಲಿ ದಿಗ್ಬಂಧನದ ಮೊದಲೂ ಮನೆಗಳಿಗೆ ಹೋಗಲಾರದೆ ಸಿಲುಕಿ ಕೊಂಡಿದ್ದರು. ಕೇಂದ್ರ ಸರಕಾರಕ್ಕೆ ಅವರ ಬಗ್ಗೆ ಕಾಳಜಿ ಇದ್ದಂತಿಲ್ಲ.

ಕೆಲವು ರಾಜ್ಯ ಸರಕಾರಗಳು ಮಾತ್ರವೇ ಸ್ವಲ್ಪ ಪರಿಹಾರಗಳನ್ನು ಪ್ರಕಟಿಸಿವೆ. ಎಲ್ಲ ಬಿಪಿಎಲ್/ಎಪಿಎಲ್ ಕಾರ್ಡುದಾರರಿಗೆ ಒಂದು ತಿಂಗಳ ಉಚಿತ ರೇಶನ್, ಪೆನ್ಶನ್ ಬಾಕಿ ಮತ್ತು ಮುಂಗಡ ಪಾವತಿ, ಮಕ್ಕಳ ಸ್ಕೀಮ್‌ಗಳಲ್ಲಿ ಅವರ ಮನೆಗಳಿಗೆ ಮಧ್ಯಾಹ್ನದ ಊಟದ ಕಿಟ್‌ಗಳನ್ನು ಒದಗಿಸಿರುವ ಕೇರಳದ ಎಲ್‌ಡಿಎಫ್ ಸರಕಾರ ಉದ್ಯೋಗಹೀನ ವಲಸೆ ಕಾರ್ಮಿಕರಿಗೆ ಕೂಡ ಕ್ರಮಗಳನ್ನು ಕೈಗೊಂಡಿದೆ ಎಂಬುದು ಗಮನಾರ್ಹ. ಉಳಿದುಕೊಳ್ಳುವ ಕೇಂದ್ರಗಳಿಗೆ ಅವರನ್ನು ವರ್ಗಾಯಿಸಿದೆ, ಅವರಿಗೆ ಉಚಿತ ರೇಶನ್‌ಗಳನ್ನು ಕೊಟ್ಟಿದೆ ಮತ್ತು ವೈದ್ಯಕೀಯ ತಪಾಸಣೆಗಳನ್ನೂ ಮಾಡಿಸಿದೆ. ದಿಲ್ಲಿ, ಪಂಜಾಬ್, ತಮಿಳುನಾಡು ಮತ್ತಿತರ ಕೆಲವು ರಾಜ್ಯ ಸರಕಾರಗಳೂ ನಗದು ವರ್ಗಾವಣೆ ಅಥವ ಉಚಿತ ರೇಶನ್‌ಗಳನ್ನು ಪ್ರಕಟಿಸಿವೆ.


ಇನ್ನು ಸಂಘಟಿತ ವಲಯದ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಪ್ರಧಾನ ಮಂತ್ರಿಗಳು ತಮ್ಮ ಮೊದಲ ಭಾಷಣದಲ್ಲಿ ಅವರನ್ನು ಕೆಲಸದಿಂದ ತೆಗೆದು ಹಾಕಬಾರದು ಅಥವ ಅವರ ಸಂಬಳ ಕಡಿತ ಮಾಡಬಾರದು ಎಂದು ಉದ್ಯೋಗದಾತರಿಗೆ ಮನವಿ ಮಾಡಿಕೊಂಡಿದ್ದರು. ನಂತರ ಕಾರ್ಮಿಕ ಇಲಾಖೆ ಇದೇ ರೀತಿಯ ಸಲಹಾ ಪತ್ರವನ್ನು ಜಾರಿ ಮಾಡಿತ್ತು. ಇಂತಹ ಸದಾಶಯಗಳು ಕೆಲಸ ಮಾಡವು. ಸರಕಾರ ಖಾಸಗಿ ಮತ್ತು ಸಾರ್ವಜನಿಕ ವಲಯಗಳೆರಡರಲ್ಲೂ ಉದ್ಯೋಗಗಳನ್ನು ಮತ್ತು ಸೌಲಭ್ಯಗಳನ್ನು ರಕ್ಷಿಸುವ ಅಧಿಸೂಚನೆಯನ್ನು ಹೊರಡಿಸಬೇಕಾಗುತ್ತದೆ. ಇದು ಕಾಂಟ್ರಾಕ್ಟ್ ಕಾರ್ಮಿಕರಿಗೂ ಅನ್ವಯವಾಗಬೇಕು. ಬ್ರಿಟನ್ನಿನ ಕನ್ಸರ್ವೆಟಿವ್ ಪಕ್ಷದ ಸರಕಾರ ಕೂಡ ಸಂಬಳ ಕೊಡುವುದು ಕಷ್ಟವೆನಿಸುವ ಕಂಪನಿಗಳ ನೌಕರರ 80ಶೇ.ದಷ್ಟು ಸಂಬಳವನ್ನು ಭರಿಸುವ ಒಂದು ಸ್ಕೀಮನ್ನು ರೂಪಿಸಿದೆ. ಇದು ಮೂರು ತಿಂಗಳ ಅವಧಿಯದಾಗಿದ್ದು, ನಂತರ ಮುಂದುವರೆಸಬಹುದಾದದ್ದು.

ತುಂಬಾ ದುಷ್ಪರಿಣಾಮಗಳಿಗೆ ಈಡಾಗಿರುವ ವಲಯಗಳಿಗೆ ನೆರವಾಗಲು ಹಣಕಾಸು ಪ್ಯಾಕೇಜುಗಳು ಬೇಕಾಗುತ್ತವೆ. ಆದರೆ ಇಂತಹ ನೆರವನ್ನು ನೀಡುವಾಗ ಲೇ-ಆಫ್ ಅಥವ ಸಂಬಳ ಕಡಿತಗಳನ್ನು ಮಾಡಬಾರದು ಎಂಬ ಶರತ್ತನ್ನು ಹಾಕಬೇಕು. ಉದಾಹರಣೆಗೆ, ವಿಮಾನಯಾನ ವಲಯಕ್ಕೆ ನೆರವು ಬೇಕಾಗಿದೆ, ಆದರೆ ಅವರು ಗೋ ಏರ್ ಮಾಡಿದಂತೆ ನೌಕರರ ರಿಟ್ರೆಂಚ್‌ಮೆಂಟ್‌ಗೆ ಇಳಿಯುವದಾಗಲೀ, ಅಥವ ಇಂಡಿಗೋ ಮಾಡಿದಂತೆ ಸಂಬಳ ಕಡಿತಗಳನ್ನು ಮಾಡಲು ಬಿಡಬಾರದು. ಎಲ್ಲಕ್ಕೂ ಮಿಗಿಲಾಗಿ, ಕೇಂದ್ರ ಸರಕಾರ ರಾಜ್ಯಗಳಿಗೆ ಹೆಚ್ಚಿನ ನಿಧಿಗಳನ್ನು ಪೂರೈಸಬೇಕು, ಮತ್ತು ಅವರ ಸಾಲ ಪಡೆಯುವ ಮಿತಿಗಳನ್ನು ಹೆಚ್ಚಿಸಬೇಕು.

ಕಳೆದ ಕೆಲವು ದಿನಗಳಲ್ಲಿ ತರಕಾರಿಗಳು ಮತ್ತು ಇತರ ಆವಶ್ಯಕ ಸರಕುಗಳ ಬೆಲೆಗಳು ಹಲವು ನಗರಗಳಲ್ಲಿ ಒಮ್ಮೆಲೇ ಏರಿವೆ. ಕೇಂದ್ರ ಸರಕಾರ ರಾಜ್ಯ ಸರಕಾರಗಳ ಜತೆಗೂಡಿ ಆವಶ್ಯಕ ಸರಕುಗಳ ಪೂರೈಕೆಗಳ ಸುಲಲಿತ ಸಾಗಾಟ, ವಿಶೇಷವಾಗಿ ಅಂತರ-ರಾಜ್ಯ ವರ್ಗಾವಣೆಗಳನ್ನು ಖಾತ್ರಿಪಡಿಸಬೇಕು. ಈಗಾಗಲೇ ಸಾಗಾಟಕ್ಕೆ ತೊಂದರೆ ಮತ್ತು ಚೆಕ್‌ಪೋಸ್ಟ್‌ಗಳಲ್ಲಿ ಸರಕು-ಸಾಮಾನುಗಳಿಗೆ ತಡೆಗಳುಂಟಾಗಿರುವ ವರದಿಗಳು ಬಂದಿವೆ.

ದಿಗ್ಬಂಧನದ ಅಧಿಕೃತ ಅಧಿಸೂಚನೆಯಲ್ಲಿ ಎರಡು ಅಂಶಗಳು ಬಿಟ್ಟು ಹೋಗಿರುವುದು, ಈ ಕ್ರಮ ಕೈಗೊಳ್ಳುವ ಮೊದಲು ಸಾಕಷ್ಟು ಯೋಚಿಸಿರಲಿಲ್ಲ ಮತ್ತು ಸಿದ್ಧತೆಗಳಿರಲಿಲ್ಲ ಎಂಬುದನ್ನು ತೋರಿಸುತ್ತವೆ. ಯಾವ ಸರಕಾರೀ ಇಲಾಖೆಗಳು ಕೆಲಸ ಮಾಡಬೇಕು, ಅವನ್ನು ಮುಚ್ಚಬಾರದು ಎಂಬ ಪಟ್ಟಿಯಲ್ಲಿ ಆರೋಗ್ಯ ಮತ್ತು ಆಹಾರ ಹಾಗೂ ನಾಗರಿಕ ಪೂರೈಕೆ ಇಲಾಖೆಗಳ ಹೆಸರುಗಳು ಕಾಣೆಯಾಗಿವೆ. ಈ ಇಲಾಖೆಗಳು ಕಾರ್ಯನಿರತವಾಗಿರದಿದ್ದರೆ, ಮಹತ್ವದ ಆರೋಗ್ಯ ವಲಯ ಮತ್ತು ಅಗತ್ಯ ಸರಕುಗಳ ಪೂರೈಕೆ ಹೇಗೆ ಪರಿಣಾಮಕಾರಿಯಾಗಿರಲು ಸಾಧ್ಯ? ಕೃಷಿ ವಲಯದಲ್ಲೂ, ಬೆಳೆಗಳ ಉತ್ಪಾದನೆ, ಸಾಗಾಟ, ತರಕಾರಿಗಳು ಮತ್ತು ಹಣ್ಣುಗಳು, ಅವುಗಳ ದಾಸ್ತಾನು, ವಿತರಣೆ ಇತ್ಯಾದಿಗಳ ಕುರಿತಂತೆಯೂ ಈ ದಿಗ್ಬಂಧನ ಅವಧಿಯ ಮಾರ್ಗಸೂಚಿಗಳಿಲ್ಲ.


ಮೋದಿ ಸರಕಾರ ದುಡಿಯುವ ಜನಗಳಿಗೆ, ಅದರಲ್ಲೂ ಬಡ ಮತ್ತು ಸಂಕಟಗಳಿಗೆ ಈಡಾಗುವ ವಿಭಾಗಗಳಿಗೆ ಆರ್ಥಿಕ ಹಿಂಜರಿತ ತಾರದ, ಮತ್ತು ಹಣದ ನೆರವು ಹಾಗೂ ಅಗತ್ಯ ಆಹಾರ ಪೂರೈಕೆಯನ್ನು ಒದಗಿಸುವ ಕ್ರಮಗಳಿರುವ ಒಂದು ಸಮಗ್ರ ಪ್ಯಾಕೇಜನ್ನು ತಕ್ಷಣವೇ ಪ್ರಕಟಿಸಬೇಕಾದ್ದು ಅತ್ಯಂತ ಮುಖ್ಯವಾಗಿದೆ.



ಮನೆಯಿಂದ ಕೆಲಸ

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ವಲಸೆ ಕಾರ್ಮಿಕ ಮರಳಿ ಮನೆಗೆ



ವ್ಯಂಗ್ಯಚಿತ್ರ, ಮಂಜುಲ್, ಫಸ್ಟ್ ಪೋಸ್ಟ್

ಕೋವಿಡ್ 19: ಕೇರಳಕ್ಕೆ ಮತ್ತು ಕೇರಳದಿಂದ ಪಾಠಗಳು

– ಕೆ.ಕೆ. ಶೈಲಜ (ಕೇರಳ ಆರೋಗ್ಯ ಮಂತ್ರಿ)



ಭಾರತದ ಸಾರ್ವಜನಿಕ ಆರೋಗ್ಯದ ದಾಖಲೆಯ ಹಿನ್ನೆಲೆಯಲ್ಲಿ, ಕೊವಿದ್–19ರ ಈ ತುರ್ತು ಪರಿಸ್ಥಿತಿಯನ್ನು ನಿಭಾಯಿಸಿರುವ ರೀತಿಯ ಬಗ್ಗೆ ಕೇರಳವನ್ನು ಶ್ಲಾಘಿಸಲಾಗುತ್ತಿದೆ. ಇದಕ್ಕೆ ಬೇಕಾದ ಪೂರ್ವಭಾವಿ ಮೂಲ ಸೌಕರ್ಯಗಳನ್ನು ಹಿಂದೆಯೇ ಒದಗಿಸಿದ್ದರಿಂದಾಗಿ ಮತ್ತು ನಿಫಾ ವೈರಸ್‌ನ ಸವಾಲನ್ನು ನಿಭಾಯಿಸಿದ ಅನುಭವದಿಂದಾಗಿ, ಕೇರಳ ಸರ್ಕಾರ ಉಳಿದ ರಾಜ್ಯ ಸರ್ಕಾರಗಳಿಗಿಂತ ಕೊವಿದ್–19ರ ಸವಾಲು ಎದುರಿಸುವ ಪೂರ್ವತಯಾರಿಯಲ್ಲಿ ಸಾಪೇಕ್ಷವಾಗಿ ಮುಂದಿತ್ತು.

ಮೂಲ ಲೇಖನ ಕೃಪೆ : ದಿ ಹಿಂದು
ಮಾ.23, 2020 ಅನು: ಎಂ.ಜಿ. ವೆಂಕಟೇಶ

ಪ್ರತಿವರ್ಷ ಕೇಂದ್ರ ಸರ್ಕಾರ ಬಜೆಟ್ ಮಂಡಿಸಿದಾಗ ಪತ್ರಿಕೆಗಳು ಆರೋಗ್ಯ ಕ್ಷೇತ್ರಕ್ಕೆ ಮೀಸಲಾಗಿಡುವ ಅತ್ಯಲ್ಪ ಹಣದ ಕುರಿತು ಟೀಕೆ ಮಾಡುವ ಲೇಖನಗಳನ್ನು ಪ್ರಕಟ್ರಿಸುತ್ತವೆ. ಕೋವಿಡ್ – 19 ರ ಬೆದರಿಕೆ ವ್ಯಾಪಕವಾಗಿ ಆವರಿಸುತ್ತಿರುವಾಗ, ವೈದ್ಯರು, ಆರೋಗ್ಯ ಕ್ಷೇತ್ರದ ಕಾರ್ಯಕರ್ತರು, ರಾಜ್ಯ ಸರ್ಕಾರದ ಸಂಸ್ಥೆಗಳು ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ನಿರ್ದೇಶನಗಳನ್ನು ಕೊಡಲಾರಂಭಿಸಿದ್ದರು. ಆದರೆ ನಾವು ಎಲ್ಲ ಕಡೆಗಳಲ್ಲೂ ಈ ಪಿಡುಗನ್ನು ಎದುರಿಸಲಾರಂಭಿಸಿದಾಗ ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿನ ನ್ಯೂನತೆಗಳು ಢಾಳಾಗಿ ಗೋಚರಿಸಲಾರಂಭಿಸಿದವು. ಪಿ. ಸಾಯಿನಾಥ್ ತಮ್ಮ 'ಎಲ್ಲರಿಗೂ ಬರ ಅಂದರೆ ಇಷ್ಟ' ಪುಸ್ತಕದಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ನಂಬಿರುವ ಬಡವರ ಸ್ಥಿತಿಯನ್ನು ಮನಮುಟ್ಟುವ ವಿವರಗಳೊಂದಿಗೆ ಹೇಳುತ್ತಾರೆ. ಅವರು 1994 ರಲ್ಲಿ ಕಾಣಿಸಿಕೊಂಡಿದ್ದ ಪ್ಲೇಗ್ ಪಿಡುಗಿಗೆ ಹಿಂದೆಂದು ಕಾಣದ ರೀತಿಯಲ್ಲಿ ಮಾಧ್ಯಮದ ಗಮನ ಸೆಳೆದಿದ್ದಕ್ಕೆ ಕಾರಣವನ್ನು ವಿವರಿಸುತ್ತಾರೆ. ಏಕೆಂದರೆ ಬೇರೆ ಕೆಲವು ರೋಗಗಳಂತೆ ಅದು ಗ್ರಾಮೀಣ ಪ್ರದೇಶ ಅಥವ ನಗರದ ಕೊಳಚೆ ಪ್ರದೇಶಕ್ಕೆ ಸೀಮಿತವಾಗಿರಲಿಲ್ಲ. ಪ್ಲೇಗಿನ ಬ್ಯಾಕ್ಟೀರಿಯಾ ನಗರದ ಪ್ರತಿಷ್ಠಿತರ ಜಾಗಗಳಿಗೂ ನುಗ್ಗುವ ಗಾಂಚಾಲಿತನ ತೋರಿತ್ತು. ಸಾಯಿನಾಥ್‌ರ ಮಾತುಗಳಲ್ಲಿ ಹೇಳುವುದಾದರೆ "ಅವು (ಬ್ಯಾಕ್ಟೀರಿಯಾ) ಕ್ಲಬ್ ಕ್ಲಾಸ್‌ನಲ್ಲಿ ಸಂಚರಿಸಿ ನ್ಯೂಯಾರ್ಕ್ ತಲುಪಬಹುದಿತ್ತು. ಆದ್ದರಿಂದ ಬಹಳಷ್ಟು ಸುಂದರ ವ್ಯಕ್ತಿಗಳು ಆತಂಕಕ್ಕೆ ಒಳಗಾಗಿದ್ದರು." ಕೋವಿಡ್–19 ಪ್ಲೇಗ್‌ಗಿಂತ ಕಡಿಮೆ ಅಪಾಯಕಾರಿಯಾದರೂ, ಅದು ಭಾರತಕ್ಕೆ ಬಂದಿದ್ದು ಸೋಂಕು ಪೀಡಿತ ದೇಶಗಳಿಂದ ಆಗಮಿಸಿದ ಪ್ರಯಾಣಿಕರಿಂದಾಗಿತ್ತು. ಈ ವಾದ ಒಡ್ಡುತ್ತಿರುವುದು ಈ ಎರಡೂ ಪಿಡುಗುಗಳನ್ನು ಹಗುರವಾಗಿ ತೆಗೆದುಕೊಳ್ಳುವ ಉದ್ದೇಶದಿಂದಲ್ಲ. ಬದಲಿಗೆ, ಆರೋಗ್ಯದ ವಿಷಯದಲ್ಲಿ ಭಾರತದ ಪ್ರತಿಸ್ಪಂದನೆ, ಅದರಿಂದ ಪೀಡಿತರಾದವರ ಸಾಮಾಜಿಕ ಮತ್ತು ವರ್ಗ ವಾಸಸ್ಥಾನಗಳ ಮೇಲೆ ಅವಲಂಬಿತವಾಗಿರುತ್ತದೆ ಎಂಬುದರ ಕುರಿತು ಬೆಳಕು ಚೆಲ್ಲುವುದು ಮಾತ್ರ ಇದರ ಉದ್ದೇಶ.

ಕೋವಿಡ್–19ರ ಆಗಮನದಿಂದ ಖಾಸಗಿ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಸಾಧ್ಯವಿದ್ದ ವರ್ಗಗಳು ಸರ್ಕಾರಿ ಆರೋಗ್ಯ ವ್ಯವಸ್ಥೆಗಳ ಮೇಲೆ ತಪಾಸಣೆ ಮತ್ತು ಪ್ರತ್ಯೇಕೀಕರಣಕ್ಕಾಗಿ (ಕ್ವಾರಂಟೈನ್‌ಗಾಗಿ) ಅವಲಂಬಿತರಾಗುತ್ತಿರುವ ವಿಚಿತ್ರ ಪರಿಸ್ಥಿತಿ ಉಂಟಾಗಿದೆ. ದಶಕಗಳಿಂದ ಭಾರತದ ಬಹುಸಂಖ್ಯಾತರು ಇಂತಹ ಸರಕಾರಿ ಆರೋಗ್ಯ ವ್ಯವಸ್ಥೆಯ ಮೇಲೆ ಅವಲಂಬಿಸಿದ್ದರು ಎಂದು ಕೆಲವು ಅನುಕೂಲಸ್ತರಿಗೆ ಗೋಚರವಾಗುವುದಕ್ಕೆ ಕೋವಿಡ್–19 ರಂತಹ ಪಿಡುಗೇ ಬರಬೇಕಾಯಿತು. ಆಗ್ರಾ ಮಹಿಳೆಯೊಬ್ಬರು ಕ್ವಾರಂಟೈನ್‌ನಿಂದ ತಪ್ಪಿಸಿಕೊಂಡ ವಿಷಯ ತಪ್ಪಾಗಿ ವರದಿಯಾಗಿದೆ. ವಾಸ್ತವವಾಗಿ "ಅನಾರೋಗ್ಯಕರ ಶೌಚಾಲಯ ವ್ಯವಸ್ಥೆ ಆಕೆಗೆ ವಾಕರಿಕೆ" ತರುವಂತೆ ಇದ್ದಿದ್ದರಿಂದ ಆಕೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಕ್ವಾರಂಟೈನ್ ಗೆ ಪ್ರತಿರೋಧ ತೋರಿದ್ದಳು. ಇದು ಸಾರ್ವಜನಿಕ ಆರೋಗ್ಯ ರಕ್ಷಣೆಗಾಗಿ ಮತ್ತು ಮೂಲ ಸೌಕರ್ಯಗಳಿಗಾಗಿ ಮೀಸಲಿಡುವ ಅತ್ಯಲ್ಪ ಅನುದಾನದ ಫಲ. ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯಕರ ಶೌಚಾಲಯಗಳನ್ನು ನಿರ್ವಹಿಸಲಾಗದ ಸಾರ್ವಜನಿಕ ಆರೋಗ್ಯ ಆಡಳಿತಕ್ಕೆ, ಕೋವಿಡ್–19 ನಿಜವಾಗಿಯೂ ಎದುರಿಸಲಾಗದ ಸವಾಲಾಗಿದೆ.

ಸಾಂಕ್ರಾಮಿಕ ಎದುರಿಸಲು ತಯಾರಿ:

ಭಾರತದ ಸಾರ್ವಜನಿಕ ಆರೋಗ್ಯದ ದಾಖಲೆಯ ಹಿನ್ನೆಲೆಯಲ್ಲಿ, ಕೊವಿದ್–19ರ ಈ ತುರ್ತು ಪರಿಸ್ಥಿತಿಯನ್ನು ನಿಭಾಯಿಸಿರುವ ರೀತಿಯ ಬಗ್ಗೆ ಕೇರಳವನ್ನು ಶ್ಲಾಘಿಸಲಾಗುತ್ತಿದೆ. ಇದಕ್ಕೆ ಬೇಕಾದ ಪೂರ್ವಭಾವಿ ಮೂಲಭೂತ ಸೌಕರ್ಯಗಳನ್ನು ಹಿಂದೆಯೇ ಒದಗಿಸಿದ್ದರಿಂದಾಗಿ ಮತ್ತು ನಿಫಾ ವೈರಸ್‌ನ ಸವಾಲನ್ನು ನಿಭಾಯಿಸಿದ ಅನುಭವದಿಂದಾಗಿ, ಕೇರಳ ಸರ್ಕಾರ ಉಳಿದ ರಾಜ್ಯ ಸರ್ಕಾರಗಳಿಗಿಂತ ಕೊವಿದ್–19ರ ಸವಾಲು ಎದುರಿಸುವ ಪೂರ್ವತಯಾರಿಯಲ್ಲಿ ಸಾಪೇಕ್ಷವಾಗಿ ಮುಂದಿತ್ತು. ಜನವರಿ ಮಧ್ಯ ಭಾಗದಿಂದಲೇ ಇದನ್ನು ಎದುರಿಸಲು ಕೈಗೊಳ್ಳುವ ಕ್ರಮಗಳ ಬಗ್ಗೆ ಚರ್ಚೆಯನ್ನು ಕೇರಳ ಸರ್ಕಾರ ಪ್ರಾರಂಭಿಸಿತ್ತು. ನಮ್ಮ ರಾಜ್ಯ ಕೊವಿದ್–19 ಪಿಡುಗು ಹರಡದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಪಟ್ಟಿ ತಯಾರಿಸಿದ ಮೊದಲ ರಾಜ್ಯವಾಗಿತ್ತು. ಜನವರಿ 30 ರಂದು ಕೊವಿದ್–19 ಪಾಸಿಟಿವ್ ಆದ ಮೊದಲ ಪ್ರಕರಣ ಗಮನಕ್ಕೆ ಬಂದ ನಂತರ ಕ್ರಮಗಳನ್ನು ಇನ್ನಷ್ಟು ಕಟ್ಟುನಿಟ್ಟಾಗಿಸಿ ಪಾಲಿಸಲಾಯಿತು. ಆ ನಂತರ ಸರಕಾರ ಇನ್ನಷ್ಟು ನಿಗಾ ವಹಿಸಿ ಸೋಂಕು ಖಚಿತವಾದವರ ಜತೆ ಪ್ರಾಥಮಿಕ ಮತ್ತು ಸ್ವಲ್ಪ ದೂರದ ಸಂಪರ್ಕ ಇರುವ ಎಲ್ಲರನ್ನು ಗುರುತಿಸಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿತು.

ಇಟಲಿಯಿಂದ ಹಿಂತಿರುಗಿದ ಒಂದು ಕುಟುಂಬ ತಪಾಸಣೆಗೆ ಒಳಗಾದಾಗ ಪಾಸಿಟಿವ್ ಫಲಿತಾಂಶ ಬಂದಿದ್ದರಿಂದ ಗಂಭೀರ ಸ್ಥಿತಿ ನಿರ್ಮಾಣವಾಯಿತು. ತೀವ್ರವಾದ ಹುಡುಕುವಿಕೆಯ ನಂತರ ಈ ಕುಟುಂಬದ ಸಂಪರ್ಕಕ್ಕೆ 719 ಜನ ಒಳಗಾಗಿದ್ದರು ಎಂಬುದು ಪತ್ತೆಯಾಯಿತು. ಆ ನಂತರ ವಿದೇಶಗಳಿಂದ ಹಿಂತಿರುಗುವ ಪ್ರಯಾಣಿಕರ ಬಗ್ಗೆ ಕ್ರಮಗಳನ್ನು ಸರ್ಕಾರ ತೀವ್ರಗೊಳಿಸಿತು. ಈ ಪ್ರಯಾಣಿಕರು ತಮ್ಮ ಪ್ರಯಾಣದ ಪೂರ್ಣ ವಿವರಗಳನ್ನು ನೀಡದಿದ್ದರೆ ತೀವ್ರ ಕ್ರಮಗಳಿಗೆ ಒಳಗಾಗಬೇಕಾಯಿತು. ಅವರ ಪ್ರಾಥಮಿಕ ಮತ್ತು ಸ್ವಲ್ಪ ದೂರದ ಸಂಪರ್ಕಕ್ಕೆ ಬಂದವರನ್ನು ಪ್ರತ್ಯೇಕಿಸಲಾಯಿತು ಅಥವಾ ಗೃಹದಲ್ಲಿ ಒಂಟಿಯಾಗಿ ಇರಿಸಲಾಯಿತು. ಮುಂದಿನ ಹಂತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಧಾರ್ಮಿಕ ಆಚರಣೆಗಳನ್ನು ನಿಷೇಧಿಸಲಾಯಿತು. ನಿಗಾ ವಹಿಸಲಾದವರ ಪಟ್ಟಿಯನ್ನು ಸರ್ಕಾರ ನೀಡಿತು. ಇತ್ತೀಚಿಗೆ ರಾಜ್ಯವನ್ನು ವಿವಿಧ ಕಡೆಯಿಂದ ವಿವಿಧ ರೀತಿಯಲ್ಲಿ ಪ್ರವೇಶಿಸುವ ಕಡೆಯಲ್ಲಿ ಜನರನ್ನು ತಪಾಸಣೆಗೆ ಒಳಪಡಿಸಲಾಯಿತು. ಆರೋಗ್ಯ ರಕ್ಷಣಾ ಕಾರ್ಯಕರ್ತರು ನಗರ ಪ್ರವೇಶದ ಚೆಕ್ ಪೋಸ್ಟ್‌ಗಳಲ್ಲಿ ನಿಂತು ತಪಾಸಣೆ ನಡೆಸಿದರು. ಹಾಗೆ ರೈಲ್ವೆ ನಿಲ್ದಾಣಗಳಲ್ಲಿ ಈ ಕ್ರಮ ಕೈಗೊಳ್ಳಲಾಯಿತು.

ಈ ಪರಿಸ್ಥಿತಿಯನ್ನು ಅತ್ಯಂತ ಸೂಕ್ತವಾಗಿ ನಿಭಾಯಿಸುವುದರ ಕುರಿತು ನಾವು ಚೀನಾ ಮತ್ತು ದಕ್ಷಿಣ ಕೊರಿಯಾದಿಂದ ಕಲಿಯಬೇಕಿರುವುದು ಎಂದರೆ, ವ್ಯಾಪಕವಾಗಿ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚುವುದು ಮತ್ತು ತಪಾಸಣೆ ಮಾಡುವುದು. ದ. ಕೋರಿಯಾದಲ್ಲಿ ವ್ಯಾಪಕ ತಪಾಸಣೆಯಿಂದಾಗಿ ಮಾತ್ರ ಲಾಕ್‌ಡೌನ್ ಮಾಡದೇ ಬಿಕ್ಕಟ್ಟನ್ನು ನಿಭಾಯಿಸುವುದು ಸಾಧ್ಯವಾಯಿತು. ಆದರೆ ಕೇರಳದಲ್ಲಿ ಆರೋಗ್ಯಸೇವೆಯ ಉತ್ತಮ ಸೌಲಭ್ಯಗಳಿದ್ದರೂ ಇಂತಹ ಉತ್ತಮ ಆದರ್ಶ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗದಿರುವುದಕ್ಕೆ ಕಾರಣ ಸೀಮಿತ ಸಂಪನ್ಮೂಲ ಮತ್ತು ತಪಾಸಣಾ ಪ್ರಯೋಗಶಾಲೆಗಳು. ಆದ್ದರಿಂದ ಇಂತಹ ಪರಿಸ್ಥಿತಿಯಲ್ಲಿ ನಾವು ಬಹಳ ಜಾಣತನದಿಂದ ನಮ್ಮ ಸೌಲಭ್ಯವನ್ನು ಉಪಯೋಗಿಸಬೇಕಾಗಿದೆ ಮತ್ತು ಸ್ಥಳೀಯ ಪ್ರಯತ್ನಗಳನ್ನು ಹೆಚ್ಚಿಸಬೇಕಾಗಿದೆ. ಇದನ್ನು ಸಾಧಿಸಬೇಕಾದರೆ ಬಲವಾದ ರಾಜಕೀಯ ಬದ್ಧತೆ, ಬಲವಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಮತ್ತು ಜನರ ಬದ್ಧತೆ ಬೇಕಾಗಿರುತ್ತದೆ. ಸರ್ಕಾರ ಸೂಚಿಸುವ ಕ್ರಮಗಳನ್ನು ಪ್ರಜೆಗಳು ಅನುಸರಿಸುವುದು ಮುಖ್ಯ. ಇದರಲ್ಲಿ ಮುಖ್ಯವಾದ ವಿಷಯವೆಂದರೆ ಸಾರ್ವಜನಿಕರು ಕಾರಣವಿಲ್ಲದೇ ತಪಾಸಣಾ ಕೇಂದ್ರಗಳಿಗೆ ಹೋಗದಿರುವುದು, ಹೀಗೆ ಹೋಗುವುದರಿಂದ ಪ್ರಯೋಗಾಲಯಗಳ ಮೇಲೆ ಒತ್ತಡ ಹೆಚ್ಚಾಗುತ್ತದೆ.


ಸ್ವಯಂ–ಪ್ರತ್ಯೇಕತೆ ಅನುಸರಿಸುವಾಗ ಕೈಗೊಳ್ಳುವ ಕ್ರಮಗಳ ಬಗ್ಗೆ, ರೋಗಲಕ್ಷಣಗಳನ್ನು ಗುರುತಿಸಲು ಮತ್ತು ವರದಿ ಮಾಡುವುದಕ್ಕೆ ಕೇರಳ ಸರ್ಕಾರ 'ಜಿಓಕೆ ಡೈರೆಕ್ಟ್' ಎಂಬ ಮೊಬೈಲ್ ಆ್ಯಪ್ ಸಿದ್ಧಪಡಿಸಿದೆ. 'ದಿಶಾ' ಹೆಲ್ಪ್‌ಲೈನ್ ಜನಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಅದರ ಮುಖಾಂತರ ಕೊವಿದ್ 19 ಪಿಡುಗಿನ ಹರಡುವಿಕೆಯ 'ಸರಣಿ ಕತ್ತರಿಸುವ' (ಬ್ರೇಕ್ ದಿ ಚೈನ್) ಪ್ರಚಾರದಲ್ಲಿ ಶುಚಿ ಮತ್ತು ನೈರ್ಮಲ್ಯದ ಬಗ್ಗೆ ತಿಳಿಸಲಾಗುತ್ತಿದೆ. ಈ ಕ್ರಮಗಳಿಂದ ಸ್ವಭಾವದ ಬದಲಾವಣೆ ತರುತ್ತಿರುವುದು ರಾಜ್ಯದ ಮತ್ತು ರಾಷ್ಟ್ರದ ಮಾಧ್ಯಮದಲ್ಲೂ ಪ್ರಕಟವಾಗುತ್ತಿದೆ. ಈ ರೀತಿಯ ಮುಂಜಾಗರೂಕತಾ ಕ್ರಮ ಮತ್ತು ಸಾಮಾಜಿಕ ಅಂತರ ಕಾಪಿಟ್ಟುಕೊಂಡರೆ ಸಾರ್ವಜನಿಕ ಮತ್ತು ಸರಕಾರದ ಸಂಪನ್ಮೂಲಗಳ ಮೇಲೆ ಉಂಟಾಗುವ ಒತ್ತಡವನ್ನು ಮುಂದೂಡಬಹುದು. ಹೀಗೆ ಗಳಿಸಿದ ಅವಧಿಯಲ್ಲಿ ಮುಂದೆ ಸೋಂಕು ಹರಡಿ ಅಗತ್ಯ ಬಿದ್ದರೆ ಹೆಚ್ಚು ಹೆಚ್ಚು ಜನರನ್ನು ತಲುಪಲು ಸಾಧ್ಯವಾಗುವಂತೆ ತಪಾಸಣಾ ಸೌಲಭ್ಯಗಳನ್ನು ನಿರ್ಮಿಸಬಹುದು. ಸರ್ಕಾರದ ವಿನಂತಿಯ ಮೇರೆಗೆ ಐ.ಸಿ.ಎಂ.ಆರ್ (ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರೀಸರ್ಚ್) ಕೇರಳಕ್ಕೆ 10 ಪರೀಕ್ಷಾ ಕೇಂದ್ರಗಳನ್ನು ಮಂಜೂರು ಮಾಡಿದೆ. ಸರ್ಕಾರಕ್ಕೆ ಖಾಸಗಿ ಭಾಗಿತ್ವದೊಡನೆ ಇನ್ನು ಹೆಚ್ಚಿನ ಪ್ರಯೋಗಾಲಯಗಳನ್ನು ಸ್ಥಾಪಿಸುವ ಯೋಜನೆಯಿದೆ.

ಕೇರಳಕ್ಕೆ ಮತ್ತು ಕೇರಳದಿಂದ ಪಾಠಗಳು

ಕೇರಳದಲ್ಲಿ ಚಾರಿತ್ರಿಕವಾಗಿ ಸಶಕ್ತ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಸರ್ಕಾರ ನೀಡಿರುವ ಧೃಡವಾದ ಬೆಂಬಲದಿಂದಾಗಿ, ಕೊವಿದ್ 19 ಹರಡುವ ಮೊದಲು ಕ್ರಮಗಳ ಬಗ್ಗೆ ನಿರ್ಣಯಿಸುವುದಕ್ಕೆ ಸಾಧ್ಯವಾಯಿತು. ಆಡಳಿತ ಒಳ್ಳೆಯ ಆರೋಗ್ಯ ವ್ಯವಸ್ಥೆ ಕಾಪಾಡಿ ಬೆಳೆಸಲು ವೇಗವರ್ಧಕವಾಗಿ ಕೆಲಸ ಮಾಡಿದೆ. ಇದು ಆರೋಗ್ಯ ಮೂಲ ಸೌಲಭ್ಯದ ವಿಸ್ತರಣೆಯಲ್ಲಿ ಕಂಡು ಬರುತ್ತದೆ. ಉದಾಹರಣೆಗೆ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ವೈರೋಲಜಿ ಘಟಕವನ್ನು ಅಲೆಪ್ಪಿಯಲ್ಲಿ ನಿಫಾ ವೈರಸ್ ಕಂಡು ಬಂದ ನಂತರ ಸ್ಥಾಪಿಸಿರುವುದು.

ಇತ್ತೀಚಿನ ದಿನಗಳಲ್ಲಿ ಉಂಟಾಗಿರುವ ಸಾಂಕ್ರಾಮಿಕ ಮತ್ತು ಅಸಾಂಕ್ರಮಿಕ ರೋಗಗಳಿಂದ ಉಂಟಾದ ಒತ್ತಡವನ್ನು ನಿರ್ವಹಿಸಿರುವ ರೀತಿಯಿಂದ ರಾಜ್ಯದ ಸೋಂಕುಶಾಸ್ತ್ರೀಯ ಪರಿಸ್ಥಿತಿಯನ್ನು ಗುರುತಿಸಲಾಗುತ್ತಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ನಿಗಾ ಇಡಲು ಸರಕಾರ ಸ್ಥಾಪಿಸಿರುವ ಉಸ್ತುವಾರಿ ವ್ಯವಸ್ಥೆ ಅತ್ಯಂತ ಯಶಸ್ವಿಯಾಗಿದೆ. ಇದರಿಂದ ಆರೋಗ್ಯ ಅಧಿಕಾರಿಗಳು ವೇಗವಾಗಿ ರೋಗ ಗುರುತಿಸುವುದಕ್ಕೂ ತಡೆಯುವುದಕ್ಕೂ ಸಾಧ್ಯವಾಗಿದೆ. ಸೇವೆಯನ್ನು ಕ್ಷಿಪ್ರವಾಗಿ ಮತ್ತು ವ್ಯಾಪಕವಾಗಿ ಹೆಚ್ಚಿನ ಜನರನ್ನು ತಲುಪುವ ಗುರಿ ಸಾಧಿಸಲು ಆರೋಗ್ಯಸೇವಾ ವ್ಯವಸ್ಥೆಯನ್ನು ವಿಕೇಂದ್ರಿಕರಿಸಲಾಗಿದೆ. ಇದರ ಫಲಿತವಾಗಿಯೇ ಕೋವಿಡ್–19 ರ ಸಂದರ್ಭದಲ್ಲಿ ವೈಯುಕ್ತಿಕ ಪ್ರಕರಣಗಳನ್ನು ಪತ್ತೆ ಹಚ್ಚಿ ಅದರ ಜಾಡು ಹಿಡಿಯುವುದರಲ್ಲಿ ಮತ್ತು 'ಸರಣಿ ತುಂಡರಿಸುವ' ಪ್ರಚಾರ ಕಾರ್ಯಕ್ರಮಗಳಲ್ಲಿ ಯಶಸ್ವಿಯಾಗಿವೆ.

ಆರೋಗ್ಯ ಸೇವೆಯ ಗುಣಮಟ್ಟ ಮತ್ತು ಮೂಲಭೂತ ಸೌಕರ್ಯ ಹೆಚ್ಚಿಸಲು 'ಆರ್ದ್ರ ಮಿಶನ್' ಮುಖಾಂತರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕುಟುಂಬ ಆರೋಗ್ಯ ಕೇಂದ್ರಗಳಾಗಿ ಅಭಿವೃದ್ಧಿ ಪಡಿಸುವತ್ತ ಹೆಜ್ಜೆ ಹಾಕುತ್ತಿದ್ದೇವೆ. ಸರ್ಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಮತ್ತೆ ಇನ್ನಷ್ಟು ಉತ್ತಮ ಹಾದಿಯಲ್ಲಿ ಒಯ್ಯಲು ಯಶಸ್ವಿಯಾಗಿದೆ.





ಕೊರೋನಾ ವೈರಾಣು ಸವಾಲಿಗೆ ಕೇರಳದ ಉತ್ತರ

ದೈಹಿಕ ಅಂತರ, ಸಾಮಾಜಿಕ ಒಗ್ಗಟ್ಟು ನಮ್ಮ ಗುರಿ



ಪಿಣರಾಯಿ ವಿಜಯನ್

ಕೋವಿಡ್–19 ಮಹಾಮಾರಿಯನ್ನು ಎದುರಿಸುವಲ್ಲಿ ಕೇರಳದ ಸಾಧನೆ ಎಲ್ಲೆಡೆಗಳಲ್ಲೂ ಶ್ಲಾಘನೆಗೆ ಪಾತ್ರವಾಗಿದೆ. ದೇಶದಲ್ಲಿ ಮೊತ್ತ ಮೊದಲ ಕೊರೊನಾ ವೈರಸ್ ಸೋಂಕು ಪತ್ತೆಯಾದದ್ದು ಕೇರಳದಲ್ಲೇ ಆದರೂ ಇದುವರೆಗಿನ ಭಾರತದಲ್ಲಿ ವರದಿಯಾಗಿರುವ 17 ಸಾವುಗಳಲ್ಲಿ ಅಲ್ಲಿಂದ ಯಾವುದೂ ಇಲ್ಲ ಎಂಬುದು ಗಮನಾರ್ಹ. ಕೇರಳ ಈ ಮಹಾ ಸವಾಲನ್ನು ಹೇಗೆ ಯಶಸ್ವಿಯಾಗಲು ಎದುರಿಸಲು ಸಾಧ್ಯವಾಯಿತು? ಕೇರಳದ ಎಲ್‌ಡಿಎಫ್ ಸರಕಾರ ಹೇಗೆ ಯೋಜನಾಬದ್ಧವಾಗಿ ಎಲ್ಲ ಲಭ್ಯ ಸಂಪನ್ಮೂಲ–ಸಾಧನಗಳನ್ನು ಬಳಸಿ ಈ ಮಹಾಮಾರಿಯನ್ನು ಎದುರಿಸುತಿದೆ ಎಂಬುದರ ಒಂದು ಚಿತ್ರಣ ಆ ರಾಜ್ಯದ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಪಿಣರಾಯಿ ವಿಜಯನ್‌ರವರ ಈ ಲೇಖನದಲ್ಲಿ ಸಿಗುತ್ತದೆ. ಕೋವಿಡ್–19ನ್ನು ಎದುರಿಸುವಾಗ ನಮ್ಮ ಗುರಿ 'ದೈಹಿಕ ಅಂತರ, ಸಾಮಾಜಿಕ ಒಗ್ಗಟ್ಟು' ಎಂಬುದಾಗಿತ್ತು ಎನ್ನುತ್ತಾರೆ ಅವರು.

ಅನು: ಟಿ ಸುರೇಂದ್ರ ರಾವ್

ಆಗ ಡಿಸೆಂಬರ್ 2019ರ ಉತ್ತರಾರ್ಧ. ಚೈನಾದ ಹುಬೆ ಪ್ರಾಂತದ ವುಹಾನ್ ನಗರದಲ್ಲಿ ಒಂದು ರೋಗ ಹರಡುತ್ತಿತ್ತು. ಅದೊಂದು ಹೊಸರೀತಿಯ ಕೊರೋನಾ ವೈರಾಣು **ಸಾರ್ಸ್ CoV-2** ಎಂದು ಕಂಡು ಹಿಡಿಯಲಾಯಿತು, ಈಗ ಮೂರು ತಿಂಗಳು ಕಳೆದಿದೆ. ಕೊರೋನಾ ವೈರಾಣು ರೋಗ **ಕೋವಿಡ್–19** ಜಗತ್ತಿನ 195 ದೇಶಗಳನ್ನು ಬಾಧಿಸುತ್ತಿದೆ. ಇಡೀ ಜಗತ್ತು ಈ ಸರ್ವವ್ಯಾಪಿ ಮಹಾಮಾರಿಯ ವಶವಾಗಿದೆ. ಈ 'ಮಹಾಮಾರಿ ವೇಗವಾಗಿ ಹಬ್ಬುತ್ತಿದೆ' ಎಂದು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯು.ಹೆಚ್.ಒ) ನಮ್ಮನ್ನು ಎಚ್ಚರಿಸಿದೆ. 67 ದಿನಗಳಲ್ಲಿ 1,00,000 ಪ್ರಕರಣಗಳಿದ್ದದ್ದು, ನಂತರದ 11 ದಿನಗಳಲ್ಲಿ 2,00,000 ತಲುಪಿತು, ಮತ್ತು ಈಗ 4 ದಿನಗಳ ಹಿಂದೆ 3,00,000 ಮುಟ್ಟಿದೆ.

ಆರಂಭದ ಸಿದ್ಧತೆ

ಡಬ್ಲ್ಯು.ಹೆಚ್.ಒ ಮತ್ತು ಕೇಂದ್ರ ಸರ್ಕಾರದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯಗಳು ಕಳಿಸಿದ್ದ ನಿರ್ದೇಶನಗಳು ಮತ್ತು ಮಾರ್ಗದರ್ಶನಗಳನ್ನು 2020ರ ಜನವರಿ 18 ಮತ್ತು 22ರ ನಡುವೆ ಕೇರಳ ಸರ್ಕಾರವು ತನ್ನ 14 ಜಿಲ್ಲೆಗಳೊಂದಿಗೆ ಹಂಚಿಕೊಂಡಿತು. ರಾಜ್ಯ ಮಟ್ಟದ 'ರ್‍ಯಾಪಿಡ್ ಆಕ್ಷನ್ ಫೋರ್ಸ್'(ತ್ವರಿತ ಕ್ರಿಯಾಚರಣೆ ಪಡೆ) ಸಭೆ ಸೇರಿತು. ಪರಿಶೀಲನೆ, ಪ್ರಯೋಗಾಲಯಗಳು, ಚಿಕಿತ್ಸೆ ಮತ್ತು ತರಬೇತಿಗೆ ಮಾರ್ಗದರ್ಶನಗಳನ್ನು ಸಿದ್ಧಪಡಿಸಿತು. ಮತ್ತು ಎಲ್ಲಾ ಜಿಲ್ಲೆಗಳೊಂದಿಗೆ ಹಂಚಿಕೊಳ್ಳಲಾಯಿತು. ಯಾವುದೇ ಸಂಭವನೀಯ ಘಟನೆಗಳನ್ನು ಎದುರಿಸಲು ಜಿಲ್ಲಾ ಮಟ್ಟದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಮಾಡಿಕೊಳ್ಳಲಾಯಿತು. ತದನಂತರ, ಚೈನಾದಿಂದ ಬರುವ ಎಲ್ಲಾ ಪ್ರಯಾಣಿಕರನ್ನು ಕೊಚ್ಚಿ ವಿಮಾನ ನಿಲ್ದಾಣದಲ್ಲಿ ತಪಾಸಣೆಗೆ ಒಳಪಡಿಸಲಾಯಿತು. ಚೈನಾದಿಂದ ಬಂದ ಎಲ್ಲಾ ಪ್ರಯಾಣಿಕರ ಮೇಲೆ ನಿಗಾ ಇಡಲು ಹೊರವಲಯದ ಆರೋಗ್ಯ ಪಡೆಗಳನ್ನು ರಚಿಸಲಾಯಿತು. ಎಲ್ಲಾ ಸಂಭವನೀಯ ಪ್ರಕರಣಗಳ ಜಾಡು ಹಿಡಿದು ಪಟ್ಟಿ ಮಾಡಿ ಅವರ ಸಂಪರ್ಕಗಳ ಮೇಲೆ ನಿಗಾ ಇಡಲು ಜಿಲ್ಲಾ ಸಮಗ್ರ ರೋಗ ನಿಗಾವಣೆ ಕಾರ್ಯಕ್ರಮ ಕೋಶಗಳು(ಡಿಸ್ಟ್ರಿಕ್ಟ್ ಇಂಟೆಗ್ರೇಟೆಡ್ ಡಿಸೀಸ್ ಸರ್ವಲಿಯನ್ಸ್ ಪ್ರೊಗ್ರಾಮ್ ಸೆಲ್ಸ್) ಶುರುಮಾಡಿದವು.

ಅಂತರ್‍ರಾಷ್ಟ್ರೀಯವಾಗಿ ರೋಗವು ಉಲ್ಬಣಿಸಿ ಹಬ್ಬುವುದರೊಂದಿಗೆ ಮತ್ತು ವಿದೇಶಗಳಿಂದ ಕೇರಳಕ್ಕೆ ಬರುವ ಜನಗಳ ಸಂಖ್ಯೆ ಹೆಚ್ಚಾಗುವುದರೊಂದಿಗೆ, ನಮ್ಮ ರಾಜ್ಯದಲ್ಲೂ ಕೋವಿಡ್–19 ಸೋಂಕಿನ ಸಾಧ್ಯತೆಯನ್ನು ಗಂಭೀರವಾಗಿ ತೆಗೆದುಕೊಳ್ಳಲಾಯಿತು. ಎಲ್ಲಾ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚನೆ ಕೊಟ್ಟು ಅವರವರ ಜಿಲ್ಲಾ ವ್ಯಾಪ್ತಿಯ ಎಲ್ಲಾ ವೈದ್ಯಕೀಯ ಕಾಲೇಜುಗಳು, ಸಾರ್ವಜನಿಕ ಆಸ್ಪತ್ರೆಗಳು, ಜಿಲ್ಲಾ ಅಸ್ಪತ್ರೆಗಳು ಹಾಗೂ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿ ಐಸೊಲೇಷನ್(ರೋಗಿಗಳನ್ನು ಪ್ರತ್ಯೇಕಗೊಳಿಸಿ ಇಡುವ ಏಕಾಂತ) ಸೌಲಭ್ಯಗಳನ್ನು ಸಿದ್ಧಪಡಿಸಲು ಹೇಳಲಾಯಿತು. ಐಸೊಲೇಷನ್ ಹಾಸ್ಪಿಟಲ್ ಹಾಗೂ ಮನೆ ಕ್ವಾರಂಟೈನ್(ಸಂಪರ್ಕ ನಿಷೇಧ)ಗಳಿಗೆ ಸಂಬಂಧಪಟ್ಟ ಅಗತ್ಯತೆಗಳ ಬಗ್ಗೆ ಕೂಡ ನಿರ್ದೇಶನಗಳನ್ನು ಕಳಿಸಲಾಯಿತು. 2020ರ ಜನವರಿ 4 ರಂದೇ ಆರೋಗ್ಯ ಸೇವೆಗಳ ನಿರ್ದೇಶನಾಲಯದಲ್ಲಿ ನಿಯಂತ್ರಣ ಕೊಠಡಿಯೊಂದನ್ನು ಆರಂಭಿಸಲಾಯಿತು. ಜನವರಿ 25 ರಂದು ಅಳವಡಿಸಿಕೊಳ್ಳಬೇಕಾದ ಕ್ರಮಗಳ ಬಗ್ಗೆ ಆರೋಗ್ಯ ಸಿಬ್ಬಂದಿಗಳಿಗೆ ಮತ್ತು ಸ್ಥಳೀಯ ಸ್ವಯಮಾಡಳಿತ ಕಛೇರಿಗಳಿಗೆ ಅಗತ್ಯ ಮಾರ್ಗದರ್ಶನಗಳನ್ನು ನೀಡಲಾಯಿತು. ಜನವರಿ 28ರ ಹೊತ್ತಿಗೆ ಎಲ್ಲಾ ಜಿಲೆಗಳಲ್ಲೂ ನಿಯಂತ್ರಣ ಕೊಠಡಿಗಳನ್ನು ಪ್ರಾರಂಭಿಸಲಾಯಿತು.

ಆರಂಭದ ಪ್ರಕರಣಗಳು

ಜನವರಿ 30 ರಂದು ಭಾರತದ ಮೊಟ್ಟ ಮೊದಲ ಕೋವಿಡ್–19 ಸೋಂಕಿನ ಪ್ರಕರಣ ಕೇರಳದಲ್ಲಿ ಇರುವುದನ್ನು ಕೇಂದ್ರ ಆರೋಗ್ಯ ಸಚಿವಾಲಯ ದೃಢಪಡಿಸಿತು. ವುಹಾನಿನಿಂದ ಹಿಂತಿರುಗಿದ್ದ ವಿದ್ಯಾರ್ಥಿಯೊಬ್ಬ ತ್ರಿಶೂರ್‌ನ ಸಾರ್ವಜನಿಕ ಆಸ್ಪತ್ರೆಯಲ್ಲಿ ಏಕಾಂತ ಕೊಠಡಿಯ ಚಿಕಿತ್ಸೆ ಪಡೆಯುತ್ತಿದ್ದ. ತದನಂತರ, ಫೆಬ್ರವರಿ 2 ಮತ್ತು 3 ರಂದು ಎರಡು ಮತ್ತು ಮೂರನೇ ಪ್ರಕರಣಗಳು ದೃಢಪಟ್ಟವು. ಅವರೂ ಕೂಡ ವುಹಾನಿನಿಂದ ಹಿಂತಿರುಗಿದ ವಿದ್ಯಾರ್ಥಿಗಳೇ ಆಗಿದ್ದರು. 'ರಾಜ್ಯ ವಿಪತ್ತು' ಎಂದು ಘೋಷಿಸಿ ತುರ್ತು ಕ್ರಮಗಳನ್ನು ಆರಂಭಿಸಲಾಯಿತು.

ಈ ಆರಂಭದ ಹಂತದಲ್ಲೇ ಆರೋಗ್ಯ ಸಚಿವೆ, ಆರೋಗ್ಯ ಕಾರ್ಯದರ್ಶಿ ಮತ್ತು ವೈದ್ಯಕೀಯ ಸೇವೆಗಳ ನಿರ್ದೇಶಕರು ಸಭೆ ಸೇರಿ ತುರ್ತಾಗಿ ಕೈಗೊಳ್ಳಬೇಕಾದ ಅಗತ್ಯ ಕೆಲಸಗಳ ಕುರಿತು ನಿರ್ಧಾರ ಮಾಡಿದರು. ರಾಜ್ಯ ಹಾಗೂ ಜಿಲ್ಲಾ ಮಟ್ಟದ ತ್ವರಿತ ಸ್ಪಂದನಾ ತಂಡಗಳ(ರ್‍ಯಾಪಿಡ್ ರೆಸ್ಪಾನ್ಸ್ ಟೀಮ್ಸ್) ಸಭೆಯನ್ನು ಕರೆಯಲಾಯಿತು. ಫೆಬ್ರವರಿ 1 ರಂದು, ರಾಷ್ಟ್ರೀಯ ವೈರಾಣುಶಾಸ್ತ್ರ ಸಂಸ್ಥೆ(ನ್ಯಾಷನಲ್ ಇನಿಸ್ಟಿಟ್ಯೂಟ್ ಆಫ್ ವೈರಾಲಜಿ)ಯ ಅಳಪುಳ ಘಟಕವು ಮಾದರಿಗಳನ್ನು ಪರೀಕ್ಷಿಸಲು ಸಿದ್ಧವಾಯಿತು. ರಾಜ್ಯ ಹಾಗೂ ಜಿಲ್ಲಾ ನಿಯಂತ್ರಣ ಕೊಠಡಿಗಳು ಹಗಲೂ ಇರುಳೂ ಕಾರ್ಯನಿರ್ವಹಿಸಲು ಪ್ರಾರಂಭಿಸಿದವು. ಗೊತ್ತುಪಡಿಸಿದ ಆಸ್ಪತ್ರೆಗಳಲ್ಲಿ ಏಕಾಂತ ಸೌಲಭ್ಯಗಳನ್ನು ಇನ್ನೂ ಬಲಪಡಿಸಲಾಯಿತು. ರೋಗ ಲಕ್ಷಣಗಳಿದ್ದು ಏಕಾಂತ ಸೌಲಭ್ಯದ ಅಗತ್ಯವಿರುವವನ್ನು ಆರೈಕೆ ಮಾಡಲು ಪ್ರತೀ ಜಿಲ್ಲೆಯಲ್ಲೂ ಕೊನೇ ಪಕ್ಷ ಎರಡು ಆಸ್ಪತ್ರೆಗಳು ಮುಂದಾದವು. ನಾವು ಸಾಕಷ್ಟು ಮುಂಚೆಯೇ ತಯಾರಿ ಮಾಡಿಕೊಂಡಿದ್ದರಿಂದ ಆರಂಭದ ಪ್ರಕರಣಗಳಿಂದ ಬೇರೆಯವರಿಗೆ ರೋಗ ಹರಡುವುದನ್ನು ತಡೆಯಲು ಸಾಧ್ಯವಾಯಿತು. ಆರಂಭದ ಎಲ್ಲಾ ಪ್ರಕರಣಗಳಲ್ಲೂ ರೋಗಿಗಳು ಫೆಬ್ರವರಿ ಮೂರನೇ ವಾರದ ಹೊತ್ತಿಗೆ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಹೆಚ್ಚುವರಿ ಕ್ರಮಗಳು

ಎಲ್ಲಾ ಚಿತ್ರಮಂದಿರಗಳಲ್ಲೂ ಕೋವಿಡ್–19 ಕುರಿತ ಜಾಗೃತಿಗಾಗಿ ದೃಶ್ಯಸುರುಳಿ(ವೀಡಿಯೋ)ಯನ್ನು ಪ್ರದರ್ಶಿಸಲಾಗುತ್ತಿದೆ. ಟಿ.ವಿ. ಹಾಗೂ ಎಫ್.ಎಂ. ರೇಡಿಯೋ ಚಾನಲುಗಳಲ್ಲಿ ರೋಗ ಕುರಿತ ಮಾಹಿತಿಗಳನ್ನು ಪ್ರಚಾರ ಮಾಡಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿಯೂ ಜನಜಾಗೃತಿ ಪ್ರಚಾರ ಕೈಗೊಳ್ಳಲಾಗಿದೆ. ಅದೇ ಸಮಯದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದವರಿಗೆ ದಂಡ ವಿಧಿಸಲಾಗಿದೆ. ಆರೋಗ್ಯ ಇಲಾಖೆಯು ಸ್ಮಾರ್ಟ್ ಕ್ಲಾಸ್ ರೂಮ್‌ಗಳ ಮೂಲಕ 40 ಲಕ್ಷ ಶಾಲಾ ಮಕ್ಕಳಿಗೆ ಜಾಗೃತಿ ಮೂಡಿಸುತ್ತಿದೆ. ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ಕಟ್ಟುನಿಟ್ಟಾದ ತಪಾಸಣೆ ನಡೆಸಲಾಗುತ್ತಿದೆ. ಇಟಲಿ ಮತ್ತು ಇರಾನಿನಲ್ಲಿ ರೋಗದ ಹರಡುವಿಕೆ ವರದಿಯಾಗುತ್ತಿದ್ದಂತೆ ಇನ್ನೂ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಚೈನಾ, ಹಾಂಗ್‌ಕಾಂಗ್, ಥೈಲ್ಯಾಂಡ್, ಸಿಂಗಪೂರ್, ಜಪಾನ್, ದಕ್ಷಿಣ ಕೊರಿಯಾ, ವಿಯೆಟ್ನಾಂ, ನೇಪಾಳ, ಇಂಡೋನೇಶ್ಯಾ, ಮಲೇಶಿಯಾ, ಇರಾನ್ ದೇಶಗಳಿಂದ ಬರುವವರಿಗೆ ಅಥವಾ ಫೆಬ್ರವರಿ 10, 2020 ರಿಂದೀಚೆಗೆ ಈ ದೇಶಗಳಿಗೆ ಹೋಗಿಬಂದ ಚರಿತ್ರೆ ಇರುವವರಿಗೆ 14 ದಿನಗಳ ಕಡ್ಡಾಯ ಮನೆ ಏಕಾಂತ ವಿಧಿಸಲಾಗಿದೆ.

ದೇಶದ ಇತರೆ ರಾಜ್ಯಗಳಲ್ಲಿಯೂ ಹೊಸ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸಂಪುಟ ಕಾರ್ಯದರ್ಶಿಯವರು ಆ ರಾಜ್ಯಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ನಡೆಸಿದ್ದಾರೆ. ಕೇರಳ ಆರೋಗ್ಯ ಇಲಾಖೆಯ ಪ್ರಯತ್ನಗಳನ್ನು ಅವರು ಮೆಚ್ಚಿದರು ಮತ್ತು ಆ ಕುರಿತ ಪ್ರಾತ್ಯಕ್ಷಿಕೆಯ ಮೂಲಕ ನಿರೂಪಣೆ ಮಾಡಿ ತೋರಿಸಿ ಎಂದು ಕೇರಳ ಮುಖ್ಯ ಕಾರ್ಯದರ್ಶಿಯನ್ನು ಕೇಳಿಕೊಂಡರು. ಕೇರಳವು ಅಭಿವೃದ್ಧಿಪಡಿಸಿದ ಮಾದರಿ ನಿರ್ವಹಣಾ ವಿಧಾನ(ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್)ವನ್ನು ಉಳಿದ ರಾಜ್ಯಗಳೂ ಅನುಸರಿಸಬೇಕೆಂದು ಅವರು ನಿರ್ದೇಶನ ನೀಡಿದರು. ವೈರಾಣುವನ್ನು ಹಿಮ್ಮೆಟ್ಟಿಸಲು ಉಳಿದ ರಾಜ್ಯಗಳ ಪ್ರಯತ್ನಗಳಿಗೆ ಕೇರಳ ಬೆಂಬಲ ನೀಡಬೇಕೆಂದೂ ಅವರು ಕೋರಿದರು.

ನಂತರದ ಪ್ರಕರಣಗಳು ಮತ್ತು ಕಾರ್ಯರೂಪದ ಉತ್ತರ

ದೊಡ್ಡ ಸಂಖ್ಯೆಯ ವಲಸೆ ಸಮುದಾಯದ ಬೀಡಾಗಿರುವ ಕೇರಳವು ಜಗತ್ತಿನ ಬೇರೆ ಕಡೆಗಳಿಂದ ರಾಜ್ಯಕ್ಕೆ ಪ್ರತಿನಿತ್ಯ ಬರುವ ಮಲಯಾಳಿಗಳನ್ನು ಹೊಂದಿದೆ. ಪ್ರವಾಸಿಗರ ಒಂದು ಜನಪ್ರಿಯ ತಾಣವಾದ್ದರಿಂದ ರಾಜ್ಯವು ಹೆಚ್ಚು ಅಂತರ್‍ರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಮಾರ್ಚ್ 8ರ ನಂತರ ನಾವು ನೋಡುತ್ತಿರುವ ಪ್ರಕರಣಗಳ ಈಗಿನ ಗುಂಪು ಬಹುತೇಕ ವಿದೇಶಗಳಿಂದ ಮುಖ್ಯವಾಗಿ ಯೂರೋಪು ಹಾಗೂ ಕೊಲ್ಲಿಯಿಂದ ಬಂದವರದ್ದಾಗಿದೆ. ಕೆಲವೇ ಕೆಲವು ಪ್ರಕರಣಗಳು ಅಂತಹ ವ್ಯಕ್ತಿಗಳ ಜತೆಗಿನ ಸಂಪರ್ಕದಿಂದ ಆದವು ಎಂದು ವರದಿಯಾಗಿವೆ. ಈ ಪ್ರಥಮ ಹಾಗೂ ದ್ವಿತೀಯ ವರ್ಗಗಳ ಹೊರತಾಗಿ ವಿಶೇಷ ಎಚ್ಚರ ವಹಿಸಿ ತೃತೀಯ ವರ್ಗದ ಪ್ರಕರಣಗಳು ರಾಜ್ಯದಲ್ಲಿ ಇಲ್ಲದಿರುವಂತೆ ಖಾತ್ರಿಪಡಿಸಲಾಗುತ್ತಿದೆ.

ಮಾರ್ಚ್ 24ರ ಹೊತ್ತಿಗೆ, ಕೋವಿಡ್–19ರ 109 ಪ್ರಕರಣಗಳು ಕೇರಳದಲ್ಲಿ ವರದಿಯಾಗಿವೆ. ಇವುಗಳಲ್ಲಿ, ನಾಲ್ವರನ್ನು ಗುಣಪಡಿಸಿ ಮನೆಗೆ ಕಳಿಸಲಾಗಿದೆ, ಮತ್ತು 105 ಸೋಂಕಿತರು ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 72,460 ಮಂದಿ ನಿಗಾವಣೆಯಲ್ಲಿದ್ದಾರೆ, ಅವುಗಳಲ್ಲಿ 466 ಆಸ್ಪತ್ರೆ ಆರೈಕೆಯಲ್ಲಿದ್ದಾರೆ. 4,516 ಮಾದರಿಗಳನ್ನು ಪರೀಕ್ಷೆಗೆ ಕಳಿಸಲಾಗಿದೆ, ಅದರಲ್ಲಿ 3,331ರ ಫಲಿತಾಂಶ ಋಣಾತ್ಮಕ(ನೆಗೆಟೀವ್)ವಾಗಿ ಬಂದಿವೆ. ರಾಜ್ಯವು ಧನಾತ್ಮಕ ಪ್ರಕರಣಗಳ ಏರಿಕೆಯನ್ನು ಅನುಭವಿಸುತ್ತಿರುವಾಗಲೂ, ಈ ಮಹಾಮಾರಿಯಿಂದ ಕೇರಳದಲ್ಲಿ ಇಲ್ಲಿಯವರೆಗೂ ಒಂದೂ ಸಾವು ಆಗಿಲ್ಲ ಎಂಬುದೇ ವಿಶೇಷವಾಗಿ ಉಲ್ಲೇಖಿಸಬೇಕಿರುವ ಅಂಶವಾಗಿದೆ. ಕೇರಳದಲ್ಲಿ ಸಾಮುದಾಯಿಕವಾಗಿ ಹಬ್ಬದಂತೆ ನಾವು ಕಟ್ಟುನಿಟ್ಟಾದ ಕ್ರಮಗಳನ್ನು ಖಾತರಿಪಡಿಸಿದ್ದೇವೆ.

ಅದೇ ಸಮಯದಲ್ಲಿ, ತುರ್ತು ಸನ್ನಿವೇಶಗಳನ್ನೂ ಒಳಗೊಂಡಂತೆ ಯಾವುದೇ ಸಂಭವನೀಯ ಪರಿಸ್ಥಿತಿಯನ್ನು ಎದುರಿಸಲು ಹೆಚ್ಚುವರಿ ಸೌಲಭ್ಯಗಳನ್ನು ಒದಗಿಸಲು ನಾವು ಸಿದ್ಧರಾಗಿದ್ದೇವೆ. ಈ ಮಹಾಮಾರಿಯನ್ನು ನಿಭಾಯಿಸಲು ಸಾಕಾಗುವಷ್ಟು ಮಾನವ ಸಂಪನ್ಮೂಲಗಳನ್ನು ಖಾತ್ರಿಪಡಿಸಲು ಆರೋಗ್ಯ ಇಲಾಖೆಯು 276 ವೈದ್ಯರನ್ನು ತುರ್ತಾಗಿ ನೇಮಕ ಮಾಡಿಕೊಂಡಿದೆ. ಅಗತ್ಯವಿರುವ ಅರೆವೈದ್ಯಕೀಯ ಸಿಬ್ಬಂದಿಗಳನ್ನು ಕೂಡ ನೇಮಕ ಮಾಡಿಕೊಳ್ಳಲಾಗುವುದು. ಈ ಎಲ್ಲಾ ನೇಮಕವನ್ನು ಸಾರ್ವಜನಿಕ ಸೇವಾ ಆಯೋಗ(ಪಬ್ಲಿಕ್ ಸರ್ವಿಸ್ ಕಮಿಷನ್)ದ ಈಗಿರುವ ಪಟ್ಟಿಯಿಂದಲೇ ಮಾಡಲಾಗಿದೆ. ಏಕಾಂತ ಕೊಠಡಿಗಳನ್ನಾಗಿ ಬಳಸಲು ಕಟ್ಟಡಗಳನ್ನು ಗುರುತಿಸಲಾಗಿದೆ. ಯುವಜನರು ಮತ್ತು ಸ್ವಯಂಸೇವಾ ಸಂಘಟನೆಗಳ ಸಹಾಯದಿಂದ ಅವುಗಳನ್ನು ಕ್ರಿಮಿ ಕೀಟಗಳು ಬರದಂತೆ ಸ್ವಚ್ಛಗೊಳಿಸಿ ಉಪಯೋಗಕ್ಕೆ

ಪುಟ 10 ಕ್ಕೆ







ಮನೆಬಾಗಿಲಿಗೇ ಪಿಂಚಣಿ ಮೊತ್ತ

ಕೊರೋನಾ ವೈರಾಣು ಸವಾಲಿಗೆ ಕೇರಳದ ಉತ್ತರ...........

ಪುಟ 9 ರಿಂದ

ಬರುವಂತೆ ಸಿದ್ಧಪಡಿಸಲಾಗಿದೆ. ಟಕಗಳಾದ ಕೇರಳ ರಾಜ್ಯ ಔಷಧಿ ಮತ್ತು ಫಾರ್ಮಸುಟಿಕಲ್ಸ್ ಲಿ. ಮತ್ತು ಕೇರಳ ರಾಜ್ಯ ಕೈಗಾರಿಕಾಭಿವೃದ್ಧಿ ನಿಗಮಗಳು ಅಗತ್ಯವಾದ ಔಷಧಿಗಳು ಹಾಗೂ ಶುದ್ಧೀಕರಣ ವಸ್ತುಗಳು ಮತ್ತು ಮುಖಗವಸುಗಳ ಲಭ್ಯತೆಯನ್ನು ಖಾತ್ರಿಪಡಿಸುವಲ್ಲಿ ಮುಂದಾಳುತ್ವ ವಹಿಸಿವೆ. ಕೇರಳದ ಜೈಲು ನಿವಾಸಿಗಳೂ ಕೂಡ ಈ ವಿಷಯದಲ್ಲಿ ತಮ್ಮ ಕೊಡುಗೆ ನೀಡಿದ್ದಾರೆ. ಅನೇಕ ವಸತಿನಿವಾಸಿಗಳ ಕಲ್ಯಾಣ ಸಂಘಗಳು, ಸ್ವಯಂಸೇವಾ ಸಂಘಗಳು ಮತ್ತು ರಾಜಕೀಯ ಗುಂಪುಗಳು ನಿರ್ಮಲೀಕರಣ ವಸ್ತುಗಳ ಮತ್ತು ಮುಖಗವಸುಗಳ ತಯಾರಿ ಮತ್ತು ವಿತರಣೆಯನ್ನು ತಮ್ಮ ಸಾಮಾಜಿಕ ಜವಾಬ್ದಾರಿಯೆಂದು ತಿಳಿದುಕೊಂಡು ಕಾರ್ಯ ನಿರ್ವಹಿಸುತ್ತಿವೆ.

ಈ ಹೊಸ ನಮೂನೆಯ ಕೊರೋನಾ ವೈರಾಣು ಹರಡುವುದನ್ನು ತಡೆಗಟ್ಟಲು ವ್ಯಕ್ತಿಗಳ ನಡುವೆ ಸುರಕ್ಷಿತ ದೂರವನ್ನು ಇಟ್ಟುಕೊಳ್ಳಬೇಕು ಹಾಗೂ ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಬೇಕೆಂದು ಅಂತರ್‍ರಾಷ್ಟ್ರೀಯ ಆರೋಗ್ಯ ಸಂಸ್ಥೆಗಳು ಮತ್ತು ತಜ್ಞರು ಸೂಚನೆ ನೀಡಿದ್ದಾರೆ. ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳುವುದು ಮತ್ತು ನಿರ್ಮಲೀಕರಣ ವಸ್ತುಗಳನ್ನು ಬಳಸುವುದರ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು 'ಕೊಂಡಿ ಕಳಚಿ'(ಬ್ರೇಕ್ ದಿ ಚೈನ್) ಆಂದೋಲನ ನಡೆಸಲಾಗಿದೆ. ಸರ್ಕಾರಿ ಕಛೇರಿಗಳು, ಸಾರ್ವಜನಿಕ ಕಛೇರಿಗಳು, ಸ್ವಯುವಾಡಳಿತ ಸಂಸ್ಥೆಗಳು, ಖಾಸಗಿ ಕಂಪನಿಗಳು, ಹೆಸರಾಂತ ವ್ಯಕ್ತಿಗಳು ಈ ಆಂದೋಲನದಲ್ಲಿ ಪಾಲ್ಗೊಂಡು ಪ್ರಚಂಡ ಯಶಸ್ಸಿಗೆ ಕಾರಣರಾಗಿದ್ದಾರೆ. ಸಾಮಾಜಿಕ ಮಾಧ್ಯಮವನ್ನು ಸೃಜನಾತ್ಮಕವಾಗಿ ಬಳಸುವುದನ್ನೂ ಒಳಗೊಂಡಂತೆ ಹೊಸ ಹೊಸ ವಿಧಾನಗಳ ಮೂಲಕ ಕೂಡ ಜನಜಾಗೃತಿಯನ್ನು ಮಾಡಲಾಗಿದೆ.

ದಿಗ್ಬಂಧನ (ಲಾಕ್ ಡೌನ್)

ಜನರ ಓಡಾಟ ಮತ್ತು ಜನರ ನಡುವಿನ ಪರಸ್ಪರ ಸಂಪರ್ಕದ ಮೇಲೆ ಕೆಲವು ನಿರ್ಬಂಧಗಳನ್ನು ಹೇರುವುದರ ಮೂಲಕ ಮಾತ್ರವೇ ಜನರ ನಡುವಿನ ಸುರಕ್ಷಿತ ದೂರವನ್ನು ಖಾತ್ರಿಪಡಿಸಲು ಸಾಧ್ಯ. ಅದನ್ನು ಸಾಧ್ಯವಾಗಿಸಲು ಇಡೀ ರಾಜ್ಯ ಈಗ ಲಾಕ್ ಡೌನ್ ಆಗಿದೆ. ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟಿವೆ, ಪರೀಕ್ಷೆಗಳು ಮುಂದೂಡಲ್ಪಟ್ಟಿವೆ, ಚಿತ್ರಮಂದಿರಗಳು ತಾತ್ಕಾಲಿಕವಾಗಿ ಮುಚ್ಚಲ್ಪಟ್ಟಿವೆ, ಪ್ರಯಾಣ ಮಾಡದಂತೆ ಜನರಿಗೆ ಹೇಳಲಾಗಿದೆ, ಗುಂಪು ಸೇರುವುದನ್ನು ಹಾಗೂ ಧಾರ್ಮಿಕ ಕೂಟಗಳನ್ನು ನಿಷೇಧಿಸಲಾಗಿದೆ, ಸಾರ್ವಜನಿಕ ಸಾರಿಗೆ ಸೌಲಭ್ಯವನ್ನು ನಿಲ್ಲಿಸಲಾಗಿದೆ ಮತ್ತು ರಾಜ್ಯದ ಗಡಿಗಳನ್ನು ಮುಚ್ಚಲಾಗಿದೆ. ಅದೇ ಸಂದರ್ಭದಲ್ಲಿ, ತುರ್ತು ಸೇವೆಗಳು, ಆಸ್ಪತ್ರೆಗಳು ಹಾಗೂ ಔಷಧಿ ಅಂಗಡಿಗಳು ಎಂದಿನಂತೆ ಕೆಲಸ ಮಾಡುತ್ತಿವೆ. ಅಗತ್ಯ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳನ್ನು ನಿಗದಿತ ವೇಳೆಯಲ್ಲಿ ತೆರೆಯಲು ಅವಕಾಶ ಮಾಡಿಕೊಡಲಾಗಿದೆ. ಊಟೋಪಹಾರ ಮಂದಿರಗಳನ್ನು ಪೊಟ್ಟಣ ಕಟ್ಟಿ ಕೊಡಲು ಮತ್ತು ಮನೆ ಮನೆಗೆ ಕೊಂಡೊಯ್ದು ತಲುಪಿಸಲು ಅವಕಾಶ ನೀಡಲಾಗಿದೆ. ಆಹಾರ ಪೂರೈಕೆಯನ್ನು ಸುಗಮಗೊಳಿಸಲು ಸಾಕಷ್ಟು ಆಹಾರ ದಾಸ್ತಾನು ಮತ್ತು ರಾಜ್ಯದ ಗಡಿಯಾದ್ಯಂತ ಅವುಗಳ ಸಂಚಾರಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುತ್ತಿದ್ದೇವೆ. ಸರ್ಕಾರಿ ಕಛೇರಿಗಳು ಕಾರ್ಯ ನಿರ್ವಹಿಸುವಂತೆ ಮಾಡಲು ಸಿಬ್ಬಂದಿಗಳನ್ನು ಹಂತ ಹಂತವಾಗಿ ಹಾಜರಾಗಲು ಹೇಳಲಾಗಿದೆ.



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಕೋವಿಡ್–19 ಪರಿಹಾರ ಸೌಲಭ್ಯಗಳು

ಜನರ ತಿರುಗಾಟ ಮತ್ತು ಪರಸ್ಪರ ಸಂಪರ್ಕಗಳ ಮೇಲೆ ನಿರ್ಬಂಧ ಹೇರಿದಾಗ, ಅದು ಸಾಮಾಜಿಕ ಹಾಗೂ ಆರ್ಥಿಕ ಬದುಕಿನ ಮೇಲೆ ಪರಿಣಾಮ ಬೀರುತ್ತದೆ. ಇದನ್ನು ಅರಿತು, ಲಾಕ್ ಡೌನ್ ಘೋಷಣೆಗೆ ಸಾಕಷ್ಟು ಮುಂಚೆಯೇ, ಮಾರ್ಚ್ 18ರಂದೇ ಕೇರಳ ಸರ್ಕಾರವು ಮುಂಬರುವ ಬಿಕ್ಕಟ್ಟನ್ನು ನಿಭಾಯಿಸಲು ರೂ.20,000 ಕೋಟಿ ನೆರವಿನ ಪ್ಯಾಕೇಜನ್ನು ಘೋಷಿಸಿತು. ಸಮಾಜ ಕಲ್ಯಾಣ ನಿವೃತ್ತಿವೇತನಗಳನ್ನು ಮುಂಗಡವಾಗಿ ಮಾರ್ಚ್‌ನಲ್ಲೇ ವಿತರಿಸಲು ರೂ.1320 ಕೋಟಿಯನ್ನು ತೆಗೆದಿರಿಸಲಾಗಿದೆ. ಕಲ್ಯಾಣ ನಿವೃತ್ತಿ ವೇತನಕ್ಕೆ ಅರ್ಹತೆಯಿಲ್ಲದವರಿಗೆ ಪ್ರತಿ ಕುಟುಂಬಕ್ಕೂ ರೂ.1000 ಸಹಾಯ ಒದಗಿಸಲು ರೂ.100 ಕೋಟಿ ಇಡಲಾಗಿದೆ. ಮುಂದಿನ ಎರಡು ತಿಂಗಳಲ್ಲಿ ಕುಟುಂಬಶ್ರೀ ಯೋಜನೆಯಡಿಯಲ್ಲಿ ರೂ.2000 ಕೋಟಿಯನ್ನು ವಿತರಿಸಲಾಗುವುದು. ಆದರ ಬಡ್ಡಿಯನ್ನು ಸಂಪೂರ್ಣವಾಗಿ ಸರ್ಕಾರವೇ ಭರಿಸುತ್ತದೆ. ಉದ್ಯೋಗ ಖಾತ್ರಿ ಯೋಜನೆಯ ಕೆಲಸ ಒದಗಿಸಲು ರೂ.2000 ಕೋಟಿ ಬಳಸಲಾಗುವುದು.

ಕೋವಿಡ್–19 ಆರೈಕೆಗಾಗಿ ಸಾರ್ವಜನಿಕ ಆರೋಗ್ಯಕ್ಕೆ ಆಗಬಹುದಾದ ಹೆಚ್ಚುವರಿ ವೆಚ್ಚಗಳಿಗೆ ರೂ.500 ಕೋಟಿ ಇಡಲಾಗಿದೆ. ಪಡಿತರ ಪದ್ಧತಿ ಅಡಿಯಲ್ಲಿ ಅರ್ಹ ಕುಟುಂಬಗಳಿಗೆ ಆಹಾರ ಧಾನ್ಯಗಳನ್ನು ವಿತರಿಸಲು ರೂ.100 ಕೋಟಿ ಬಳಸಲಾಗುವುದು. ಹಸಿವು ಮುಕ್ತ ಕೇರಳದ ಯೋಜನೆಯಡಿಯಲ್ಲಿ ಕೇವಲ ರೂ.20ನಲ್ಲಿ ಒಂದು ಊಟ ಒದಗಿಸಲು ರೂ.50 ಕೋಟಿ ಇಡಲಾಗಿದೆ. ಇದಕ್ಕಾಗಿ ಏಪ್ರಿಲ್ ತಿಂಗಳಿನಲ್ಲೇ 1000 ಆಹಾರ ಮಳಿಗೆಗಳನ್ನು ತೆರೆಯಲಾಗುವುದು. ಸೆಪ್ಟೆಂಬರ್ ತಿಂಗಳಿನಲ್ಲಿ ಒಂದು ಊಟಕ್ಕೆ ರೂ.25 ನಂತೆ ಪೂರೈಸಲಾಗುವುದು ಎಂದು ರಾಜ್ಯ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ರಾಜ್ಯ ಸರ್ಕಾರದ ಸಂಸ್ಥೆಗಳು ಮತ್ತು ವ್ಯಕ್ತಿಗಳಿಗೆ ಬಾಕಿ ಉಳಿದಿರುವ ಹಣವನ್ನು ಪಾವತಿಸಲು ರೂ.14,000 ಕೋಟಿ ಬಳಸಲಾಗುತ್ತದೆ. ತುರ್ತಾಗಿ ರಾಜ್ಯದ ಆರ್ಥಿಕತೆಗೆ ರೂ.20000 ಕೋಟಿ ಹಣವನ್ನು ಈ ರೀತಿಯಲ್ಲಿ ವಿನಿಯೋಗಿಸಲಾಗುವುದು.

ಆಟೋರಿಕ್ಷಾ ಮತ್ತು ಟ್ಯಾಕ್ಸಿಗಳಿಗೆ ಅರ್ಹತಾ ಶುಲ್ಕವನ್ನು ಸಡಿಲಗೊಳಿಸಲಾಗಿದೆ. ರಾಜ್ಯ ಸಾಗಣೆ ಮತ್ತು ಗುತ್ತಿಗೆ ಸಾಗಣೆಯ ತ್ರೈಮಾಸಿಕ ತೆರಿಗೆ ಪಾವತಿಗೆ ಒಂದು ತಿಂಗಳ ರಿಯಾಯಿತಿ ನೀಡಲಾಗುವುದು. ಈ ರೀತಿಯಲ್ಲಿ ರೂ.23.6 ಕೋಟಿ ರಿಯಾಯಿತಿ ನೀಡಲಾಗಿದೆ. ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳನ್ನು ಒಂದು ತಿಂಗಳು ತಡವಾಗಿ ಯಾವುದೇ ದಂಡವಿಲ್ಲದೇ ಸಲ್ಲಿಸಬಹುದು. ಚಿತ್ರಮಂದಿರಗಳಿಗೆ ಮನರಂಜನಾ ತೆರಿಗೆಯನ್ನು ಒಂದು ತಿಂಗಳ ಕಾಲ ಮನ್ನಾ ಮಾಡಲಾಗಿದೆ. ಬಿಕ್ಕಟ್ಟಿನ ಪರಿಹಾರಕ್ಕಾಗಿ ಆರ್ಥಿಕತೆಗೆ ತುರ್ತು ಹಣವನ್ನು ತುಂಬುವುದರ ಜತೆಯಲ್ಲೇ, ಜನರಿಗೆ ಸಹಾಯ ಒದಗಿಸಲು ರಿಯಾಯಿತಿಗಳನ್ನೂ ನೀಡಲಾಗಿದೆ.ನ್ನು ಖಾತ್ರಿಪಡಿಸುವ ಸಲುವಾಗಿ ವರ್ತಕರು ಮತ್ತು ವ್ಯಾಪಾರಿಗಳ ಸಂಘಗಳೊಂದಿಗೆ ಮಾತುಕತೆ ನಡೆಸಲಾಗಿದೆ. ತರಕಾರಿಗಳು ಮತ್ತು ಬೇಳೆಕಾಳುಗಳನ್ನೂ ಒಳಗೊಂಡಂತೆ ಎಲ್ಲಾ ಅಗತ್ಯ ವಸ್ತುಗಳನ್ನು ಕುಟುಂಬಗಳಿಗೆ ಈ ಲಾಕ್ ಡೌನ್ ಅವಧಿಯಲ್ಲಿ ಪೂರೈಸಲು ಆನ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ಅಗತ್ಯ ಬಿದ್ದಾಗ ಜನರಿಗೆ ಸಹಾಯ ಮಾಡಲು ಸ್ವಯಂಸೇವಾ ಸಂಘಟನೆಗಳನ್ನು ಕೋರಿಕೊಳ್ಳಲಾಗಿದೆ. ಏಕಾಂತ ವ್ಯವಸ್ಥೆಯಲ್ಲಿರುವವರಿಗಾಗಿ ಪುಸ್ತಕಗಳನ್ನು ಒದಗಿಸಲು ಪ್ರಕಾಶನ ಸಂಸ್ಥೆಗಳು ಸಹಾಯ ಮಾಡಲಿವೆ. ದೂರ ಸಂಪರ್ಕ ಸೇವಾ ಪೂರೈಕೆದಾರರೊಂದಿಗೆ ಮಾತನಾಡಿ ಅಂತರ್ಜಾಲಗಳ ಸುಗಮ ಸಂಪರ್ಕವನ್ನು ಒದಲಾಗಿಸಲಾಗಿದೆ, ಆ ಮೂಲಕ ಜನರು ಮನೆಯಲ್ಲೇ ಉಳಿದು ಸಂಪರ್ಕ ಹಾಗೂ ಮನರಂಜನೆಯನ್ನು ಹೊಂದಬಹುದಾಗಿದೆ.

ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯೊಂದಿಗೆ ಸಭೆ ನಡೆಸಲಾಗಿದ್ದು, ಈ ಆರ್ಥಿಕ ಸಂಕಷ್ಟದ ಸಂದರ್ಭದಲ್ಲಿ ಸಾಲ ವಸೂಲಾತಿ ಮಾಡಲು ಮುಂದಾಗದೆ ಬಡ್ಡಿ ಹಾಗೂ ಕಂತುಗಳ ಪಾವತಿಗೆ ರಿಯಾಯಿತಿಗಳನ್ನು ಒದಗಿಸಲು ಮನದಟ್ಟುಮಾಡಲಾಗಿದೆ. ಈ ವಿಷಯದಲ್ಲಿ ಕೇರಳ ಹೈಕೋರ್ಟು ಕೂಡ ಅನುಕೂಲಕರ ತೀರ್ಪನ್ನು ನೀಡಿದೆ. ಆದರೆ, ಕೇಂದ್ರ ಸರ್ಕಾರದ ಒತ್ತಡದ ಮೇರೆಗೆ ಸುಪ್ರೀಂ ಕೋರ್ಟು ಅದಕ್ಕೆ ತಡೆ ನೀಡಿದೆ. ಲಾಕ್‌ಡೌನ್‌ನತ್ತ ಸಾಗುವಾಗ ಕೂಡ, ಜನರ ರಕ್ಷಣೆಗೆ ಎಲ್ಲಾ ರೀತಿಯ ಕ್ರಮಗಳನ್ನು ನಾವು ಖಾತ್ರಿಪಡಿಸುತ್ತಿದ್ದೇವೆ. ಬದುಕಿ ಉಳಿಯಬೇಕೆಂದರೆ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳು ಇರಬೇಕಾಗುತ್ತದೆ. ಈ ಎರಡನ್ನೂ ಖಾತ್ರಿಪಡಿಸಲು ಈ ಸವಾಲಿನ ಸಮಯದಲ್ಲಿ ಕೇರಳ ಸರ್ಕಾರವು ನಿರಂತರವಾಗಿ ಕೆಲಸ ಮಾಡುತ್ತಿದೆ. ಜನರಿಗೆ ಕೇವಲ ಮನೆಯಲ್ಲಿರಿ ಎಂದಷ್ಟೇ ನಾವು ಹೇಳುತ್ತಿಲ್ಲ, ಅವರು ಮನೆಯಲ್ಲಿ ಇರುವಾಗ ತಾಳಿಕೊಳ್ಳಲು ಅವರು ಸಮರ್ಥರಾಗುವಂತೆ ಕೂಡ ನಾವು ನೋಡಿಕೊಳ್ಳುತ್ತಿದ್ದೇವೆ.

ಕೇಂದ್ರ ಸರ್ಕಾರದೊಂದಿಗೆ ಆತಂಕ ವ್ಯಕ್ತಪಡಿಸಲಾಗಿದೆ

ದೊಡ್ಡ ಸಂಖ್ಯೆಯ ತಪಾಸಣೆಗಳ ಮೂಲಕ ವೈರಾಣುವನ್ನು ಪತ್ತೆ ಮಾಡಬಹುದು ಮತ್ತು ಸೋಂಕಿತ ವ್ಯಕ್ತಿಗಳನ್ನು ಚಿಕಿತ್ಸೆಗೆ ಒಳಪಡಿಸಬಹುದು ಮತ್ತು ಆಗ ಮಾತ್ರವೇ ಅದರ ಹರಡುವಿಕೆಯನ್ನು ತಡೆಯಬಹುದು ಎಂಬುದನ್ನು ಚೈನಾ ಮತ್ತು ದಕ್ಷಿಣ ಕೊರಿಯಾದ ಅನುಭವಗಳು ಮತ್ತು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯು.ಹೆಚ್.ಓ) ನಿರ್ದೇಶನಗಳು ಸೂಚಿಸಿವೆ. ಆದುದರಿಂದ, ಕೇರಳವು ದೊಡ್ಡ ಸಂಖ್ಯೆಯ ತಪಾಸಣೆಗಳ ಮೊರೆಹೋಗಿದೆ. ಆದರೆ, ಒಂದು ರಾಜ್ಯ ಸರ್ಕಾರ ಏನು ಮಾಡಬಹುದು ಎನ್ನುವುದಕ್ಕೆ ಒಂದು ಮಿತಿ ಇದೆ. ದೇಶಾದ್ಯಂತ ಅಂತಹ ದೊಡ್ಡ ರೀತಿಯಲ್ಲಿ ತಪಾಸಣೆಗಳನ್ನು ಮಾಡದಿದ್ದರೆ, ಆ ವೈರಾಣು ಹರಡುವಿಕೆಯ ಮತ್ತು ರೋಗ ಹರಡಿಕೆ ಪ್ರಮಾಣವನ್ನು ನಿಖರವಾಗಿ ಅಂದಾಜು ಮಾಡುವುದು ಸಾಧ್ಯವಿಲ್ಲ. ಈ ವಿಚಾರದಲ್ಲಿ ಯಾವುದೇ ತಪ್ಪು ಲೆಕ್ಕಾಚಾರ ಮಾಡಿದ್ದೇ ಆದರೆ ಆಗ ಇಡೀ ದೇಶ ಗಂಭೀರ ಆರೋಗ್ಯ ತುರ್ತುಸ್ಥಿತಿಗೆ ತಳ್ಳಲ್ಪಡುತ್ತದೆ. ಆದಕಾರಣ, ತಪಾಸಣೆ ನಡೆಸಲು ಹೆಚ್ಚು ಕೇಂದ್ರಗಳನ್ನು ತೆರೆಯಲು ಅನುವು ಮಾಡಿಕೊಡಬೇಕೆಂದು ಕೇಂದ್ರ ಸರ್ಕಾರವನ್ನು ನಾವು ಕೋರಿದ್ದೇವೆ.

ಸಾರ್ಸ್–CoV-2 ಮತ್ತು ಕೋವಿಡ್-19 ವೈರಾಣುಗಳ ವಿರುದ್ಧ ಹೋರಾಡುವ ಸಂದರ್ಭದ ಉದ್ದಕ್ಕೂ ಕೇರಳವು ಹಲವಾರು ಮುಜುಗರಗಳಿಗೆ ಒಳಗಾಯಿತು ಮತ್ತು ಅದೇ ಸಮಯದಲ್ಲಿ ಹೊಸ ತಿಳುವಳಿಕೆಯನ್ನು ಪಡೆಯಿತು. ಅವುಗಳನ್ನು ಕೇಂದ್ರ ಸರ್ಕಾರದೊಂದಿಗೆ ಹಂಚಿಕೊಳ್ಳಲು ನಾವು ಪ್ರಯತ್ನ ಮಾಡಿದ್ದೇವೆ; ಪ್ರಧಾನ ಮಂತ್ರಿ, ಆರೋಗ್ಯ ಸಚಿವರು, ಹಣಕಾಸು ಸಚಿವರು, ವಿದೇಶಾಂಗ ಸಚಿವರುಗಳಿಗೆ ಪತ್ರ ಬರೆದಿದ್ದೇವೆ. ಅವುಗಳ ಮುಖ್ಯ ಅಂಶವೇನೆಂದರೆ, ಒಂದು ರಾಜ್ಯ ಸರ್ಕಾರಕ್ಕಿರುವ ಸೀಮಿತ ಸಂಪನ್ಮೂಲಗಳ ಲಭ್ಯತೆಯೊಂದಿಗೆ ಅಂತಹ ರಾಕ್ಷಸಾಕಾರದ ಮಹಾಮಾರಿಯನ್ನು ಎದುರಿಸುವುದು ಕಷ್ಟಸಾಧ್ಯವೇ ಸರಿ ಎನ್ನುವುದಾಗಿತ್ತು. ರಾಜ್ಯಗಳಿಗೆ ಹೆಚ್ಚು ಸಂಪನ್ಮೂಲಗಳನ್ನು ಒದಗಿಸದೆ ಅದನ್ನು ಸಮಗ್ರವಾಗಿ ಹಿಮ್ಮೆಟ್ಟಿಸಿ ಗೆಲ್ಲುವುದು ಸಾಧ್ಯವಿಲ್ಲ. ಆದಕಾರಣ ರಾಜ್ಯಗಳ ಸಾಲಪಡೆಯುವ ಮಿತಿಯನ್ನು ಹೆಚ್ಚಿಸಬೇಕು, ಬಡ್ಡಿ ದರವನ್ನು ಕಡಿಮೆ ಮಾಡಬೇಕು, ಮುಂಗಡ ಪಡೆಯಲು ಅನುವುಮಾಡಿಕೊಡಬೇಕು, ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯಿದೆಯಡಿಯಲ್ಲಿ ಕೆಲಸದ ದಿನಗಳನ್ನು ಮತ್ತು ಕೂಲಿಯನ್ನು ಹೆಚ್ಚು ಮಾಡಲು ಬಿಡಬೇಕು, ಔಷಧಿಗಳು ಹಾಗೂ ಮುಖಗವಸು ಮತ್ತು ನಿರ್ಮಲೀಕರಣ ಬಾಬತ್ತುಗಳು ಮುಂತಾದ ಅಗತ್ಯ ವಸ್ತುಗಳ ಉತ್ಪಾದನೆ ಮಾಡಲು ಸಾರ್ವಜನಿಕ ವಲಯದ ಘಟಕಗಳು ಭಾಗವಹಿಸುವಂತೆ ಆಗಬೇಕು, ತಪಾಸಣಾ ಕೇಂದ್ರಗಳನ್ನು ಹೆಚ್ಚಿಸಬೇಕು, ಹೆಚ್ಚು ವೈದ್ಯಕೀಯ ಉಪಕರಣಗಳನ್ನು ಒದಗಿಸಬೇಕು, ಬರ ಪರಿಹಾರ ನಿಧಿ ಬಳಕೆಯ ನಿರ್ಬಂಧ ಸಡಿಲಗೊಳಿಸಬೇಕು, ಮುಂತಾದ ಕೆಲವು ಕ್ರಮಗಳನ್ನು ಆದ್ಯತೆಯ ಮೇಲೆ ಕೇಂದ್ರ ಸರ್ಕಾರವು ಜಾರಿಗೊಳಿಸಬೇಕಾದ ಅಗತ್ಯವಿದೆ.



ಕುಟುಂಬಶ್ರೀ ಮತ್ತು ಗ್ರಾಮ ಪಂಚಾಯ್ತು ಮತ್ತಿತರ ಸ್ಥಳೀಯ ಆಡಳಿತ ಸಂಸ್ಥೆಗಳು ಸಾಮುದಾಯಿಕ ಅಡುಗೆ ಕೇಂದ್ರಗಳನ್ನು ತೆರೆಯುತ್ತಿವೆ.

ದೈಹಿಕ ಅಂತರ, ಸಾಮಾಜಿಕ ಒಗ್ಗಟ್ಟು

ಕೇರಳದ ಮಟ್ಟಿಗೆ ಹೇಳುವುದಾದರೆ, ವೈರಾಣುಗಳ ಮತ್ತು ಸಾಂಕ್ರಾಮಿಕ ರೋಗಗಳ ಸತತ ದಾಳಿಯು ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಚೇತರಿಕೆಯನ್ನು ಹೆಚ್ಚುಮಾಡಿದೆ. ನಮ್ಮ ಅಡ್ಡಿ ಆತಂಕಗಳನ್ನು ಅರಿತುಕೊಳ್ಳಲು ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಹಾಯ ಮಾಡಿದೆ. ಕೋವಿಡ್–19ನ್ನು ಎದುರಿಸುವಲ್ಲಿನ ಜಗತ್ತಿನ ಎಲ್ಲೆಡೆಯ ಅನುಭವವು ಸದೃಢ ಸಾರ್ವಜನಿಕ ಆರೋಗ್ಯ ಪಾಲನೆ ವ್ಯವಸ್ಥೆಯ ಅಗತ್ಯವನ್ನು ಒತ್ತಿಹೇಳುತ್ತದೆ. ಅದರಿಂದ ಪಾಠ ಕಲಿತು, ಕೇರಳದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ನಾವು ಕೈಗೊಂಡಿದ್ದೇವೆ. ಆರ್ದ್ರಂ ಮಿಷನ್ ಮೂಲಕ ಸಾಮರ್ಥ್ಯ ವೃದ್ಧಿ ಕಾರ್ಯವನ್ನು ಕೈಗೊಂಡಿದ್ದು ಈ ಸಮಯದಲ್ಲಿ ನಮಗೆ ಬಹಳ ಸಹಾಯವಾಯಿತು ಎಂಬ ಅಂಶವನ್ನು ಅಗತ್ಯವಾಗಿ ಗಮನಿಸಬೇಕು. ಈ ಬಿಕ್ಕಟ್ಟಿನಿಂದ ಪಾರಾಗಲು, ಇಡೀ ಸಮಾಜವು ಒಂದಾಗಿ ಮೂದುವರಿಯಬೇಕು ಎಂಬುದನ್ನು ಕೂಡ ನಾವು ಖಾತ್ರಿಪಡಿಸಿದೆವು.

ಕೋವಿಡ್–19ನ್ನು ಎದುರಿಸುವಾಗ ನಮ್ಮ ಗುರಿ 'ದೈಹಿಕ ಅಂತರ, ಸಾಮಾಜಿಕ ಒಗ್ಗಟ್ಟು' ಎಂಬುದಾಗಿತ್ತು. ಸಮಾಜವನ್ನು ಒಂದಾಗಿಟ್ಟುಕೊಳ್ಳಲು ಪತ್ರಿಕಾ ಗೋಷ್ಠಿ ಮತ್ತು ಸರ್ಕಾರಿ ಸಂಪರ್ಕ ಸಾಧನಗಳ ಮೂಲಕ ಪ್ರತಿ ಹಂತದಲ್ಲೂ ನಾವು ಅವರಿಗೆ ಮಾಹಿತಿಗಳನ್ನು ಒದಗಿಸುತ್ತಿದ್ದೆವು. ವಿಶ್ವಾಸಾರ್ಹ ಹಾಗೂ ವೈಜ್ಞಾನಿಕ ಮಾಹಿತಿಗಳನ್ನು ಹಂಚಿಕೊಳ್ಳಲು ಮತ್ತು ಸುಳ್ಳು ಸುದ್ದಿಗಳನ್ನು ಹಾಗೂ ಸುಳ್ಳು ಮಾಹಿತಿಗಳನ್ನು ವಿರೋಧಿಸಲು ಸಾಮಾಜಿಕ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿದೆವು. ಜನರಿಗೆ ಪರಿಹಾರ ಒದಗಿಸಲು ಸರ್ಕಾರಿ ಯಂತ್ರವನ್ನು ಬಳಸಿದೆವು. ಅದನ್ನು ಸಾಧ್ಯವಾಗಿಸಲು, ಈ ಸಾಂಕ್ರಾಮಿಕ ರೋಗದ ಸಮಯದಲ್ಲಿ ಸನ್ನಿವೇಶ ಉಂಟಾದರೆ ಸರ್ಕಾರ ಪರಿಣಾಮಕಾರಿಯಾಗಿ ಹಾಗೂ ಪೂರ್ವಭಾವಿಯಾಗಿ ಮಧ್ಯಪ್ರವೇಶಿಸಲು ಕೇರಳ ಸಾಂಕ್ರಾಮಿಕ ರೋಗ ಸುಗ್ರೀವಾಜ್ಞೆ, 2020 ನ್ನು ನಾವು ಹೊರಡಿಸಿದೆವು.

ನಾವು ಅತ್ಯಂತ ಅಸಾಧಾರಣವಾದ ಸವಾಲನ್ನು ಎದುರಿಸುತ್ತಿದ್ದೇವೆ. ನಾವು ಮುಂದೆ ಸಾಗಲು ನಮ್ಮ ಎಲ್ಲಾ ವ್ಯವಸ್ಥೆಗಳು, ಬದ್ಧತೆ, ಒಡನಾಡಿಗಳ ಜತೆಗಿನ ಪ್ರೀತಿ ಇವೆಲ್ಲವನ್ನು ಒಟ್ಟುಗೂಡಿಸುತ್ತಿದ್ದೇವೆ. ಈ ಮಹಾಮಾರಿಯು ಹಲವಾರು ಮುಂದುವರಿದ ದೇಶಗಳನ್ನು ಸ್ತಬ್ಧಗೊಳಿಸಿದೆ. ಈ ವೈರಾಣು ಹರಡದಂತೆ ತಡೆಯಲು ಕೇರಳವು ಕಠೋರವಾದ ವಿರೋಧ ಒಡ್ಡುತ್ತಿದೆ. ಅದನ್ನು ತಡೆಯುವ ಸಲುವಾಗಿ, ನಾವು ಒಂದಾಗಿ ಕೆಲಸ ಮಾಡುತ್ತಿದ್ದೇವೆ. ಕೇರಳ ಎಲ್‌ಡಿಎಫ್ ಸರ್ಕಾರವು ಮುಂಚೂಣಿಯಲ್ಲಿ ನಿಂತು ಈ ಹೋರಾಟಕ್ಕೆ ನಾಯಕತ್ವ ನೀಡುತ್ತಿದೆ.

ಶತಮಾನೋತ್ಸವ ಲೇಖನ ಮಾಲೆ-19

ಜನಸಂಗ್ರಾಮ ಮತ್ತು ಭಾರತ ಬಿಟ್ಟು ತೊಲಗಿ ಚಳುವಳಿ

ಜೂನ್ 1941ರಲ್ಲಿ ಸೋವಿಯತ್ ಯೂನಿಯನ್ನಿನ ಮೇಲೆ ಹಿಟ್ಲರ್ ಆಕ್ರಮಣ ಮಾಡಿದಾಗ ಮಹಾಯುದ್ಧದ ಸ್ವರೂಪವೇ ಬದಲಾಯಿತು. ಪಕ್ಷದೊಳಗಿನ ಹಲವು ಚರ್ಚೆಗಳ ಪರಿಣಾಮವಾಗಿ ಡಿಸೆಂಬರ್ 1941ರಲ್ಲಿ ಸೋವಿಯತ್ ಯೂನಿಯನ್ನಿನ ಮೇಲೆ ಹಿಟ್ಲರ್ ದಾಳಿ ಮಾಡಿದ ನಂತರ ಯುದ್ಧದ ಸ್ವರೂಪವು ಆಮೂಲಾಗ್ರವಾಗಿ ಬದಲಾಗಿದೆ ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು. ಯುದ್ಧವೀಗ ಸಾಮ್ರಾಜ್ಯಶಾಹೀ ಯುದ್ಧದ ಬದಲಾಗಿ ಜನ ಸಂಗ್ರಾಮವಾಗಿ ಬಿಟ್ಟಿದೆ, ದೇಶದಲ್ಲಿ ಒಂದು "ಜನಸಂಗ್ರಾಮ ಚಳುವಳಿ"ಯನ್ನು ಬೆಳೆಸಬೇಕೆಂದು ಎಂದು ಪಕ್ಷ ಕರೆಕೊಟ್ಟಿತು. ಫ್ಯಾಸಿಸಂ ವಿರುದ್ಧದ ಈ ಯುದ್ಧದಲ್ಲಿನ ಗೆಲುವು ವಿಮೋಚನೆಗಾಗಿನ ಭಾರತೀಯ ಜನರ ಹೋರಾಟಕ್ಕೆ ಸಹಾಯಕವಾಗುತ್ತದೆ ಎಂದು ಹೇಳಿತು. ಆದರೆ ಇದು ಅದಾಗಲೇ ಜನಸಮುದಾಯದಲ್ಲಿ ಬೆಳೆದುಬರುತ್ತಿದ್ದ ಸಾಮ್ರಾಜ್ಯಶಾಹಿ ವಿರೋಧಿ ಭಾವನೆಗಳ ವಿರುದ್ಧ ಹೋಯಿತು. 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ವಿರೋಧಿಸಿದ ನಿಲುವು ರಾಷ್ಟ್ರೀಯ ರಾಜಕೀಯ ಹೋರಾಟಗಳಿಂದ ಪಕ್ಷವನ್ನು ಪ್ರತ್ಯೇಕಗೊಳಿಸಿ ಒಂಟಿಯಾಗಿಸಿತು. ಪಕ್ಷವೂ ನಂತರ ಈ ಬಗ್ಗೆ ಸ್ವವಿಮರ್ಶೆ ಮಾಡಿಕೊಂಡಿತು. ಆದರೆ ಈ ಅವಧಿಯಲ್ಲೂ ಪಕ್ಷವು ಬ್ರಿಟಿಷ್ ಆಳರಸರೊಂದಿಗೆ ಎಂದಿಗೂ ಶಾಮೀಲಾಗಲಿಲ್ಲ ಎಂಬುದನ್ನು ಬ್ರಿಟಿಶ್ ಗುಪ್ತ ದಾಖಲೆಗಳೇ ಹೇಳುತ್ತವೆ.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

1939ರಲ್ಲಿ ಎರಡನೇ ವಿಶ್ವ ಸಮರ ಶುರುವಾದಾಗ ಕಮ್ಯುನಿಸ್ಟರು ಅದರ ವಿರುದ್ಧ ತಮ್ಮ ವಿರೋಧ ಸಾರಿದರು. ಯುದ್ಧವನ್ನು ವಿರೋಧಿಸಲು ಭಾರತದ ಜನಕ್ಕೆ ಪಕ್ಷವು ಕರೆ ನೀಡಿತು ಮತ್ತು ಈ ಯುದ್ಧದ ಪರಿಣಾಮವಾಗಿ ಹದಗೆಟ್ಟ ಆರ್ಥಿಕ ಪರಿಸ್ಥಿತಿಯ ವಿರುದ್ಧ ಹೋರಾಟ ಮಾಡಲು ಮುಂದಾಳುತ್ವ ವಹಿಸಿತು. ಪಕ್ಷ ಮತ್ತು ಅದರ ಸಾಹಿತ್ಯಗಳ ಮೇಲೆ ನಿಷೇಧ ಹೇರಿ ಅದರ ನೂರಾರು ಕಾರ್ಯಕರ್ತರನ್ನು ಬಂಧಿಸುವ ಮೂಲಕ ತೀವ್ರತರದ ದಾಳಿ ನಡೆದಾಗ್ಯೂ, ಬೆಲೆ ಏರಿಕೆ, ಆಹಾರ ಕೊರತೆಗಳ ವಿರುದ್ಧ ಪಕ್ಷದ ನೇತೃತ್ವದಲ್ಲಿ ಅದರ ಸದಸ್ಯರು ಅನೇಕ ಹೋರಾಟಗಳಿಗೆ ಮತ್ತು ಕಾರ್ಮಿಕರ ಮುಷ್ಕರಗಳಿಗೆ ನಾಯಕತ್ವ ನೀಡಿದರು.

ಜೂನ್ 1941ರಲ್ಲಿ ಸೋವಿಯತ್ ಯೂನಿಯನ್ನಿನ ಮೇಲೆ ಹಿಟ್ಲರ್ ಆಕ್ರಮಣ ಮಾಡಿದಾಗ ಯುದ್ಧದ ಸ್ವರೂಪವೇ ಬದಲಾಯಿತು. ಸಮಾಜವಾದದ ಸುಭದ್ರ ನೆಲೆಯ ಮೇಲೆ ಫ್ಯಾಸಿಸ್ಟ್ ಶಕ್ತಿಗಳು ದಾಳಿ ಮಾಡಿದರು ಮತ್ತು ಜರ್ಮನಿ, ಜಪಾನ್ ಹಾಗೂ ಇಟಲಿ ನೇತೃತ್ವದ ಮೂರು ದೇಶಗಳ ಕೂಟದ ಫ್ಯಾಸಿವಾದದ ವಿರುದ್ಧ ವಿಶ್ವವ್ಯಾಪೀ ಹೋರಾಟವಾಗಿ ಆ ಯುದ್ಧವು ಮಾರ್ಪಟ್ಟಿತು.

ಯುದ್ಧದ ಈ ಸ್ವರೂಪ ಬದಲಾವಣೆಯನ್ನು ಆಗ ಸಿಪಿಐ ಒಪ್ಪಿಕೊಂಡಿರಲಿಲ್ಲ. ಜುಲೈ 1941ರ ತನಕವೂ ಅದನ್ನು ಸಾಮ್ರಾಜ್ಯಶಾಹೀ ಯುದ್ಧವೆಂದೇ ವಿರೋಧಿಸಿತು; ಅದನ್ನು ಕ್ರಾಂತಿಕಾರಿ ಯುದ್ಧವಾಗಿ ಬದಲಾಯಿಸಬೇಕೆಂದು ಪೊಲಿಟ್ ಬ್ಯೂರೋ ನಿರ್ಣಯ ಕೈಗೊಂಡಿತ್ತು.

ಈ ಮಧ್ಯೆ, ದಿಯೋಲಿ ಬಂಧನ ಶಿಬಿರದಲ್ಲಿದ್ದ ಕಮ್ಯುನಿಸ್ಟ್ ಖೈದಿಗಳು ಯುದ್ಧ ಕುರಿತ ಪಕ್ಷದ ನಿಲುವನ್ನು ಪ್ರಶ್ನೆ ಮಾಡಿದರು. ಬಿ.ಟಿ.ರಣದಿವೆ ನೇತೃತ್ವದ ಈ ಗುಂಪು ಒಂದು ದಸ್ತಾವೇಜನ್ನು ಪೊಲಿಟ್‌ಬ್ಯೂರೋಗೆ ಕಳಿಸಿ ಯುದ್ಧದ ಬಗೆಗಿನ ನಿರ್ಧಾರವನ್ನು ಬದಲಾಯಿಸಬೇಕೆಂದು ಕೇಳಿಕೊಂಡಿತು. ಸೋವಿಯತ್ ಯೂನಿಯನ್ನಿನ ಮೇಲೆ ನಾಜಿ ಆಕ್ರಮಣದೊಂದಿಗೆ ಯುದ್ಧವು ಫ್ಯಾಸಿಸಂ ವಿರುದ್ಧ ಜನ ಸಂಗ್ರಾಮವಾಗಿ ಸ್ವರೂಪ ಪಡೆದುಕೊಂಡಿದೆ ಎಂದು ಅವರು ಹೇಳಿದರು.

ಸಿಪಿಐ ನಾಯಕರ ಗುಂಪು ದಿಯೋಲಿಯಿಂದ ಕಳಿಸಿದ ಈ ದಸ್ತಾವೇಜನ್ನು ಜೈಲ್ ದಸ್ತಾವೇಜು ಎಂದು ಪರಿಚಿತವಾಗಿದೆ. ಅದು ಹೀಗೆ ಹೇಳಿತ್ತು: "ಏಕೈಕ ಶ್ರಮಜೀವಿ ದೇಶದ ಮೇಲೆ ತನ್ನ ಮಾರಣಾಂತಿಕ ದಾಳಿಯ ಮೂಲಕ ನಾಜಿಸಂ ಅಂತರ್ರಾಷ್ಟ್ರೀಯ ಶ್ರಮಜೀವಿಗಳ ಮತ್ತು ವಸಾಹತು ಶ್ರಮಜೀವಿಗಳ ಪ್ರಧಾನ ಶತ್ರುವಾಗಿ ಬದಲಾಗಿದೆ. ಆದ್ದರಿಂದ ಭಾರತದ ಶ್ರಮಜೀವಿಗಳ ಪಕ್ಷವು ಯುದ್ಧದಲ್ಲಿ ಖಚಿತವಾಗಿ ಮಧ್ಯಪ್ರವೇಶ ಮಾಡಬೇಕು, ಅದನ್ನು ಜನ ಸಂಗ್ರಾಮವೆಂದು ಘೋಷಿಸಬೇಕು ಮತ್ತು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಆ ಯುದ್ಧವನ್ನು ಗೆಲ್ಲಲು ಎಲ್ಲಾ ರೀತಿಯ ಪ್ರಯತ್ನವನ್ನೂ ಮಾಡಬೇಕು."

ಯುದ್ಧದ ಬದಲಾದ ಸ್ವರೂಪದ ಬಗ್ಗೆ ಗ್ರೇಟ್ ಬ್ರಿಟನ್ನಿನ ಕಮ್ಯುನಿಸ್ಟ್ ಪಕ್ಷ ಕೂಡ ಸಿಪಿಐ ನಾಯಕತ್ವಕ್ಕೆ ಒಂದು ದಸ್ತಾವೇಜನ್ನು ಕಳಿಸಿಕೊಟ್ಟಿತು.

ಈ ಚರ್ಚೆಗಳ ಪರಿಣಾಮವಾಗಿ ಪೊಲಿಟ್‌ಬ್ಯೂರೋವು ಡಿಸೆಂಬರ್ 1941ರಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಸೋವಿಯತ್ ಯೂನಿಯನ್ನಿನ ಮೇಲೆ ಹಿಟ್ಲರ್ ದಾಳಿ ಮಾಡಿದ ನಂತರ ಯುದ್ಧದ ಸ್ವರೂಪವು ಆಮೂಲಾಗ್ರವಾಗಿ ಬದಲಾಗಿದೆ ಎಂಬುದನ್ನು ಆ ನಿರ್ಣಯವು ಒಪ್ಪಿಕೊಂಡಿತು. ಯುದ್ಧವೀಗ ಸಾಮ್ರಾಜ್ಯಶಾಹೀ ಯುದ್ಧದ ಬದಲಾಗಿ ಜನ ಸಂಗ್ರಾಮವಾಗಿ ಬಿಟ್ಟಿದೆ. ಅದು ದೇಶದಲ್ಲಿ ಒಂದು "ಜನಸಂಗ್ರಾಮ ಚಳುವಳಿ"ಯನ್ನು ಬೆಳೆಸಬೇಕೆಂದು ಕರೆಕೊಟ್ಟಿತು. ಫ್ಯಾಸಿಸಂ ವಿರುದ್ಧದ ಈ ಯುದ್ಧದಲ್ಲಿನ ಗೆಲುವು ವಿಮೋಚನೆಗಾಗಿನ ಭಾರತೀಯ ಜನರ ಹೋರಾಟಕ್ಕೆ ಸಹಾಯಕವಾಗುತ್ತದೆ ಎಂದು ಹೇಳಿತು.

ಪಕ್ಷದ ಮೇಲಿನ ನಿಷೇಧವನ್ನು 1942 ಜುಲೈನಲ್ಲಿ ತೆಗೆಯಲಾಯಿತು. ಬಂಧನದಲ್ಲಿದ್ದ ಎಲ್ಲಾ ನಾಯಕರನ್ನು ಸರ್ಕಾರವು ಬಿಡುಗಡೆ ಮಾಡಿತು.

ಆದರೆ, ಭಾರತದ ವಿಮೋಚನೆಗಾಗಿನ ಹೋರಾಟವನ್ನು ಫ್ಯಾಸಿಸಮ್ಮಿನ ವಿರುದ್ಧದ ವಿಶ್ವವ್ಯಾಪೀ ಹೋರಾಟದ ಭಾಗವಾಗಿ ಸಂಯೋಜಿಸಬೇಕೆಂಬ ನಿಲುವು ರಾಷ್ಟ್ರೀಯವಾದಿಗಳು ಮತ್ತು ಎಡ ರಾಷ್ಟ್ರೀಯವಾದಿ ಬಣಗಳಿಗೆ ಇಷ್ಟವಾಗಲಿಲ್ಲ. ಆದರೆ ಪಕ್ಷದ ನಿಲುವು ವಿಚಾರವಾದಿಗಳ ವಿಭಾಗಗಳಲ್ಲಿ ಮೆಚ್ಚುಗೆ ಪಡೆಯಿತು.

ಯುದ್ಧದ ವಿಷಯದಲ್ಲಿನ ಸಹಕಾರಕ್ಕೆ ಪ್ರತಿಯಾಗಿ ಕಾಂಗ್ರೆಸ್ಸಿನ ಬೇಡಿಕೆಗಳನ್ನು ಚರ್ಚೆ ಮಾಡಲು ಬ್ರಿಟಿಷ್ ಸರ್ಕಾರ ನಿರಾಕರಿಸಿದ 'ನಂತರ, ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಅಕ್ಟೋಬರ್ 1940ರಲ್ಲಿ ವೈಯಕ್ತಿಕ ಸತ್ಯಾಗ್ರಹ ಪ್ರಾರಂಭಿಸಿತು. ಕೇಂದ್ರ ಸರ್ಕಾರದ ಆಡಳಿತ ಯಂತ್ರದಲ್ಲಿ ಡೊಮಿನಿಯನ್ (ಅಧೀನ) ಸ್ಥಾನಮಾನಕ್ಕೆ ಸಮನಾದ ಬದಲಾವಣೆಗಳನ್ನು ಒಪ್ಪಲು ಬ್ರಿಟಿಷ್ ಸರ್ಕಾರ ನಿರಾಕರಿಸಿತು.

ವೈಯಕ್ತಿಕ ಸತ್ಯಾಗ್ರಹದ ಒಂದು ವರ್ಷದ ನಂತರ, ಯುದ್ಧ–ಕಾಲ ಸಂಪುಟದ ಸದಸ್ಯ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರನ್ನು ಭಾರತದ ನಾಯಕರೊಂದಿಗೆ ಸಂಧಾನ ಮಾಡಲು ಬ್ರಿಟಿಷ್ ಸರ್ಕಾರವು ಭಾರತಕ್ಕೆ ಕಳಿಸಿಕೊಟ್ಟಿತು. ಸ್ವಾತಂತ್ರ್ಯ ನೀಡುವ ವಿಷಯದಲ್ಲಿ ಮಹತ್ವವುಳ್ಳ ಏನನ್ನೂ ಮುಂದಿಡಲು ಕ್ರಿಪ್ಸ್ ನಿಯೋಗ ವಿಫಲವಾದಾಗ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನೊಂದಿಗೆ ಸಂಧಾನ ಮಾಡಿ ಒಂದು ಒಪ್ಪಂದಕ್ಕೆ ಬರುವಂತೆ ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡ ಹೇರಲು ಸಾಮೂಹಿಕ ಹೋರಾಟ ಮಾಡಬೇಕೆಂದು ಗಾಂಧೀಜಿ ನಿರ್ಧರಿಸಿದರು. ಇದನ್ನು ಮನದಲ್ಲಿಟ್ಟುಕೊಂಡ ಗಾಂಧೀಜಿ ತನ್ನ ಕಾರ್ಯಾಚರಣೆಯ ಯೋಜನೆಗೆ ಬೆಂಬಲ ನೀಡಿ ಎಂದು ಕಾಂಗ್ರೆಸ್ ನಾಯಕತ್ವವನ್ನು ಒಲಿಸಲು ಮುಂದಾದರು; ಅಂತಹ ಹೋರಾಟಕ್ಕೆ ಕಾಲ ಈಗ ಪಕ್ವವಾಗಿಲ್ಲ ಎಂಬುದು ಕಾಂಗ್ರೆಸ್ ನಾಯಕತ್ವದ ಒಂದು ವಿಭಾಗದ ಅಭಿಪ್ರಾಯವಾಗಿತ್ತು. ಆಗಸ್ಟ್ 9, 1942ರಿಂದ 'ಕ್ವಿಟ್ ಇಂಡಿಯಾ'(ಭಾರತ ಬಿಟ್ಟು ತೊಲಗಿ) ಚಳುವಳಿ ಆರಂಭಿಸಲು ಎಐಸಿಸಿಯು ಆಗಸ್ಟ್ 8, 1942ರಂದು ಬೊಂಬಾಯಿಯಲ್ಲಿ ಕರೆ ಕೊಟ್ಟಿತು. ಅದಕ್ಕೆ ಪ್ರತೀಕಾರವಾಗಿ ಬ್ರಿಟಿಷ್ ಸರ್ಕಾರವು ನಾಯಕರನ್ನು ಬಂಧಿಸಿ ಜೈಲಿಗೆ ಕಳಿಸಿತು. ಗಾಂಧೀಜಿಯವರ ನಿರೀಕ್ಷೆಗೆ ವ್ಯತಿರಿಕ್ತವಾಗಿ, ಬ್ರಿಟಿಷರು ಹಿಂದಡಿಯಿಡಲು ಒಪ್ಪಲಿಲ್ಲ ಮತ್ತು ಪ್ರತಿಭಟನಾಕಾರರ ವಿರುದ್ಧ ತೀವ್ರ ದಾಳಿ ದಬ್ಬಾಳಿಕೆ ನಡೆಸಿತು. ಇದಕ್ಕೆ ಪ್ರತೀಕಾರವಾಗಿ, ರೈಲ್ವೇ ಹಳಿಗಳನ್ನು ಮತ್ತು ಟೆಲಿಫೋನ್ ತಂತಿಗಳನ್ನು ಕಡಿತಗೊಳಿಸಲಾಯಿತು ಹಾಗೂ ಅಂಚೆ ಕಛೇರಿಗಳು ಮತ್ತು ಸರ್ಕಾರಿ ಕಛೇರಿಗಳ ಮೇಲೆ ದಾಳಿ ಮಾಡಲಾಯಿತು. ಹತ್ತಾರು ಸಾವಿರ ಜನರು ಈ ಸಮರಶೀಲ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಸಿಪಿಐ ತನ್ನ ಯುದ್ಧ ಧೋರಣೆಯನ್ನು ಜಾರಿಮಾಡುವಾಗ ಫ್ಯಾಸಿಸಂ ವಿರುದ್ಧದ ಯುದ್ಧವು ಗೆಲುವು ಸಾಧಿಸಲು ಮಾಡಬೇಕಾದ ಪ್ರಯತ್ನಗಳು ಮತ್ತು ಯುದ್ಧ ಯತ್ನಗಳನ್ನು ಬಲಪಡಿಸಲು ಉತ್ಪಾದನೆಯನ್ನು ಹೆಚ್ಚಿಸುವ ಅಗತ್ಯತೆ ಬಗ್ಗೆ ಒತ್ತು ನೀಡಿತು. ರಾಜಕೀಯವಾಗಿ ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರನ್ನು ಬಿಡುಗಡೆ ಮಾಡಬೇಕು ಮತ್ತು ಕಾಂಗ್ರೆಸ್–ಲೀಗ್ ಐಕ್ಯತೆಯ ಮೂಲಕ ರಾಷ್ಟ್ರೀಯ ಐಕ್ಯತೆಯನ್ನು ಸ್ಥಾಪಿಸಬೇಕು ಹಾಗೂ ರಾಷ್ಟ್ರೀಯ ಸರ್ಕಾರವನ್ನು ರಚಿಸಬೇಕು ಎಂದು ಒತ್ತಾಯಿಸಿತು.

ಮುಖ್ಯವಾಗಿ ಜಪಾನಿ ಸೇನೆಯು ಬರ್ಮಾವನ್ನು ವಶಪಡಿಸಿಕೊಂಡು ಭಾರತದ ಗಡಿಯತ್ತ ಧಾವಿಸುತ್ತಿದ್ದ ಆ ಸಮಯದಲ್ಲಿ ಯುದ್ಧ ಯತ್ನಗಳಿಗೆ ತೊಡಕುಂಟುಮಾಡುವ ಯಾವುದೇ ರೀತಿಯ ಹೋರಾಟ ಮಾಡುವುದನ್ನೂ ಸಿಪಿಐ ವಿರೋಧಿಸಿತು. ಜಪಾನಿಯರ ಮುನ್ನಡೆಯನ್ನು ತಡೆಯಲು ಅಗತ್ಯವಾದ ಐಕ್ಯ ಪ್ರಯತ್ನಗಳಿಗೆ ಧಕ್ಕೆ ಉಂಟುಮಾಡಬಹುದೆಂಬ ಭೀತಿಯಿಂದ 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನೂ ಅದು ವಿರೋಧಿಸಿತು.

ಆದರೆ, ಸ್ವಾತಂತ್ರ್ಯ ಹೋರಾಟಗಾರರ ಮೇಲಿನ ದಾಳಿ ದಬ್ಬಾಳಿಕೆಯನ್ನು ಪಕ್ಷ ಖಂಡಿಸಿತು ಮತ್ತು ರಾಷ್ಟ್ರೀಯ ಮುಖಂಡರುಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕರೆ ಕೊಟ್ಟಿತು.

ಪಕ್ಷದ ಈ ದೃಷ್ಟಿಕೋನವು ಅದಾಗಲೇ ಜನಸಮುದಾಯದಲ್ಲಿ ಬೆಳೆದುಬರುತ್ತಿದ್ದ ಸಾಮ್ರಾಜ್ಯಶಾಹಿ ವಿರೋಧಿ ಭಾವನೆಗಳ ವಿರುದ್ಧ ಹೋಯಿತು. 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ವಿರೋಧಿಸಿದ ನಿಲುವು ರಾಷ್ಟ್ರೀಯ ರಾಜಕೀಯ ಹೋರಾಟಗಳಿಂದ ಪಕ್ಷವನ್ನು ಪ್ರತ್ಯೇಕಗೊಳಿಸಿ ಒಂಟಿಯಾಗಿಸಿತು.

ಆನಂತರದಲ್ಲಿ, ಸ್ವಾತಂತ್ರ್ಯ ನಂತರ, ಪಕ್ಷವು ತನ್ನ ನಿಲುವನ್ನು ವಿಮರ್ಶೆಗೆ ಒಳಪಡಿಸಿತು ಮತ್ತು ಈ ಕೆಳಗಿನ ತೀರ್ಮಾನಗಳಿಗೆ ಬಂತು: ಜನಸಂಗ್ರಾಮದ ವಿಷಯದಲ್ಲಿ ಕೈಗೊಂಡ ರಾಜಕೀಯ ನಿಲುವುಗಳು ಬಹುತೇಕ ಸರಿಯಾಗಿ ಇದ್ದವಾದರೂ, ಪಕ್ಷವು ಕೆಲವು ಗಂಭೀರ ಪ್ರಮಾದಗಳನ್ನು ಎಸಗಿತ್ತು ಮತ್ತು ಅದಕ್ಕಾಗಿ ಪಕ್ಷ ಬಹಳ ಬೆಲೆ ತೆರಬೇಕಾಯಿತು. ಜನಸಂಗ್ರಾಮವನ್ನು ಸರಿಯಾಗಿಯೇ ಬೆಂಬಲಿಸಿತಾದರೂ ಅಂತರ್ರಾಷ್ಟ್ರೀಯ ವಲಯದ ವೈರುಧ್ಯಗಳನ್ನು ರಾಷ್ಟ್ರೀಯ ಮಟ್ಟದ ವೈರುಧ್ಯದೊಂದಿಗೆ ಬೆಸೆಯುವಲ್ಲಿ ಪಕ್ಷ ವಿಫಲವಾಯಿತು. ಅಂತರ್ರಾಷ್ಟ್ರೀಯ ವಲಯದಲ್ಲಿ ಫ್ಯಾಸಿಸಮ್ಮಿನ ವಿರುದ್ಧದ ಹೋರಾಟವು ಪ್ರಧಾನವಾಗಿತ್ತು, ರಾಷ್ಟ್ರೀಯ ಮಟ್ಟದಲ್ಲಿ ಜನರು ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಗಳೊಂದಿಗಿನ ವೈರುಧ್ಯವು ಪ್ರಬಲವಾಗಿತ್ತು. ಆದಕಾರಣ ಭಾರತ ಬಿಟ್ಟು ತೊಲಗಿ ಚಳುವಳಿಯನ್ನು ಪಕ್ಷ ವಿರೋಧಿಸಿದ್ದು ಮತ್ತು ಯುದ್ಧ ಯತ್ನಗಳಿಗೆ ತೊಡಕಾಗಬಹುದು ಎಂಬ ಕಾರಣ ನೀಡಿ ಸಾಮೂಹಿಕ ಹೋರಾಟಗಳನ್ನು ಮಾಡದಿರಲು ಪಕ್ಷ ತಳೆದ ನಿಲುವು ತಪ್ಪಾಗಿತ್ತು.

ದುಡಿಯುವ ಜನರ ಹೋರಾಡುವ ಸಂಘಟನೆಗಳಿಗೆ ಬಹು ಮುಖ್ಯವಾಗಿ ಕಾರ್ಮಿಕ ಸಂಘಗಳು ಹಾಗೂ ಕಿಸಾನ್ ಸಭಾಗಳಿಗೆ ನೀಡಿದ ಮಾರ್ಗದರ್ಶನವು ಪರಿಷ್ಕರಣವಾದಿ ಮಾರ್ಗಚ್ಯುತಿಯಿಂದ ಬಾಧಿತವಾಗಿತ್ತು. ಯುದ್ಧ ಯತ್ನಗಳಿಗೆ ಸಹಾಯಕವಾಗುವಂತೆ ಕೈಗಾರಿಕಾ ಹಾಗೂ ಕೃಷಿ ಉತ್ಪಾದನೆಗಳನ್ನು ಹೆಚ್ಚು ಮಾಡಿ

ಪುಟ 14 ನೋಡಿ

ಬಂಗಾಲದ 1943ರ ಬರದ ಸಮಯದಲ್ಲಿ ಆಹಾರ ಮತ್ತು ಬಟ್ಟೆ ಹಂಚುತ್ತಿರುವ ಸಿಪಿಐ ಮಾರ್ಗದರ್ಶನದ ಜನರಕ್ಷಾ ಸಮಿತಿ ಸದಸ್ಯರು ಮತ್ತು ಕಳ್ಳದಾಸ್ತಾನುಗಳನ್ನು ಹೊರಗೆಳೆಯುತ್ತಿರುವ ವಿದ್ಯಾರ್ಥಿಗಳು



ಅರುಣಾ ಅಸಫ್ ಅಲಿ





ಪುಟ 2 ರಿಂದ

ಕೋವಿಡ್ ಪ್ಯಾಕೇಜ್ ಏನೇನೂ ಸಾಲದು

ವಯಸ್ಸಾದ ವಿಧವೆಯರಿಗೆ ಮತ್ತು ವಿಕಲಾಂಗರಿಗೆ ರೂ.1000 ಕೊಡುವುದಾಗಿ ಹೇಳಿರುವುದು ಬಹಳ ಕಡಿಮೆಯಾಗುತ್ತದೆ. ಇವರೆಲ್ಲರಿಗೂ ತಮ್ಮ ಬದುಕು ಸಾಗಿಸಲು ನೆರವು ಬೇಕಾಗಿದೆ. 1000ರೂ. ಎಷ್ಟು ಸಾಲುತ್ತದೆ?

ಆರೋಗ್ಯ ಕಾರ್ಯಕರ್ತರಿಗೆ ವಿಮೆಗೆ ಸರಕಾರವೇನೂ ವೆಚ್ಚ ಮಾಡುತ್ತಿಲ್ಲ. ಇದು ಖಾಸಗೀ ವಲಯವನ್ನು ಒಳಗೊಂಡಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಇವರಿಗೆಲ್ಲ ತಕ್ಷಣವೇ ಬೇಕಾಗಿರುವುದು ಸುರಕ್ಷತಾ ಉಡುಗೆಗಳು, ಔಷಧಿಗಳು ಮತ್ತು ಸಾಕಷ್ಟು ತಪಾಸಣಾ ಸೌಲಭ್ಯಗಳು. ಇವುಗಳ ಪ್ರಸ್ತಾಪವೇ ಇಲ್ಲ.

ಸರಕಾರ ಪ್ರತಿ ರೈತನಿಗೆ ರೂ.2000 ಕೊಡುವುದಾಗಿ ಪ್ರಕಟಿಸಿದೆ. ಆದರೆ ಇದು 2019ರ ಚುನಾವಣೆಗಳ ತುಸು ಮೊದಲು ಪ್ರಕಟಿಸಿದ್ದ 'ಪ್ರಧಾನ ಮಂತ್ರಿ–ಕಿಸಾನ್ ಯೋಜನಾ'(ಪಿಎಂಕೆವೈ)ದಲ್ಲಿ ಸಿಗಬೇಕಾಗಿದ್ದ ಮೊದಲ ಕಂತು.

ಮಹಿಳೆಯರ ಜನಧನ ಖಾತೆಗೆ 500ರೂ. ವರ್ಗಾವಣೆ ಏನೇನೂ ಸಾಲದು. ನಾವು ಎಲ್ಲ ಜನಧನ ಖಾತೆದಾರರಿಗೆ ಮತ್ತು ಬಿಪಿಎಲ್ ಕುಟುಂಬಗಳಿಗೆ ಮುಂದಿನ ಮೂರು ತಿಂಗಳು ಮಾಸಿಕ 5000ರೂ. ವರ್ಗಾವಣೆ ಮಾಡಬೇಕು ಎಂದು ಕೇಳಿದ್ದೆವು.

ಕಾರ್ಮಿಕರಿಗೆ ಗಮನಾರ್ಹ ಪ್ರಯೋಜನಗಳೇನೂ ಇಲ್ಲ. ಅವರ ಭವಿಷ್ಯ ನಿಧಿ ಖಾತೆಗಳಿಗೆ ತಿಂಗಳ ಸಂಬಳದ 24% ಅವರಿಗೇನೂ ಹೆಚ್ಚಿನ ಪರಿಹಾರ ಕೊಡುವುದಿಲ್ಲ, ಅದು ಅವರಿಗೆ ಸಲ್ಲಬೇಕಾದ್ದು, ಅವರದ್ದೇ ಉಳಿತಾಯ!

ಸರಕಾರ ಈಗೇನು ಮಾಡಬೇಕು?

ಹಸಿವು ಮತ್ತು ಪೋಷಕಾಂಶ ಕೊರತೆಯನ್ನು ಎಲ್ಲ ಬಡವರಿಗೆ , ನಿರ್ದಿಷ್ಟವಾಗಿ ಮಧ್ಯಾಹ್ನದ ಊಟದ ಯೋಜನೆಗೆ ಒಳಪಟ್ಟಿರುವ ಮಕ್ಕಳ ಕುಟುಂಬಗಳಿಗೆ ರೇಶನ್ ಕಿಟ್‌ಗಳನ್ನು ಒದಗಿಸುವ ಮೂಲಕ ತಡೆಯಬಹುದು. ಕೇರಳ ಇದನ್ನು ಮಾಡುತ್ತಿದೆ.

ದೊಡ್ಡ ಪ್ರಮಾಣದಲ್ಲಿ ಲೇ–ಆಫ್‌ಗಳು, ರಿಟ್ರೆಂಚ್‌ಮೆಂಟ್‌ಗಳು ನಡೆಯುತ್ತಿರುವಾಗ, ಸರಕಾರ ಕನಿಷ್ಟ, ಮುಂದಿನ ಮೂರು ತಿಂಗಳು ಸಂಬಳ ಪಾವತಿಯ ಖಾತರಿ ನೀಡಬೇಕು.


ರೈತರು ಒಂದು ಬಾರಿಯ ಸಾಲಮನ್ನಾ ಪಡೆಯಬೇಕು.

ಇದು ಫಸಲಿನ ಸಮಯ. ರೈತರ ಉತ್ಪನ್ನಗಳನ್ನು ಘೋಷಿತ ಕನಿಷ್ಟ ಬೆಂಬಲ ಬೆಲೆಗಳಲ್ಲಾದರೂ ಖರೀದಿಸುವ ಮತ್ತು ರೈತರು ಸುರಕ್ಷಿತವಾಗಿ ಫಸಲು ತೆಗೆಯಲು ನೆರವಾಗುವ ಖಾತರಿ ನೀಡಬೇಕು. ಇದಕ್ಕೆ ಆದ್ಯತೆ ನೀಡಲೇಬೇಕು.

ಮಧ್ಯಮ ವರ್ಗಗಳಿಗೆ, ವಿಶೇಷವಾಗಿ ನೌಕರರಿಗೆ, ಸಾಲ ಮರುಪಾವತಿಯನ್ನು ಮತ್ತು ತಿಂಗಳ ಇಎಂಐ ಕಂತುಗಳನ್ನು ಮುಂದೂಡುವ ಪರಿಹಾರ ಒದಗಿಸಬೇಕು.

ಸ್ವಸಹಾಯ ಗುಂಪುಗಳಿಗೆ ಸಾಲ ಲಭ್ಯತೆ ಎಂಬುದು ದೇಶದಲ್ಲಿನ 6.85 ಕೋಟಿ ಕುಟುಂಬಗಳಿಗೆ ಅರ್ಥಹೀನ, ಏಕೆಂದರೆ, ಅವರ ಎಲ್ಲ ಚಟುವಟಿಕೆಗಳೂ ಸ್ಥಗಿತಗೊಂಡಿವೆ. ಅವರು ಬದುಕುಳಿಯಲು ಮತ್ತು ಆರೋಗ್ಯದಿಂದಿರಲು ಹಣ ನೀಡಿ ನೆರವಾಗಿ.

ಮನರೇಗ ಕೂಲಿಗಳಲ್ಲಿ 20ರೂ. ಹೆಚ್ಚಳ ಒಂದು ತಮಾಷೆಯಾಗಿದೆ. ಈಗ ಯಾವ ಕೆಲಸವೂ ನಡೆಯುತ್ತಿಲ್ಲ. ಅವರಿಗೆ ಬೇಕಾಗಿರುವುದು ನೇರ ನಗದು ವರ್ಗಾವಣೆಗಳು, ಅಥವ ಕೆಲಸವಿಲ್ಲದಿದ್ದರೂ ಕೂಲಿಗಳ ಪಾವತಿ.



ಲಾಕ್ ಡೌನ್ ಪ್ರಕಟಣೆಯ ನಂತರ ಪುಣೆ ರೈಲ್ವೆ ಸ್ಟೇಶನ್‌ನಲ್ಲಿ. ಈ ದೃಶ್ಯ ಬೆಂಗಳೂರು ಸೇರಿದಂತೆ ಎಲ್ಲ ನಗರಗಳಲ್ಲಿ ಕಂಡು ಬಂತು

ಪ್ರಧಾನಿಗಳಿಗೆ ಯೆಚುರಿ ಬಹಿರಂಗ ಪತ್ರ, ಮಾರ್ಚ್ 24

ಶ್ರೀ ನರೇಂದ್ರ ಮೋದಿ
ಭಾರತದ ಪ್ರಧಾನ ಮಂತ್ರಿಗಳು
ಸೌತ್ ಬ್ಲಾಕ್, ನವದೆಹಲಿ–110001

ಪ್ರಿಯ ಪ್ರಧಾನ ಮಂತ್ರಿಗಳೇ,

ಮಾರಕ ಕೋವಿಡ್–19ರ ಈ ದಿನಗಳಲ್ಲಿ ತಾವು ಚೆನ್ನಾಗಿದ್ದೀರೆಂದು ಆಶಿಸುತ್ತೇವೆ.

ನಾವು ಗಾಂಧೀಜಿಯವರಿಗೆ 150ರ ಜನ್ಮದಿನಾಚರಣೆ ನಡೆಸುತ್ತಿದ್ದೇವೆ. ಇಂತಹ ಸಮಯದಲ್ಲಿ ರಾಷ್ಟ್ರಪಿತನ ನೆನಪಾಗುತ್ತದೆ.

ಅವರು ನಮಗೆ ಸದಾ ಹಸಿರಾಗಿರುವ ಒಂದು ತಾಯಿತವನ್ನು ಕೊಟ್ಟಿದ್ದಾರೆ: "ನೀವು ನೋಡಿರಬಹುದಾದ ಅತ್ಯಂತ ಬಡ ಮತ್ತು ದುರ್ಬಲ ವ್ಯಕ್ತಿಯ ಮುಖವನ್ನು ನೆನಪಿಸಿಕೊಳ್ಳಿ, ನೀವು ಯೋಚಿಸುತ್ತಿರುವ ಕ್ರಮದಿಂದ ಆತನಿಗೆ ಪ್ರಯೋಜನವಾಗುತ್ತದೆಯೇ ಎಂದು ನಿಮ್ಮನ್ನೇ ಕೇಳಿಕೊಳ್ಳಿ." ಈ ತಾಯಿತವನ್ನು ವಾಚಾ, ಮನಸಾ ಪಾಲಿಸುವ ಯಾವುದೂ ಭಾರತ ಕೋವಿಡ್–19ರ ನಡೆಸಬೇಕಾದ ಸಮರವನ್ನು ಕುರಿತಂತೆ ನಿಮ್ಮ ಪ್ರಸಾರ ಭಾಷಣದಲ್ಲಾಗಲೀ ಅಥವ ನಿಮ್ಮ ಸರಕಾರದ ಕ್ರಿಯೆಗಳು ಮತ್ತು ನಡೆಗಳಲ್ಲಾಗಲೀ ನಮಗೆ ಕಾಣಿಸುತ್ತಿಲ್ಲ.

ನಾವು 21 ದಿನಗಳ ದಿಗ್ಬಂಧನವನ್ನು ಸಾರುವ ನಿಮ್ಮ ಪ್ರಸಾರ ಭಾಷಣವನ್ನು ನೋಡಿದೆವು.

ನಮಗೆ ತುಂಬಾ ನಿರಾಸೆಯಾಗಿದೆ, ಬಡವರು ಮತ್ತು ನೆರವಿನ ಅಗತ್ಯವಿರುವವವರಿಗೆ ಪರಿಹಾರ ಒದಗಿಸುವ, ಮತ್ತು ಈ ದಿಗ್ಬಂಧನದಲ್ಲಿ ಬದುಕುಳಿಯಲು ತುರ್ತು ಸಹಾಯ ಬೇಕಾದವರ ಸಂಕಟಗಳನ್ನು ಶಮನ ಮಾಡುವ, ಯಾವುದೇ ಮೂರ್ತ ಕ್ರಮಗಳನ್ನು ಪ್ರಕಟಿಸಿಲ್ಲ.

ಇಂತಹ ದಿಗ್ಬಂಧನಗಳಿಂದ ಅತ್ಯಂತ ಹೆಚ್ಚು ನೋವನುಭವಿಸುವ ಬಡ ವಲಸಿಗರಿಗೆ ಸಹಾಯ ಮಾಡುವ ಯಾವುದೇ ಕ್ರಮಗಳಿಲ್ಲ. ಅವರಲ್ಲಿ ಬಹಳಷ್ಟು ಮಂದಿ ತಮ್ಮೂರುಗಳಿಗೆ ಮರಳುವ ದಾರಿಯಲ್ಲಿ ಆಹಾರ, ಅಥವ ಆಶ್ರಯವಿಲ್ಲದೆ ನಿಂತಿದ್ದಾರೆ. ಅವರು ಸುರಕ್ಷಿತ ಸ್ಥಳಗಳನ್ನು ತಲುಪುವುದಾದರೂ ಹೇಗೆ? ಅವರು ಹಣ, ಆಹಾರವಿಲ್ಲದೆ, ಜತೆಗೆ. ವರದಿಯಾಗಿರುವಂತೆ ಪೋಲೀಸ್ ಕಿರುಕುಳಗಳಿಂದಲೂ, ಬದುಕುಳಿಯುವುದಾದರೂ ಹೇಗೆ? ಅವರು ಸುರಕ್ಷಿತತೆಗಾಗಿ ಅಲ್ಲಿ–ಇಲ್ಲಿ ಓಡಾಡಬೇಕಾಗಿ ಬಂದಿದೆ, ಸಾರಿಗೆ ಅವರಿಗೆ ಲಭ್ಯವಿಲ್ಲ, ಮೂಲ ಅಗತ್ಯಗಳನ್ನು ಖರೀದಿಸಲು ಯಾವುದೇ ಹಣವನ್ನೂ ಅವರಿಗೆ ಕೊಡಲಾಗಿಲ್ಲ.

ಕನಿಷ್ಟ 45 ಕೋಟಿ ಭಾರತೀಯರು ದಿನಗೂಲಿಗೆ ಕೆಲಸ ಮಾಡುವವರು. ಹೇಗೋ ಬದುಕು ಸಾಗಿಸುತ್ತಿದ್ದವರನ್ನು ನೋಡಿಕೊಳ್ಳಲು ಯಾವುದೇ ಕ್ರಮಗಳಿಲ್ಲದೆಯೇ 21 ದಿನಗಳ ದಿಗ್ಬಂಧನ ಪ್ರಕಟಿಸಿರುವುದರಿಂದ ಹಲವು ಉದ್ಯೋಗಗಳು ಇಲ್ಲವಾಗಿ ಬಿಟ್ಟಿವೆ. ಅವರ ಜೀವಗಳು ಅಪಾಯದಲ್ಲಿವೆ, ಕೂಲಿ, ಸಂಬಳಗಳ ಭದ್ರತೆಯಿಲ್ಲವಾಗಿದೆ, ಅಲ್ಲದೆ ಯಾವುದೇ ಆಶ್ವಾಸನೆಗಳೂ ಇಲ್ಲದೆ ಪರಿಸ್ಥಿತಿ ಅಸ್ತವ್ಯಸ್ತವಾಗಿದೆ. ಇದು, ಈಗ ಈ ಕ್ಷಣದಲ್ಲಿ ಮಹಾಮಾರಿಯನ್ನು ಎದುರಿಸಲು ನಮಗೆ ಬೇಕಾದ ಸಾಮಾಜಿಕ ಅಂತರಕ್ಕೆ ತದ್ವಿರುದ್ಧವಾಗಿದೆ.

ಆರೋಗ್ಯಪಾಲನೆಗೆ 15,000 ಕೋಟಿ ರೂ.ಗಳ 'ಪ್ಯಾಕೇಜ್' ಪ್ರಕಟಿಸಿದ್ದನ್ನು ನಾವು ಕೇಳಿದೆವು, ಆದರೆ ಇದರಲ್ಲೂ ಕೆಲವು ಅಚ್ಚರಿಗಳಿವೆ. ನೀವು "5 ಟ್ರಿಲಿಯನ್ ಅರ್ಥವ್ಯವಸ್ಥೆ"ಯ ಬಗ್ಗೆ, ಆರ್ಥಿಕ ರಂಗದಲ್ಲಿ ದಾಪುಗಾಲಿನ ಮುನ್ನಡೆಯ ಬಗ್ಗೆ ಹೇಳುವುದನ್ನು ಪದೇ–ಪದೇ ಕೇಳುತ್ತ ಬಂದಿದ್ದೇವೆ. ಅದು ನಿಜವಾಗಿದ್ದರೆ, ನಮಗೆ ಕೇವಲ 15,000 ಕೋಟಿ ರೂ.ಗಳನ್ನು ಮಾತ್ರವೇ ಇದಕ್ಕೆ ವೆಚ್ಚ ಮಾಡುವ ಶಕ್ತಿಯಿರುವುದೇ? ಅಂದರೆ ಒಬ್ಬ ನಾಗರಿಕರಿಗೆ ಕೇವಲ 112 ರೂ.? 7.78 ಲಕ್ಷ ಕೋಟಿ ರೂ.ಗಳನ್ನು ಶ್ರೀಮಂತ ಕಾರ್ಪೊರೇಟ್‌ಗಳನ್ನು ಪಾರುಮಾಡಲು, ಅಥವ ಅವರಿಗೆ 1.76ಲಕ್ಷ ಕೋಟಿರೂ.ಗಳ ತೆರಿಗೆ ರಿಯಾಯ್ತಿಗಳನ್ನು ಪ್ರಕಟಿಸಬಹುದಾದರೆ, ಇಂತಹ ಒಂದು ಗಂಭೀರ ಅಪಾಯವನ್ನು ಎದುರಿಸುತ್ತಿರುವ ನಮ್ಮ ಜನಗಳ ಆರೋಗ್ಯಕ್ಕೆ ಇದಕ್ಕಿಂತ ಹೆಚ್ಚು ಹಣ ಕೊಡಲು ಖಂಡಿತಾ ನಮಗೆ ಸಾಧ್ಯ. ನೀವು ಬಡ ಜೀವಗಳನ್ನು ಉಳಿಸಲು ಬೇಕಾದ ಹಣಕಾಸಿಗಾಗಿ ಸೂಪರ್ ಶ್ರೀಮಂತರ ಮೇಲೆ ತೆರಿಗೆ ಹಾಕುತ್ತಿಲ್ಲವೇಕೆ?

ವಾರ್ಷಿಕ ಬಜೆಟ್ ಮಂಡಿಸುವಾಗಲೇ ಒಂದು ಜಾಗತಿಕ ಕಾಯಿಲೆ ಹರಡುವ ಲಕ್ಷಣಗಳಿದ್ದವು. ಆದರೆ ಬಜೆಟಿನಲ್ಲಿ ಆರೋಗ್ಯದ ಮೇಲೆ ಸರಕಾರದ ವೆಚ್ಚವನ್ನು ಇಳಿಸಲಾಯಿತು. ಆಸ್ಪತ್ರೆಗಳಿಗೆ ಹಣನೀಡಿಕೆಯಲ್ಲಿ ದೊಡ್ಡ ಕಡಿತ ಮಾಡಲಾಗಿದೆ, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಕೇವಲ 0.1ಶೇ ಹೆಚ್ಚಿಸಲಾಯಿತು. ಅತ್ಯಂತ ದೊಡ್ಡ ಇಳಿಕೆಯೆಂದರೆ 'ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ'ಕ್ಕೆ ಹಣವನ್ನು 156 ಕೋಟಿ ರೂ.ಗಳಿಂದ 29 ಕೋಟಿ ರೂ.ಗಳಿಗೆ ಇಳಿಸಲಾಯಿತು. ಆಯುಷ್ಮಾನ್ ಭಾರತ ಯೋಜನೆಗೆ ಹಣ ನೀಡಿಕೆಯನ್ನು ಹೆಚ್ಚಿಸಬೇಕಾಗಿತ್ತು. ಅದು 6400 ಕೋಟಿ ರೂ.ಗಳಲ್ಲೇ ನಿಂತಿದೆ. ಆಹಾರ ಸುರಕ್ಷಿತತೆ ಮತ್ತು ಮಾನಕ ಪ್ರಾಧಿಕಾರಕ್ಕೆ ಹಣ ನೀಡಿಕೆ 360 ಕೋಟಿ ರೂ.ಗಳಿಂದ 283.71 ಕೋಟಿ ರೂ.ಗಳಿಗೆ ಇಳಿಯಿತು. ಆಘಾತಕಾರೀ ಸಂಗತಿಯೆಂದರೆ, ಸಾಂಸರ್ಗಿಕ ರೋಗಗಳಿಗೆ ಸಂಬಂಧಪಟ್ಟಂತೆ ಹಣ ನೀಡಿಕೆ ಕೂಡ 2,178 ಕೋಟಿ ರೂ.ನಲ್ಲೇ ನಿಂತಿದೆ.

ನಿಜಸಂಗತಿಯೆಂದರೆ, ಈ ಖರ್ಚುಗಳಲ್ಲಿ ನಿಮ್ಮ ಸರಕಾರ ಮಾಡಿರುವ ಕ್ರಿಮಿನಲ್ ಕಡಿತಗಳು ಭಾರತವನ್ನು ಹೆಚ್ಚು ಅಪಾಯಕ್ಕೀಡು ಮಾಡಿವೆ. ಕೋವಿಡ್–19ನ್ನು ಎದುರಿಸಿ ನಿಲ್ಲಲು ಭಾರತಕ್ಕೆ ಸುಮಾರು ಎರಡೂವರೆ ತಿಂಗಳ ಸಮಯಾವಕಾಶವಿತ್ತು. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಅಗ್ಗದಲ್ಲಿ ತಪಾಸಣಾ ಕಿಟ್‌ಗಳನ್ನು ಪಡೆಯಲು, ಎದುರಿಸುವ ರೀತಿಗಳನ್ನು ಗುರುತಿಸಲು ಅಥವ ಹೆಚ್ಚು ಮುಖಕವಚಗಳನ್ನು ಮತ್ತು ವೆಂಟಿಲೇಟರ್‌ಗಳನ್ನು ಖರೀದಿಸಲು ಏನೇನೂ ಮಾಡಲಿಲ್ಲ. ಈ ಪ್ರಾಣರಕ್ಷಕ ಉಪಕರಣಗಳ ರಫ್ತಿನ ಮೇಲೆ ಮಾರ್ಚ್ 24ರ ವರೆಗೂ ಯಾವುದೇ ನಿರ್ಬಂಧಗಳನ್ನು ಹಾಕಲಿಲ್ಲ.

ನೀವು ರಾಜ್ಯ ಸರಕಾರಗಳು ಆರೋಗ್ಯದ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸುವ ಅಗತ್ಯದ ಬಗ್ಗೆ ಮಾತಾಡಿದ್ದೀರಿ! ಬಹುಶಃ ನೀವು, ಇಂತಹ ಒಂದು ಸೂಕ್ಷ್ಮ ಸಮಯದಲ್ಲಿ ಬಿಜೆಪಿ ಮಧ್ಯಪ್ರದೇಶದಲ್ಲಿ ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರವನ್ನು ಅಸ್ಥಿರಗೊಳಿಸಲು ಮುಂದಾಯಿತು, ಮತ್ತು ಸಂಸತ್ತು ನಿಮಗೆ ಬೇಕಾದ ಶಾಸನಗಳನ್ನು ಮಾಡಲು ಬಿಡಲಾಯಿತು ಎಂಬುದನ್ನು ಮರೆತಿರುವಂತೆ ಕಾಣುತ್ತದೆ.

ಕೇರಳದ ಎಡ ನೇತೃತ್ವದ ಸರಕಾರ ಮತ್ತು ಬೇರೆ ಕೆಲವು ಪ್ರತಿಪಕ್ಷಗಳ ಆಳ್ವಿಕೆಯ ಸರಕಾರಗಳು ತಪಾಸಣೆಗೆ, ಸೋಂಕು ಗುರುತಿಸಲು ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಅತ್ಯುನ್ನತ ಆದ್ಯತೆ ನೀಡಲು, ಜತೆಗೆ ಅತ್ಯಂತ ಹೆಚ್ಚು ಬಾಧೆಗಳಿಗೆ ಒಳಗಾಗಿರುವ ವಿಭಾಗಗಳಿಗೆ ಗಮನಾರ್ಹ ಆರ್ಥಿಕ ಪ್ಯಾಕೇಜ್‌ಗಳನ್ನು ನೀಡುವುದರೊಂದಿಗೆ ಒಳ್ಳೆಯ ಕೆಲಸ ಮಾಡಿವೆ. ಈ ನಡೆಗಳನ್ನು, ಚೈತನ್ಯವನ್ನು, ಆಡಳಿತ ಸಾಮರ್ಥ್ಯವನ್ನು ಮತ್ತು ಅದರ ಹಿಂದಿರುವ ಭಾವನೆಯನ್ನು ಅನುಕರಿಸುವುದಂತೂ ದೂರ, ಅವನ್ನು ಇದುವರೆಗೆ ಎಂದಿಗೂ ನೀವು ಸ್ವೀಕರಿಸಿಲ್ಲ.

ಈ ಕಷ್ಟದ ಸಮಯದಲ್ಲಿ ನೀವು ಪ್ರತಿಯೊಬ್ಬ ಭಾರತೀಯರಿಗೂ ಅವರಿಗೆ ಸಲ್ಲತಕ್ಕದ್ದನ್ನು ಕೊಡಬೇಕು. ಇದರ ಅರ್ಥವೆಂದರೆ, ನೀವು, ಈ ಕಷ್ಟಕರ ದಿಗ್ಬಂಧನದ ಸಮಯದಲ್ಲಿ ಆರ್ಥಿಕ ನೆರವಿಗೂ ಮತ್ತು ನಾವು ಈಗಿಂದಲೇ ಕೈಗೊಳ್ಳಬೇಕಾದ ಪರೀಕ್ಷಣೆ, ಸೋಂಕು ಗುರುತಿಸುವುದು ಮತ್ತು ಸಾರ್ವಜನಿಕ ಆರೋಗ್ಯದ ಕ್ರಮಗಳಿಗೂ ಸ್ಪಷ್ಟ ಹೆಜ್ಜೆಗಳನ್ನು ಪ್ರಕಟಿಸಬೇಕು. ಇವೆರಡೂ, ಈ ಮಹಾಮಾರಿಯನ್ನು ಸೋಲಿಸಲು ನಮಗೆ ಸಾಧ್ಯವಾಗಬೇಕಾದರೆ ಮಹತ್ವದ್ದಾಗುತ್ತವೆ, ಇಲ್ಲವಾದರೆ ಬಹಳ ತಡವಾದೀತು.

ಈ ಸಮಯದಲ್ಲಿ ಕೋವಿಡ್–19ನ ಎದುರು ಸಮರಕ್ಕೆ ಒಟ್ಟಾಗಿ ನಿಂತಿದ್ದೇವೆ.

ಆದರೆ ನಿಮ್ಮ ಸರಕಾರ ನಾಗರಿಕರಿಂದ ಪ್ರತಿಯೊಂದನ್ನೂ ಕೇಳುತ್ತಿದೆ, ನೀವು ಮಾತ್ರ ಸರಕಾರ ಅವರ ಜೀವನಾಧಾರಗಳನ್ನು ನೋಡಿಕೊಳ್ಳುವ ಬಗ್ಗೆ ಯಾವುದೇ ಆಶ್ವಾಸನೆಗಳನ್ನು ಕೊಟ್ಟಿಲ್ಲ.

ದಯವಿಟ್ಟು, ನಮ್ಮ ಜನರು ಜೀವಂತವಾಗುಳಿಯಲು ಮತ್ತು ಆರೋಗ್ಯವಂತರಾಗಿ ಇರಲಿಕ್ಕಾಗಿ ಇದನ್ನು ಮಾಡಿ ಎಂದು ಆಗ್ರಹಿಸುತ್ತೇನೆ.

ಸೀತಾರಾಂ ಯೆಚುರಿ
ಪ್ರಧಾನ ಕಾರ್ಯದರ್ಶಿ
ಸಿಪಿಐ(ಎಂ)



ಕನಿಷ್ಟ 45 ಕೋಟಿ ಭಾರತೀಯರು ದಿನಗೂಲಿಗೆ ಕೆಲಸ ಮಾಡುವವರು. ಹೇಗೋ ಬದುಕು ಸಾಗಿಸುತ್ತಿದ್ದವರನ್ನು ನೋಡಿಕೊಳ್ಳಲು ಯಾವುದೇ ಕ್ರಮಗಳಿಲ್ಲದೆಯೇ 21 ದಿನಗಳ ದಿಗ್ಬಂಧನ ಪ್ರಕಟಿಸಿರುವುದರಿಂದ ಹಲವು ಉದ್ಯೋಗಗಳು ಇಲ್ಲವಾಗಿ ಬಿಟ್ಟಿವೆ. ಅವರ ಜೀವಗಳು ಅಪಾಯದಲ್ಲಿವೆ, ಕೂಲಿ, ಸಂಬಳಗಳ ಭದ್ರತೆಯಿಲ್ಲವಾಗಿದೆ, ಅಲ್ಲದೆ ಯಾವುದೇ ಆಶ್ವಾಸನೆಗಳೂ ಇಲ್ಲದೆ ಪರಿಸ್ಥಿತಿ ಅಸ್ತವ್ಯಸ್ತವಾಗಿದೆ. ಇದು, ಈಗ ಈ ಕ್ಷಣದಲ್ಲಿ ಮಹಾಮಾರಿಯನ್ನು ಎದುರಿಸಲು ನಮಗೆ ಬೇಕಾದ ಸಾಮಾಜಿಕ ಅಂತರಕ್ಕೆ ತದ್ವಿರುದ್ಧವಾಗಿದೆ.

ಮಹಾಮಾರಿಯಿಂದ ಕೆಲವು ಮೂಲಪಾಠಗಳು



ಈ ಮಹಾಮಾರಿ ಒಂದು ಯುದ್ಧದ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಯುದ್ಧದ ಸಮಯದಲ್ಲಿ ಆಗುವಂತೆ ಈಗಲೂ ಕೊರತೆಗಳು ಉಂಟಾಗುತ್ತವೆ. ಅಷ್ಟೇ ಅಲ್ಲ ಅದನ್ನು ಕೃತಕವಾಗಿ ಸೃಷ್ಟಿಸಲಾಗುತ್ತದೆ. ಒಂದು ಸಮಗ್ರ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಸಾರ್ವತ್ರಿಕ ವಿತರಣಾ ವ್ಯವಸ್ಥೆ ಇವೆರಡೂ ಇಂದು ತುಂಬಾ ಅವಶ್ಯಕ ಅನ್ನುವುದು ಸ್ಪಷ್ಟ. ನವ–ಉದಾರವಾದೀ ವ್ಯವಸ್ಥೆ ಎರಡನ್ನೂ ನಾಶ ಮಾಡಿದೆ. ಪ್ರಸ್ತುತ ಮಹಾಮಾರಿಯಿಂದ ನಾವು ಕಲಿಯಬೇಕಾದ ಒಟ್ಟಾರೆ ಪಾಠವೆಂದರೆ ನವ–ಉದಾರವಾದ ಯಾವ ದಾರಿ ಹಿಡಿಯುವಂತೆ ನಮ್ಮನ್ನು ಬಲವಂತ ಪಡಿಸಿದೆಯೋ ಅದರಿಂದ ಹಿಂದಕ್ಕೆ ಹೋಗಿ ಸಮಗ್ರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹಾಗೂ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಮತ್ತೆ ಪರಿಚಯಿಸಬೇಕು. ಇಲ್ಲದೇ ಹೋದರೆ ಹಲವು ಪ್ರಶಸ್ತ ಜೀವಗಳನ್ನು ಅನಾವಶ್ಯಕವಾಗಿ ಕಳೆದುಕೊಳ್ಳಬೇಕಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು:ಟಿ.ಎಸ್.ವೇಣುಗೋಪಾಲ್ ಕೃಪೆ: ಅರ್ಥ–2

ನೂರು ವರ್ಷಗಳ ಹಿಂದೆ ಜಗತ್ತನ್ನು ಆವರಿಸಿಕೊಂಡಿದ್ದ ಸ್ಪಾನಿಷ್ ಫ್ಲೂ ಬಲಿತೆಗೆದುಕೊಂಡವ ಸಂಖ್ಯೆಗೆ ಹೋಲಿಸಿದರೆ ಈಗ ಕೊರೋನ ವೈರಾಣುವಿನಿಂದ ಸತ್ತವರ ಸಂಖ್ಯೆ ಇದುವರೆಗೆ ಬಹಳ ಕಡಿಮೆಯೇ.. ಆಗ ಅದು ಜಗತ್ತಿನಾದ್ಯಂತ 50 ಕೋಟಿ ಜನರನ್ನು ಬಾಧಿಸಿತ್ತು. ಅಂದರೆ ಆಗಿನ ಜಗತ್ತಿನ ಜನಸಂಖ್ಯೆಯ ಶೇಕಡ 27ರಷ್ಟು ಜನ ಅದರಿಂದ ತೊಂದರೆಗೊಳಗಾಗಿದ್ದರು. ಅವರಲ್ಲಿ ಸುಮಾರು ಶೇಕಡ 10ರಷ್ಟು ಜನ ಸತ್ತಿದ್ದರು (ಈ ಸಂಖ್ಯೆಯ ಬಗ್ಗೆ ವಿಭಿನ್ನ ಅಂದಾಜುಗಳಿವೆ. ಇದು ಒಂದು ಸರಾಸರಿ). ಭಾರತದಲ್ಲೇ ಅಂದಾಜು 1.7 ಕೋಟಿ ಜನ ಇದರಿಂದ ಪ್ರಾಣಕಳೆದುಕೊಂಡಿದ್ದರು. ಅದಕ್ಕೆ ವ್ಯತಿರಿಕ್ತವಾಗಿ ಕೊರೋನ ವೈರಾಣುವಿನಿಂದ ಜಗತ್ತಿನಾದ್ಯಂತ ಪೀಡಿತರಾದವರ ಸಂಖ್ಯೆ ಸಧ್ಯಕ್ಕೆ ಎರಡು ಲಕ್ಷ ಮೀರಿಲ್ಲ. ಸೋಂಕಿತರಲ್ಲಿ ಪ್ರಾಣ ಕಳೆದುಕೊಂಡವರ ಸಂಖ್ಯೆ ಸುಮಾರು ಶೇಕಡ 3.

ಈ ಮಹಾಮಾರಿ ಮುಂದೆ ಯಾವ ಹಾದಿಯಲ್ಲಿ ಸಾಗುತ್ತದೆ ಎಂಬುದು ಸ್ಪಷ್ಟವಿಲ್ಲ. ಈ ಸಾಂಕ್ರಮಿಕ ಖಾಯಿಲೆಗಳೇ ಹಾಗೆ, ವಿಚಿತ್ರವಾಗಿ ನಡೆದುಕೊಳ್ಳುತ್ತವೆ. 1918ರಲ್ಲಿ ಬಂದಿದ್ದ ಸ್ಪಾನಿಷ್ ಜ್ವರ ಹೋಯಿತು ಅಂದುಕೊಳ್ಳುತ್ತಿದ್ದ ಹಾಗೆ, ಮತ್ತೆ ಎರಡನೇ ಬಾರಿ ತೀರಾ ತೀವ್ರವಾಗಿ ಎರಗಿತು. ಕೆಲವೇ ದಿನಗಳಲ್ಲಿ ಮತ್ತೆ ಹೊರಟು ಹೋಯಿತು. ಈಗಿನ ಕೊರೋನ ಕೂಡ ಹಾಗೆ. ಊಹಿಸುವುದಕ್ಕೆ ಸಾಧ್ಯವಿಲ್ಲ.

ಆದರೆ ಅದರಿಂದ ನಾವು ಕಲಿಯಬೇಕಾದ ಮೂಲಭೂತ ಪಾಠ ಈಗಾಗಲೇ ಸ್ಪಷ್ಟವಾಗಿದೆ. ಅದು ಬೇಗ ಹೋಗಿಬಿಟ್ಟರೆ ಪರವಾಗಿಲ್ಲ. ನಾವು ತೆರಬೇಕಾದ ಬೆಲೆ ಕಡಿಮೆಯಾಗಬಹುದು. ಆದರೆ ದೀರ್ಘಕಾಲ ಉಳಿದುಬಿಟ್ಟರೆ ಅದರ ಪರಿಣಾಮ ಘೋರವಾಗಿರಬಹುದು. ಹಿಂದೆಯೇ ನಾವು ಪಾಠ ಕಲಿತಿದ್ದರೆ ಹೀಗಾಗುತ್ತಿರಲಿಲ್ಲ. ವಿಶೇಷವಾಗಿ ಅದು ನಮಗೆ ಎರಡು ಬಹು ಮುಖ್ಯ ಪಾಠಗಳನ್ನು ಕಲಿಸಿದೆ.

ಮೊದಲನೆಯದು ದೇಶದಲ್ಲಿ ಉತ್ತಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬೇಕು. ಅದು ಇಡೀ ದೇಶದ ಜನರಿಗೆ ದೊರಕುವಂತಿರಬೇಕು. ಭಾರತದಲ್ಲಿ ಇಲ್ಲಿಯುವರೆಗೆ ಕಾನಿಸಿಕೊಂಡಿರುವ ಪ್ರಕರಣಗಳಲ್ಲಿ ಇರುವ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲೇ ಒಂದಿಷ್ಟು ವಿಶೇಷ ವ್ಯವಸ್ಥೆಯನ್ನು ಮಾಡಿಕೊಂಡು ಚಿಕಿತ್ಸೆ ಮಾಡಬಹುದು. ಹಾಗೆಯೇ ಸೋಂಕಿನ ತಪಾಸಣೆ ಮಾಡಿರುವ ಸಂಖ್ಯೆಯೂ ಕಡಿಮೆ ಇರುವುದರಿಂದ ಲಭ್ಯವಿರುವ ಸಾರ್ವಜನಿಕ ವ್ಯವಸ್ಥೆಯಲ್ಲಿ ಹೆಚ್ಚೇನೂ ಕಷ್ಟವಿಲ್ಲದೆ ತಪಾಸಣೆ ಮಾಡಲು ಸಾಧ್ಯವಾಗಿದೆ. ಆದರೆ ಹೀಗೆ ತಪಾಸಣೆ ಮಾಡಬೇಕಾದವರ ಹಾಗು ಸೊಂಕಿಗೆ ಒಳಗಾದವರ ಸಂಖ್ಯೆ ಹೆಚ್ಚಾದರೆ ಈಗಿರುವ ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಸಾಲುವುದಿಲ್ಲ. ಖಾಸಗೀ ಆಸ್ಪತ್ರೆಗಳು ದುಬಾರಿ ಹಣ ಪಡೆಯದೆ ತಪಾಸಣೆಯನ್ನಾಗಲಿ, ಚಿಕಿತ್ಸೆಯನ್ನಾಗಲಿ ಮಾಡುವುದಿಲ್ಲ. ಹಾಗಾಗಿ ಹೆಚ್ಚಿನ ರೋಗಿಗಳು ನರಳಬೇಕಾಗುತ್ತದೆ. ಬಡವರನ್ನು ಇದು ತೀವ್ರವಾಗಿ ಬಾಧಿಸುತ್ತದೆ.

ಸರ್ಕಾರ ಈಗಿನ ತುರ್ತುಪರಿಸ್ಥಿತಿಯ ಹಿನ್ನೆಲೆಯಲ್ಲಿ ರೋಗಿಗಳನ್ನು ಪರೀಕ್ಷಿಸಲು ಹಾಗೂ ಚಿಕಿತ್ಸೆ ನೀಡಲು ಖಾಸಗೀ ಆಸ್ಪತ್ರೆಗಳನ್ನು ಒತ್ತಾಯಿಸಿದರೆ ಪರಿಸ್ಥಿತಿ ಬೇರೆಯಾಗಬಹುದು. ಆದರೆ ಅದರ ಸಾಧ್ಯತೆ ಬಹಳ ಕಡಿಮೆ. ಈ ತನಕದ ಭಾರತದ ಪರಿಸ್ಥಿತಿಯನ್ನು ನೋಡಿದರೆ ಖಾಸಗಿ ಆಸ್ಪತ್ರೆಗಳು ತುರ್ತಾಗಿ ಸೇರಿಸಿಕೊಳ್ಳಲೇಬೇಕಾಗಿ ಬರುವ ಪ್ರಕರಣಗಳನ್ನು ದಾಖಲಿಸಿಕೊಂಡು ಚಿಕಿತ್ಸೆ ನೀಡುವ ಸಾಧ್ಯತೆ ಇಲ್ಲ. ಏಕೆಂದರೆ, ದಿಢೀರನೆ ಹೃದಯಾಘಾತ ಆದವರು, ಅಪಘಾತಕ್ಕೆ ಒಳಗಾದವರು ಮುಂತಾದ "ಆಯ್ಕೆಯಿಲ್ಲದೆ" ಖಾಸಗಿ ಆಸ್ಪತ್ರೆಗೆ ಬಂದವರನ್ನು ಹಣ ಕಟ್ಟದೆ ಸೇರಿಸಿಕೊಳ್ಳುವ ಯಾವುದೇ ಅವಕಾಶ ಕೂಡ ಭಾರತದಲ್ಲಿ ಇಲ್ಲ. ಸಂಪೂರ್ಣವಾಗಿ ಮಾರುಕಟ್ಟೆಯ ಆರ್ಥಿಕತೆಯನ್ನು ಅನುಸರಿಸುವ ಅಮೇರಿಕೆಯ ಹಲವು ರಾಜ್ಯಗಳಲ್ಲಿ ಅಂತಹ ಅವಕಾಶಗಳು ಇವೆ. ತುರ್ತುಚಿಕಿತ್ಸೆ ಬೇಕಾದಾಗ ಪ್ರಮುಖ ಶಸ್ತ್ರಚಿಕಿತ್ಸೆಯೂ ಸೇರಿದಂತೆ ಚಿಕಿತ್ಸೆ ಮಾಡಲಾಗುತ್ತದೆ. ವಿಮಾ ಸೌಲಭ್ಯವಿಲ್ಲದಿದ್ದಾಗಲೂ ಪುಕ್ಕಟೆಯಾಗಿ ಚಿಕಿತ್ಸೆ ನೀಡಲಾಗುತ್ತದೆ. ಆದರೆ ಭಾರತದಲ್ಲಿ ಅಂತಹ ಆಕಸ್ಮಿಕ ಸಂದರ್ಭದಲ್ಲಿ ಚಿಕಿತ್ಸೆ ನೀಡಬೇಕಾದ ಯಾವ ಒತ್ತಾಯವೂ ಖಾಸಗೀ ಆಸ್ಪತ್ರೆಗಳಿಗಿಲ್ಲ. ಅವುಗಳು ರಿಯಾಯತಿ ದರದಲ್ಲಿ ಭೂಮಿ ಹಾಗೂ ಇತರ ಹಲವು ಅನುಕೂಲಗಳನ್ನು ಸರ್ಕಾರದಿಂದ ಪಡೆದುಕೊಂಡಿರುತ್ತವೆ. ಆದರೂ ಅಲ್ಲಿ ಅಂತಹ ಪ್ರಕರಣಗಳಲ್ಲಿ ಪುಕ್ಕಟೆಯಾಗಿ ಚಿಕಿತ್ಸೆ ನೀಡುವುದಿಲ್ಲ.

ನಮ್ಮ ಆರೋಗ್ಯ ವ್ಯವಸ್ಥೆಯಲ್ಲಿ ದಿನದಿಂದ ದಿನಕ್ಕೆ ಖಾಸಗೀ ಕ್ಷೇತ್ರದ ಮೇಲೆ ಅವಲಂಬನೆ ಹೆಚ್ಚುತ್ತಿದೆ. ಹಾಗಾಗಿ ಇಂತಹ ಸಾಂಕ್ರಾಮಿಕ ಖಾಯಿಲೆಗಳು ವ್ಯಾಪಕವಾದಾಗ ಅವನ್ನು ನಿಭಾಯಿಸುವುದರಲ್ಲಿ ನಾವು ಖಂಡಿತಾ ಅಸಮರ್ಥರಾಗುತ್ತೇವೆ. ಜಾಗತೀಕರಣದಿಂದಾಗಿ ಇಂತಹ ಸಾಂಕ್ರಾಮಿಕಗಳು ಆಗಾಗ ಸಂಭವಿಸುತ್ತಿವೆ. ನಿಜ, ಅವು ಯಾವವೂ 1918ರ ಇನ್‌ಫ್ಲುಯೆಂಜಾ ಸಾಂಕ್ರಾಮಿಕದಷ್ಟು ತೀವ್ರವಾಗಿಲ್ಲದೇ ಇರಬಹುದು. ಆದರೆ ಜನ ಅವುಗಳಿಂದ ನರಳುವುದನ್ನು ತಪ್ಪಿಸಬೇಕಾದರೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ತುಂಬಾ ಅವಶ್ಯಕ.

ಈ ಸಂದರ್ಭದಲ್ಲಿ ಇನ್ನೊಂದು ಪಾಠವನ್ನು ನಾವು ಕಲಿಯಬೇಕು. ಅವಶ್ಯಕ ವಸ್ತುಗಳ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಅವಶ್ಯಕವಾಗಿ ಬೇಕು. ಈ ಸಾಂಕ್ರಾಮಿಕ ಮಹಾಪಿಡುಗು, ಜಾಗತಿಕ ಆರ್ಥಿಕ ಹಿನ್ನಡೆಯ ಮೇಲೆ ಮಾಡುತ್ತಿರುವ ಪರಿಣಾಮವನ್ನು ಕುರಿತಂತೆ ಹಲವು ಬರಹಗಳು ಬಂದಿವೆ. ಈವರೆಗೂ ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದ ಆರ್ಥಿಕತೆಯಾಗಿದ್ದ ಚೀನಾ ಇಂದು ಈ ಮಹಾಮಾರಿಯ ಕೇಂದ್ರವಾಗಿದೆ. ಅಲ್ಲಿ ಉತ್ಪನ್ನ ಕಡಿಮೆಯಾಗಿರುವುದರಿಂದ ಜಗತ್ತಿನ ಒಟ್ಟಾರೆ ಬೇಡಿಕೆಯಲ್ಲೇ ಕುಸಿತವಾಗುತ್ತದೆ. ಅಲ್ಲಿಂದ ಜಗತ್ತಿಗೆ ಸರಬರಾಜಾಗುತ್ತಿದ್ದ ಸರಕುಗಳು ಪೂರೈಕೆ ಆಗುತ್ತಿಲ್ಲ. ಅದರಿಂದ ಜಗತ್ತಿನ ಉತ್ಪನ್ನದ ಮೇಲೂ ಪ್ರತಿಕೂಲ ಪರಿಣಾಮವಾಗಿದೆ. ಜೊತೆಗೆ ಪ್ರವಾಸಿಗರ ಹಾಗೂ ಪ್ರಯಾಣಿಕರ ಸಂಖ್ಯೆ ಪೂರ್ಣವಾಗಿ ಕುಸಿದಿದೆ. ಇದರಿಂದ ವಿಮಾನ, ಹೋಟೆಲ್ ಕೈಗಾರಿಕೆ, ಇತ್ಯಾದಿ ಉದ್ದಿಮೆಗಳಿಗೂ ಹಾನಿಯಾಗಿದೆ. ಅದರ ಪರಿಣಾಮವಾಗಿ ಉಳಿದ ಉದ್ದಿಮೆಗಳೂ ಕುಸಿದಿವೆ. ಈ ಸಾಂಕ್ರಾಮಿಕದಿಂದ ಜಾಗತಿಕ ಆರ್ಥಿಕತೆ ಸಂಕುಚನಗೊಳ್ಳಲಿದೆ.

ಆದರೆ ಇದಕ್ಕೆ ಇನ್ನೊಂದು ಆಯಾಮವಿದೆ. ಅದನ್ನು ಅಷ್ಟಾಗಿ ಗಮನಿಸಿಲ್ಲ. ಕೋಟಿಗಟ್ಟಲೆ ಜನ ಸಂಪೂರ್ಣವಾಗಿ ಮನೆಯಲ್ಲೇ ಉಳಿದಿರುವುದರಿಂದ ಹೆಚ್ಚಿನ ಅವಶ್ಯಕ ಸರಕುಗಳಿಗೆ ಬೇಡಿಕೆ ಏರುತ್ತದೆ. ಅವರು ಅದನ್ನು ಬಳಕೆಗಾಗಿ ಮಾತ್ರ ಶೇಖರಿಸಿಕೊಳ್ಳುವುದಿಲ್ಲ. ಬೇಕಾಗಿರುವುದಕ್ಕಿಂತ ಹೆಚ್ಚಾಗಿ ಎಲ್ಲರೂ ಶೇಖರಿಸಿಕೊಳ್ಳುತ್ತಿದ್ದಾರೆ, ಇದರಿಂದ ಮುಂದೆ ಕೊರತೆ ಉಂಟಾಗಬಹುದು ಎನ್ನುವ ಭಯದಿಂದಲೂ, ಹತಾಶೆಯಿಂದ ಜನ ತುಂಬಿಟ್ಟುಕೊಳ್ಳುತ್ತಿದ್ದಾರೆ. ಜನ ಮನೆ ಬಿಟ್ಟು ಆಚೆ ಹೋಗಲಾಗದ ಪರಿಸ್ಥಿತಿ ಬಂದಾಗ, ಅದೂ ದೀರ್ಘಕಾಲ ಪರಿಸ್ಥಿತಿ ಮುಂದುವರಿಯಬಹುದು ಎಂಬ ಆತಂಕ ಆವರಿಸಿಕೊಂಡಾಗ ತಮ್ಮ ಅವಶ್ಯಕತೆಗಿಂತ ಹೆಚ್ಚಾಗಿ ಸೇರಿಸಿಟ್ಟುಕೊಳ್ಳುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಜೊತೆಗೆ ಹಾಗೆ ಅತಿಯಾಗಿ ಸ್ಟಾಕ್ ಮಾಡಿಕೊಳ್ಳುವುದರಿಂದ ಕೊರತೆ ಬೀಳಬಹುದೆಂಬ ಲೆಕ್ಕಾಚಾರದಿಂದ ಕಾಳಸಂತೆಕೋರರು ದಾಸ್ತಾನುಗಳನ್ನು ಕೂಡಿಡುವುದು ಹೆಚ್ಚಾಗುತ್ತದೆ. ಅದರಿಂದ ಸರಕುಗಳ ಬೆಲೆ ಮತ್ತಷ್ಟು ಹೆಚ್ಚುತ್ತದೆ. ಹೀಗೆ ಈ ಮಹಾಮಾರಿಯಿಂದ ವಿವಿಧ ಅವಶ್ಯಕ ವಸ್ತುಗಳ ತೀವ್ರ ಕೊರತೆಯುಂಟಾಗುತ್ತದೆ.

ನಿಜ ಹೇಳಬೇಕೆಂದರೆ, ಈ ಪ್ರಕ್ರಿಯೆ ಭಾರತದಲ್ಲಿ ಈಗಾಗಲೇ ಪ್ರಾರಂಭವಾಗಿದೆ. ಮಹಾಮಾರಿ ತೀವ್ರವಾದಂತೆ ಬರುವ ದಿನಗಳಲ್ಲಿ ಪರಿಸ್ಥಿತಿ ತುಂಬಾ ಗಂಭೀರವಾಗಬಹುದು. ಅದು ದುಡಿಯುವ ಜನತೆಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಹುದು. ಅವರೆಲ್ಲಾ ಸಾರ್ವಜನಿಕ ಪಡಿತರ ಪದ್ಧತಿಯ ವ್ಯಾಪ್ತಿಯಲ್ಲಿ ಬರುವುದರಿಂದ ಈ ಬಗ್ಗೆ ಯೋಚಿಸಬೇಕಾಗಿಲ್ಲ ಅನ್ನಬಹುದು. ಆದರೆ ಈ ವಾದ ಎರಡು ಕಾರಣಕ್ಕೆ ಸರಿಯಿಲ್ಲ. ಒಂದು ಸಾರ್ವಜನಿಕ ಪಡಿತರ ಪದ್ಧತಿಯಲ್ಲಿ ಎಲ್ಲಾ ಅವಶ್ಯಕ ವಸ್ತುಗಳನ್ನು ವಿತರಿಸುವುದಿಲ್ಲ. ಎರಡನೆಯದಾಗಿ ಎಲ್ಲಾ ಕಾರ್ಮಿಕರು ಸಾರ್ವಜನಿಕ ವಿತರಣ ವ್ಯವಸ್ಥೆಯ ವ್ಯಾಪ್ತಿಯಲ್ಲಿ ಬರವುದಿಲ್ಲ. ಎಪಿಎಲ್ ಮತ್ತು ಬಿಪಿಎಲ್ ನಡುವೆ ವ್ಯತ್ಯಾಸ ಕಲ್ಪಿಸಿದ ನಂತರ ಸಾರ್ವಜನಿಕ ವಿತರಣ ವ್ಯವಸ್ಥೆ ಕೇವಲ ಬಿಪಿಎಲ್ ಇರುವವರಿಗೆ ಮಾತ್ರ ಸೀಮಿತವಾಯಿತು. ದೊಡ್ಡ ಸಂಖ್ಯೆಯ ಜನ ಅದರ ವ್ಯಾಪ್ತಿಯಿಂದ ಹೊರಗುಳಿದರು. ಹಾಗಾಗಿ ಮುಂದೆ ಜನ ಅತಿಯಾಗಿ ಸ್ಟಾಕ್ ಮಾಡಿಕೊಳ್ಳುವುದರಿಂದ ಹಾಗು ಕಾಳಸಂತೆಕೋರರ ಹಾವಳಿಯಿಂದ ಸರಕುಗಳು ಮಾಯವಾಗತೊಡಗಿದಾಗ ಈ ಜನ ತೊಂದರೆಗೆ ಒಳಗಾಗುತ್ತಾರೆ. ಇದೇ ಕಾರಣಕ್ಕೆ ಕೇವಲ ಆಹಾರಧಾನ್ಯಗಳು ಮಾತ್ರವಲ್ಲದೆ ಬಹುತೇಕ ಎಲ್ಲಾ ಅವಶ್ಯಕ ಪದಾರ್ಥಗಳನ್ನು ಮಾರುವ ಒಂದು ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ ಅವಶ್ಯಕ.


ಈ ಕಷ್ಟ ಕಾಲದಲ್ಲಿ ಇಂತಹ ವ್ಯವಸ್ಥೆಯ ಅವಶ್ಯಕತೆ ನಮಗೆ ಗೋಚರವಾಗುತ್ತದೆ. ಆದರೆ ಇಂತಹ ಸಂದರ್ಭಗಳು ಅಪರೂಪವೇನಲ್ಲ. ಹಾಗಾಗಿ ವಿಭಿನ್ನ ಅವಶ್ಯಕ ವಸ್ತುಗಳನ್ನು ಮಾರುವ ವ್ಯವಸ್ಥೆ ಆರ್ಥಿಕತೆಯ ಒಂದು ಶಾಶ್ವತ ಲಕ್ಷಣವಾಗಬೇಕು.

ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಮಹಾಮಾರಿ ಒಂದು ಯುದ್ಧದ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಯುದ್ಧದ ಸಮಯದಲ್ಲಿ ಆಗುವಂತೆ ಈಗಲೂ ಕೊರತೆಗಳು ಉಂಟಾಗುತ್ತದೆ. ಅಷ್ಟೇ ಅಲ್ಲ ಅದನ್ನು ಕೃತಕವಾಗಿ ಸೃಷ್ಟಿಸಲಾಗುತ್ತದೆ. ಅದಕ್ಕೆ ಸಾರ್ವತ್ರಿಕ ವಿತರಣಾ ವ್ಯವಸ್ಥೆ ಒಂದು ಅವಶ್ಯಕ ಪರಿಹಾರ. ಸಧ್ಯಕ್ಕೆ ಮಾತ್ರವಲ್ಲ ಅದು ಆರ್ಥಿಕತೆಯ ಒಂದು ಶಾಶ್ವತ ಭಾಗವಾಗಿಬಿಡಬೇಕು.

ಸಮಗ್ರ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಒಂದು ಸಾರ್ವತ್ರಿಕ ವಿತರಣಾ ವ್ಯವಸ್ಥೆ ಇವೆರಡೂ ಇಂದು ತುಂಬಾ ಅವಶ್ಯಕ ಅನ್ನುವುದು ಸ್ಪಷ್ಟ. ನವಉದಾರವಾದೀ ವ್ಯವಸ್ಥೆ ಎರಡನ್ನೂ ನಾಶ ಮಾಡಿದೆ. ಅದು ಶಿಕ್ಷಣ ಹಾಗೂ ಆರೋಗ್ಯ ಸೇವೆಯಂತಹ ಅವಶ್ಯಕ ಸೇವೆಗಳ ಖಾಸಗೀಕರಣವನ್ನು ಪ್ರೋತ್ಸಾಹಿಸಿದೆ. ಅದು ಎಂಎನ್‌ಸಿಗಳು ಸೇರಿದಂತೆ ಖಾಸಗೀ ವ್ಯಾಪಾರಿಗಳನ್ನು ಆಹಾರಧಾನ್ಯಗಳ ಮಾರುಕಟ್ಟೆಗೆ ಕರೆತಂದಿದೆ. ಶ್ರೀಮಂತ ರಾಷ್ಟ್ರಗಳು ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ)ಯ ಮಾತುಕತೆಯ ಸಂದರ್ಭದಲ್ಲಿ ಭಾರತವು ಪಡಿತರ ಪದ್ಧತಿಯನ್ನು ನಿಲ್ಲಿಸಬೇಕೆಂದು ಬಯಸಿದವು. ಧಾನ್ಯಗಳನ್ನು ರೈತರಿಂದ ಕೊಂಡುಕೊಳ್ಳುವ ವ್ಯವಸ್ಥೆಯನ್ನು ನಿಲ್ಲಿಸಲು ಒತ್ತಾಯಿಸಿದವು. ಆದರೆ ಯಾವುದೇ ಭಾರತೀಯ ಸರ್ಕಾರವೂ ಇದಕ್ಕೆ ಧೈರ್ಯ ಮಾಡಲಿಲ್ಲ. ಹಾಗಾಗಿ ಇಂದಿಗೂ ನಮ್ಮಲ್ಲಿ ಭಾಗಶಃವಾದರೂ ಪಡಿತರ ಪದ್ಧತಿ ಉಳಿದುಕೊಂಡಿದೆ. ಅದು ಬಿಪಿಎಲ್ ರೂಪದಲ್ಲಿ ಅಸ್ತಿತ್ವದಲ್ಲಿದೆ. ಈ ಬದಲಾವಣೆಯನ್ನು ತಂದ ನವಉದಾರವಾದೀ ವ್ಯವಸ್ಥೆ ನಮ್ಮ ದೇಶವನ್ನು ಇಂತಹ ಮಹಾಮಾರಿಯ ಉಪಟಳಕ್ಕೂ ಪದೇ ಪದೇ ಒಡ್ಡುತ್ತಲೇ ಇದೆ. ಇದರಿಂದಾಗಿಯೂ ಈ ಬದಲಾವಣೆಗಳನ್ನು ತಪ್ಪಿಸಿ ಮತ್ತೆ ಹಳೆಯ ವ್ಯವಸ್ಥೆಯನ್ನು ತರಬೇಕಾಗಿದೆ.

ಪ್ರಸ್ತುತ ಮಹಾಮಾರಿಯಿಂದ ನಾವು ಕಲಿಯಬೇಕಾದ ಒಟ್ಟಾರೆ ಪಾಠವೆಂದರೆ ನವ–ಉದಾರವಾದ ಯಾವ ದಾರಿ ಹಿಡಿಯುವಂತೆ ನಮ್ಮನ್ನು ಬಲವಂತ ಪಡಿಸಿದೆಯೋ ಅದರಿಂದ ಹಿಂದಕ್ಕೆ ಹೋಗಿ ಸಮಗ್ರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಹಾಗೂ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಮತ್ತೆ ಪರಿಚಯಿಸಬೇಕು. ಇಲ್ಲದೇ ಹೋದರೆ ಹಲವು ಪ್ರಶಸ್ತ ಜೀವಗಳನ್ನು ಅನಾವಶ್ಯಕವಾಗಿ ಕಳೆದುಕೊಳ್ಳಬೇಕಾಗುತ್ತದೆ.

ಸುಮಾರು 5 ಕೋಟಿ ಜನರನ್ನು ಬಲಿ ತೆಗೆದುಕೊಂಡ ಸ್ಪಾನಿಷ್ ವಿಷಮಜ್ವರ– ಎರಡು ದೃಶ್ಯಗಳು





ಪುಟ 11 ರಿಂದ

ಜನಸಂಗ್ರಾಮ ಮತ್ತು ಭಾರತ ಬಿಟ್ಟು ತೊಲಗಿ..

ಎಂದು ನೀಡಿದ ಕರೆಯ ರೀತಿ ಹೇಗಿತ್ತೆಂದರೆ ಅವು ದುಡಿಯುವ ಜನರ ಸಮರಶೀಲ ಹೋರಾಟಗಳನ್ನು ನಿರುತ್ಸಾಹಗೊಳಿಸಿತು. ಅದು ಕಾರ್ಮಿಕ ಸಂಘಗಳು, ಕಿಸಾನ್ ಸಭಾಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳ ನಡುವಿನ ಐಕ್ಯತೆಯನ್ನು ನಾಶ ಮಾಡಲು ಪಕ್ಷ–ವಿರೋಧಿಗಳಿಗೆ ಅವಕಾಶಗಳನ್ನು ಒದಗಿಸಿತು. ಮೊಟ್ಟ ಮೊದಲ ಬಾರಿಗೆ, ಎಲ್ಲಾ ರೀತಿಯ ಸಾಮೂಹಿಕ ಸಂಘಟನೆಗಳು ಎಲ್ಲಾ ಮಟ್ಟದಲ್ಲೂ ಪಕ್ಷ–ರಾಜಕೀಯ ಧೋರಣೆಗಳ ಆಧಾರದಲ್ಲಿ ಒಡೆದು ಹೋದವು.

ಸ್ಟ್ಯಾಲಿನ್‌ಗ್ರಾಡಿನಲ್ಲಿ ಕೆಂಪು ಸೇನೆಯು ವಿಜಯದೊಂದಿಗೆ ದೊರೆತ ನಿರ್ಣಾಯಕ ಘಟ್ಟವನ್ನು ಗ್ರಹಿಸುವಲ್ಲಿ ಪಕ್ಷ ಸೋತಿತು. ಅದರ ನಂತರವೂ ಭಾರತಕ್ಕೆ ಫ್ಯಾಸಿಸಂನ ಅಪಾಯವು ಹಾಗೆಯೇ ಮುಂದುವರಿದಿದೆ ಎಂಬ ತಿಳುವಳಿಕೆಯಲ್ಲೇ ಪಕ್ಷ ಇತ್ತು. ಸ್ಟ್ಯಾಲಿನ್‌ಗ್ರಾಡಿನ ಗೆಲುವಿನ ನಂತರದಲ್ಲಿ ಬ್ರಿಟಿಷರ ವಿರುದ್ಧದ ಹೋರಾಟಗಳನ್ನು ತೀವ್ರಗೊಳಿಸುವ ಸಂದರ್ಭಕ್ಕೆ ಹೆಚ್ಚು ಹೊಂದಿಕೊಳ್ಳುವಂಥಾ ತಂತ್ರಗಳನ್ನು ಅಳವಡಿಸಿಕೊಳ್ಳಲು ಪಕ್ಷಕ್ಕೆ ಸಾಧ್ಯವಾಗಬೇಕಿತ್ತು.

1945ರಲ್ಲಿ ಯುದ್ಧ ಕೊನೆಗೊಂಡ ನಂತರ, ಯುದ್ಧಾನಂತರ ಬೆಳೆದು ಬಂದ ಅನೇಕ ಸಮರಶೀಲ ಸಾಮೂಹಿಕ ಹೋರಾಟಗಳಿಗೆ ಪಕ್ಷ ನಾಯಕತ್ವ ನೀಡಿತು.

ಈ ಅವಧಿಯಲ್ಲಿ ಸಾಮ್ರಾಜ್ಯಶಾಹಿ–ವಿರೋಧಿ ಸಮರಶೀಲ ಹೋರಾಟಗಳಿಂದ ಪಕ್ಷವು ಸ್ವಲ್ಪ ಮಟ್ಟಿನ ಒಂಟಿತನವನ್ನು ಅನುಭವಿಸಿತಾದರೂ, ಯುದ್ಧ ಸನ್ನಿವೇಶದಿಂದಾಗಿ ಕಷ್ಟವನ್ನು ಎದುರಿಸಿದ ಜನರ ಮಧ್ಯೆ ಮಾಡಿದ ಕೆಲಸವು ಹೊಸ ಪ್ರದೇಶಗಳಲ್ಲಿ ಹೊಸ ಜನವಿಭಾಗಗಳೊಂದಿಗೆ ಸಂಬಂಧಗಳನ್ನು ಬೆಸೆಯುವಲ್ಲಿ ಪಕ್ಷಕ್ಕೆ ಸಹಾಯಕವಾಯಿತು. ಬೆಲೆ ಏರಿಕೆ ಮತ್ತು ಆಹಾರ ಕೊರತೆಗಳ ವಿರುದ್ಧದ ಹೋರಾಟ, ಕಾಳಸಂತೆಕೋರರು ಮತ್ತು ಕಳ್ಳದಾಸ್ತಾನಿನ ವಿರುದ್ಧ ಹಾಗೂ ಅಗತ್ಯ ವಸ್ತುಗಳ ಕೊರತೆಯ ವಿರುದ್ಧದ ಹೋರಾಟಗಳನ್ನು ಪಕ್ಷದ ಘಟಕಗಳು ನಿರಂತರವಾಗಿ ನಡೆಸಿದವು; ಅವುಗಳಲ್ಲಿ ಕೇರಳದ ಮಲಬಾರ್ ಪ್ರದೇಶಗಳಲ್ಲಿ ನಡೆದ ಹೋರಾಟ ಉತ್ತಮ ಉದಾಹರಣೆ. ಬಂಗಾಳದಲ್ಲಿ, 1943ರ ಭೀಕರ ಬರಗಾಲದ ಸಂದರ್ಭದಲ್ಲಿ ಕಮ್ಯುನಿಸ್ಟರು ಕೈಗೊಂಡ ಪರಿಹಾರ ಕಾರ್ಯಗಳು ವಿವಿಧ ಜನವಿಭಾಗಗಳೊಂದಿಗೆ ಸಖ್ಯ ಬೆಳೆಸಲು ಪಕ್ಷಕ್ಕೆ ದೊಡ್ಡ ರೀತಿಯಲ್ಲಿ ಸಹಾಯ ಒದಗಿಸಿದವು.

ಜನರ ನಡುವಿನ ಕಮ್ಯುನಿಸ್ಟ್ ಪಕ್ಷದ ಕೆಲಸಕಾರ್ಯಗಳು ಮತ್ತು ಅದರ ಸಾಮ್ರಾಜ್ಯಶಾಹಿ–ವಿರೋಧಿ ನಿಲುವು ಅಂತಿಮವಾಗಿ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದವರನ್ನು ಹಾಗೂ ನೇತೃತ್ವ ವಹಿಸಿದ್ದವರನ್ನೂ ಪಕ್ಷದತ್ತ ಆಕರ್ಷಿಸಿದವು. ಅರುಣಾ ಅಸಫ್ ಅಲಿಯಂತಹ ನಾಯಕರು ಪಕ್ಷವನ್ನು ಸೇರಿದರು.

ತಪ್ಪು ತಿಳುವಳಿಕೆಯ ಹೊರತಾಗಿಯೂ, ಪಕ್ಷವು ಬ್ರಿಟಿಷ್ ಆಳರಸರೊಂದಿಗೆ ಎಂದಿಗೂ ಶಾಮೀಲಾಗಲಿಲ್ಲ. ಲಂಡನ್‌ನಲ್ಲಿದ್ದ' ಗೃಹ ಕಾರ್ಯದರ್ಶಿಗೆ ಸೆಪ್ಟೆಂಬರ್ 2, 1942ರಲ್ಲಿ ಭಾರತದಿಂದ ಗೃಹ ಇಲಾಖೆಯು ಕಳಿಸಿದ ವರದಿಯು ಹೀಗೆ ಹೇಳಿತ್ತು: "ಸಿಪಿಐ ಸದಸ್ಯರ ನಡವಳಿಕೆಗಳು ಯಾವಾಗಿನಂತೆ ಬಹಳ ಸ್ಪಷ್ಟವಾಗಿದ್ದವು, ಅವರೆಲ್ಲರೂ ಬ್ರಿಟಿಷ್ ವಿರೋಧಿ ಕ್ರಾಂತಿಕಾರಿಗಳಾಗಿಯೇ ಇದ್ದಾರೆ." ಅಂದಿನ ಬ್ರಿಟಿಷ್ ಸರ್ಕಾರವು ಸೆಪ್ಟೆಂಬರ್ 20, 1943ಲ್ಲಿ ಸಿದ್ಧಪಡಿಸಿದ ಮತ್ತೊಂದು ಗುಪ್ತ ವರದಿಯ ಪ್ರಕಾರ: "ಮೂಲತಃ ಸಿಪಿಐ ಒಂದು ರಾಷ್ಟ್ರೀಯ ಪಕ್ಷವಾಗಿದ್ದು ಅಂತರ್‌ರಾಷ್ಟ್ರೀಯವಾದದ ಮಾತುಗಳನ್ನು ಆಡುತ್ತಿದ್ದರೂ, ಅದು ಭಾರತದ ವಿಮೋಚನೆಗೆ ಹೋರಾಡುತ್ತಿದೆ; ಅದರ ಬಹುಪಾಲು ಸದಸ್ಯರು ಅದರ ತೆಕ್ಕೆಗೆ ಬಂದಿದ್ದೇ ಅದು ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೊಗೆಯಲು ಬದ್ಧವಾಗಿದೆಯೆಂದು."

ರಾಜ್ಯದ ಬಡವರ ಹಸಿವನ್ನು ಹೇಗೆ ನಿವಾರಿಸುತ್ತೀರಿ? ....

ಪುಟ 5 ರಿಂದ

ವಿನಯ್ ಶ್ರೀನಿವಾಸ್ ವಕೀಲರು ಬೆಂಗಳೂರು, ಡಾ. ವಾಸು ಜನಶಕ್ತಿ ಬೆಂಗಳೂರು, ಕೆ. ನೀಲಾ ಮಹಿಳಾ ಹೋರಾಟಗಾರರು ಕಲುಬುರಗಿ, ಡಾ. ಮೀನಾಕ್ಷಿ ಬಾಳಿ ಪ್ರಾಧ್ಯಾಪಕರು ಕಲುಬರುಗಿ, ಕೆ. ಶರೀಫಾ ಕವಿಯತ್ರಿ ಬೆಂಗಳೂರು, ಎಸ್. ಸತ್ಯಾ ಸಾಮಾಜಿಕ ಕಾರ್ಯಕರ್ತೆ ಹಾಗೂ ಹಿರಿಯ ಪತ್ರಕರ್ತರು, ಪ.ಸ ಕುಮಾರ್ ಹಿರಿಯ ಕಲಾವಿದರು ಬೆಂಗಳೂರು, ಡಾ. ಶ್ರೀಪಾದ್ ಭಟ್ ಚಿಂತಕರು, ಜಿ.ಎನ್. ನಾಗರಾಜ್ ಚಿಂತಕರು ಬೆಂಗಳೂರು, ಡಾ. ಎಂ.ಡಿ. ಒಕ್ಕುಂದ ಪ್ರಾಧ್ಯಾಪಕರು ಧಾರವಾಡ, ಡಾ. ವಿನಯ ಒಕ್ಕುಂದ ಪ್ರಾಧ್ಯಾಪಕರು, ನಭ, ಡಾ. ಅಶೋಕ ಶೆಟ್ಟರ್ ಪ್ರಾಧ್ಯಾಪಕರು ಧಾರವಾಡ, ಡಾ. ಬಂಜೆಗೆರೆ ಜಯಪ್ರಕಾಶ್ ಚಿಂತಕರು, ನಿತ್ಯಾನಂದ ಸ್ವಾಮಿ ಸಂಪಾದಕರು ಜನಶಕ್ತಿ ವಾರ ಪತ್ರಿಕೆ, ಡಾ. ವಡ್ಡಗೆರೆ ನಾಗರಾಜಯ್ಯ ಸಂಸ್ಕೃತಿ ಚಿಂತಕರು, ಡಾ. ಮಲ್ಲಿಕಾರ್ಜುನ ಮಾನ್ವಡೆ ಅಲೆಮಾರಿ ಒಕ್ಕೂಟ, ಡಾ. ಚಾಮರಾಜ್ ನಿವೃತ್ತ ಅಧಿಕಾರಿ ಬೆಂಗಳೂರು, ಬಸವರಾಜ್ ಸೂಳಿಭಾವಿ ಲಡಾಯಿ ಪ್ರಕಾಶನ ಗದಗ, ಡಾ. ವಿಠ್ಠಲ ಭಂಡಾರಿ ಸಹಯಾನ ಹೊನ್ನಾವರ, ಅಕ್ಷತಾ ಹುಂಚದ ಕಟ್ಟೆ ಅಹರ್ನಿಶಿ ಪ್ರಕಾಶನ ಶಿವಮೊಗ್ಗ, ವಿಠಲ ಹೆಗಡೆ ಕಲ್ಕುಳಿ ಚಿಂತಕರು ಶೃಂಗೇರಿ, ಸುಕನ್ಯಾ ಕನವಳ್ಳಿ ಕವಿಯತ್ರಿ, ಕೆ.ಎಸ್. ವಿಮಲ ಮಹಿಳಾ ಹೋರಾಟಗಾರರು, ಕೋಡಿಹಳ್ಳಿ ಚಂದ್ರಶೇಖರ್ ರೈತ ಮುಖಂಡರು, ಜಿ.ಸಿ. ಬಯ್ಯಾರೆಡ್ಡಿ ಅಧ್ಯಕ್ಷರು ಪ್ರಾಂತ ರೈತ ಸಂಘ, ಜಿ.ಎಂ ವೀರಸಂಗಯ್ಯ ರೈತ ಮುಖಂಡರು, ದಿವಾಕರ್ ಕೆ.ಆರ್.ಎಸ್. ಮುಖಂಡರು, ಕವಿತಾ ಕರಿಗುಂಟೆ ರೈತ ಹೋರಾಟಗಾರರು, ಯು ಬಸವರಾಜ್ ಪ್ರ. ಕಾರ್ಯದರ್ಶಿ ಕೆಪಿಆರ್‌ಎಸ್, ಸುನಂದ ಕಡೆಮೆ, ಪ್ರಕಾಶ ಕಡೆಮೆ ನವ್ಯ ಕಡೆಮೆ, ಡಾ. ಬಿ.ಆರ್ ಮಂಜುನಾಥ್ ಬರಹಗಾರರು, ಡಾ. ಜಯಲಕ್ಷ್ಮೀ ವೈದ್ಯರು ಹಾಗೂ ಮಹಿಳಾ ಹೋರಾಟಗಾರ್ತಿ, ಕೇಸರಿ ಹರವು ಚಿತ್ರ ನಿರ್ದೇಶಕ–ಬರಹಗಾರರು, ಶಿವಾನಂದ ಸಾಸ್ವೇಹಳ್ಳಿ ಬರಹಗಾರರು, ಮ.ಶ್ರೀ ಮುರುಳಿ ಕೃಷ್ಣ ಬೆಂಗಳೂರು, ಮಾರುತಿ ಹೆಚ್ ಬೆಂಗಳೂರು, ಡಾ. ಅರುಣ್ ಜೋಳದ ಕೂಡ್ಲಿಗಿ ಹಂಪಿ ವಿವಿ, ಕಿರಣ್ ಭಟ್ ರಂಗಕರ್ಮಿ ಹೊನ್ನಾವರ, ದೀಪ ಹಿರೇಗುತ್ತಿ ಬರಹಗಾರರು ಶಿವಮೊಗ್ಗ, ರಂಗನಾಥ ಕಂಟನಕುಂಟೆ ಉಪನ್ಯಾಸಕರು, ನಟರಾಜ್ ಹೊನ್ನಾವಳ್ಳಿ ಬರಹಗಾರರು, ಹಲ್ಕರಿಕೆ ಶಿವಶಂಕರ್ ರಂಗ ನಿರ್ದೇಶಕ, ಡಾ. ಎ.ಬಿ. ರಾಮಚಂದ್ರಪ್ಪ ಪ್ರಾಧ್ಯಾಪಕರು ದಾವಣಗೆರೆ, ರೇಣುಕಾ ಚಿತ್ರದುರ್ಗ, ಜಗದೀಶ ಭಟ್, ಪ್ರದೀಪ, ಎಸ್. ವರಲಕ್ಷ್ಮಿ ಸಿಐಟಿಯು ರಾಜ್ಯ ಅಧ್ಯಕ್ಷರು, ಮೀನಾಕ್ಷಿ ಸುಂದರಂ ಸಿಐಟಿಯು ಪ್ರಧಾನ ಕಾರ್ಯದರ್ಶಿ, ಕೆ.ಎನ್.ಉಮೇಶ್ ಸಿಐಟಿಯು ಬೆಂಗಳೂರು, ಕೆ. ಮಹಾಂತೇಶ ಸಿಐಟಿಯು ಬೆಂಗಳೂರು, ಟಿ.ಸುರೇಂದ್ರರಾವ್ ಸಮುದಾಯ ಬೆಂಗಳೂರು, ವಿಜಯ ಬಾಸ್ಕರ್ ಪ್ರ. ಕಾರ್ಯದರ್ಶಿ ಎಐಟಿಯುಸಿ, ಎಲ್ ಕಾಳಪ್ಪ ಪ್ರ. ಕಾರ್ಯದರ್ಶಿ ಹೆಚ್.ಎಂ.ಕೆ.ಪಿ, ನಾಗರಾಜ್ ಶೆಟ್ಟಿ ಚಿಂತಕರು ಬೆಂಗಳೂರು, ವಸಂತರಾಜ್ ಎನ್‌ಕೆ ಬರಹಗಾರರು ಬೆಂಗಳೂರು, ಯೋಗಿಶ್ ಮಾಸ್ಟರ್ ಬರಹಗಾರರು ರಾಮನಗರ, ಪ್ರದೀಪ ಮಾಲ್ಗುಡಿ ಹಿರಿಯ ಪತ್ರಕರ್ತರು, ಹೆ.ಆರ್. ನಟರಾಜ್ ಹಿರಿಯ ಪತ್ರಕರ್ತರು, ನಿಖಿಲ ಕೊಲ್ಪೆ ಹಿರಿಯ ಪತ್ರಕರ್ತರು ಬಂಟ್ವಾಳ, ಡಾ ಚಂದ್ರಶೇಖರ ಆರ್.ವಿ.ರಾ. ಕಾನೂನು ಶಾಲೆ, ಡಾ ಬಿ.ಪಿ ಮಹೇಂದ್ರ ಕುಮಾರ್ ದಾಂಡೇಲಿ, ಮಹೇಶ ಪತ್ತಾರ್ ಹುಬ್ಬಳ್ಳಿ, ಡಾ. ಅನಿಲ್ ಕುಮಾರ್ ಬಾಗೆಪಲ್ಲಿ, ಈ ಬಸವರಾಜ್ ಖಜಾಂಚಿ ಕರಾವಿಪ, ಎನ್. ವೀರಸ್ವಾಮಿ ಅಧ್ಯಕ್ಷರು CWFI, ಇಮ್ತಿಯಾಜ್ ಹುಸೇನ್ ಬರಹಗಾರರು ದಾವಣಗೆರೆ, ಜಯಣ್ಣ ಜಾಧವ ದಾವಣಗೆರೆ, ಜೈ ಕುಮಾರ್ ಅ.ಕ ಸ.ನೌಕರರ ಒಕ್ಕೂಟ, ಸೈಯದ್ ಮುಜೀಬ್ ಬೀದಿಬದಿ ವ್ಯಾಪಾರಿಗಳ ಸಂಘ, ಕೆ.ಇ ಸಿದ್ದಯ್ಯ ಪತ್ರಕರ್ತರು ತುಮಕೂರು, ಎನ್.ವಿ. ಸೌಮ್ಯ ರಾಣಿ ಪತ್ರಕರ್ತರು, ಬಿ. ಉಮೇಶ್ ಕಟ್ಟಡ ಕಾರ್ಮಿಕ ಸಂಘ ತುಮಕೂರು, ರಂಗರಾಜು ಪತ್ರಕರ್ತರು ತುಮಕೂರು, ಆರ್. ರಾಮಕೃಷ್ಣ ಬಿಜಿವಿಎಸ್ ಬೆಂಗಳೂರು, ಕೆ.ಎಸ್. ಲಕ್ಷ್ಮೀ ಜೆಎಂಎಸ್ ಬೆಂಗಳೂರು, ಸುಧಾ ರೆಡ್ಡಿ ಬೆಂಗಳೂರು, ಟಿ.ಎಲ್. ಕೃಷ್ಣೇಗೌಡ ತಳಗವಾದಿ ಮಂಡ್ಯ, ಸುರೇಶ ಕಲ್ಲಾಗಾರ್ cwfi ಕುಂದಾಪುರ, ಪ್ರಭಾ ಬೆಳವಂಗಲ ವಿಜ್ಞಾನ ಕಾರ್ಯಕರ್ತೆ ಬೆಂ., ಬಾಲಕೃಷ್ಣ ಶೆಟ್ಟಿ ಸಿಐಟಿಯು ಉಡುಪಿ, ಗಾಂಧಿನಗರ ನಾರಾಯಣಸ್ವಾಮಿ citu ಕೋಲಾರ, ಸುನಂದ ವೇದರಾಜ್ Aijms ಬೆಂಗಳೂರು, ಸಿದ್ದಯ್ಯ ಚಿಕ್ಕ ಮಾದಯ್ಯ Cwfi ಬೆಂಗಳೂರು, ನಜ್ಮಾ ನಜೀರ್ ಚಿಕ್ಕನೇರಳೆ ಚಿಂತಕಿ, ಭೀಮ ಮಿಷನ್ ಬೆಂಗಳೂರು, ರಮಾಕಾಂತ ಪುರಾಣಿಕ, ಮೆಹರಾಜ್ ಪಾಟೀಲ ತಾವರಕೆರೆ, ಸತೀಶ ಕುಮಾರ ಬೆಂಗಳೂರು, ಕೆ.ಎಚ್. ಪಾಟೀಲ್ ವಕೀಲರು ಧಾರವಾಡ, ಎಲ್. ಹೆಚ್.ಅರುಣ್ ಕುಮಾರ್ ವಕೀಲರು ದಾವಣಗೆರೆ, ಐ.ಆರ್. ಪ್ರಮೋದ್ ವಕೀಲರು ವಿರಾಜಪೇಟೆ, ಶ್ರೀಧರ ಮಾತನವರ್ ವಕೀಲರು ದಾವಣಗೆರೆ, ಡಿ. ಶ್ರೀನಿವಾಸ್ ವಕೀಲರು ಜಗಳೂರು, ಬಸವರಾಜ್ ಕೋರಿಮಠ ವಕೀಲರು ಹುಬ್ಬಳ್ಳಿ, ಲಿಂಗರಾಜ್ ಸಿಐಟಿಯು ಬೆಂಗಳೂರು, ಯಶೋದ ಮುನ್ನಡೆ, ಯಮುನಾ ಗಾಂವ್ಕರ್ ಸಿಐಟಿಯು ಕಾರವಾರ, ಹನುಮಂತ ಪೂಜಾರಿ cwfi ಕಲುಬುರಗಿ, ಶಬರೀಶ್ ಕುಮಾರ್ citu ಮೈಸೂರು, ಕೆ.ಪಿ ಜಾನಿ Cwfi ಸುಳ್ಯ, ಕೆ.ಪ್ರಭಾಕರನ್ ಶಿವಮೊಗ್ಗ ಸಮುದಾಯ, ರಮೇಶ ಹೆಚ್.ಆರ್ ರಂಗನಿರ್ದೇಶಕರು ಮೈಸೂರು, ಶ್ರೀಧರ ಮೂರ್ತಿ ಗ್ರಾಮೀಣ ಸಂಸ್ಕೃತಿ ಚಿಂತಕರು, ಟಿ.ಎನ್. ಷಣ್ಮುಖ ಹಿರಿಯ ಪತ್ರಕರ್ತರು, ಶಶಿಧರ ಸಮುದಾಯ ಬೆಂಗಳೂರು, ಪಂಡಿತಾರಾಧ್ಯ ಮೈಸೂರು, ಸಿ.ಕೆ. ಗುಂಡಣ್ಣ ರಂಗ ಕಲಾವಿದರು, ಸಿರಾಜ್ ಬಿಸರಳ್ಳಿ ಕವಿಗಳ, ಪಿ.ಕೆ. ಮಲ್ಲನಗೌಡರ್, ಎಂ.ಜಿ. ವೆಂಕಟೇಶ ರಂಗ ಸಂಘಟಕರು ಬೆಂಗಳೂರು, ಶಾಂತರಾಂ ನಾಯಕ್ KPRS ಉ.ಕ., ಶ್ರೀನಿವಾಸ ಕುಮಾರ್, ಲಕ್ಷ್ಮಣ್ ಕುಮಾರ್ ಎಲ್ ಬೆಂಗಳೂರು, ಭೀಮರಾಜ್ cwfi ಕೋಲಾರ, ಚಿಕ್ಕರಾಜು ಬಿಜೆವಿಎಸ್ ಬೆಂಗಳೂರು, ಅಂಬರೀಶ್ Sfi ಕೇಂದ್ರ ಸಮಿತಿ ಸದಸ್ಯರು, ವಾಸುದೇವ ರೆಡ್ಡಿ SFI ರಾಜ್ಯ ಕಾರ್ಯದರ್ಶಿ, ಗುರುರಾಜ್ ದೇಸಾಯಿ ಜನಶಕ್ತಿ ಮೀಡಿಯ, ಬಸವರಾಜ್ ಪೂಜಾರಿ ಕಾರ್ಯದರ್ಶಿ Dyfi ಹಾವೇರಿ, ಹನುಮೇಗೌಡ ಕೃಷಿಕೂಲಿಕಾರರ ಸಂಘ ಬೆಂಗಳೂರು, ಶಮೀಮ ಮುಜೀಬ್ ಉಪನ್ಯಾಸಕರು ತುಮಕೂರು, ಸುಬ್ರಹ್ಮಣ್ಯ ಎನ್.ಕೆ. ಗ್ರಾಮ ಪಂಚಾಯ್ತಿ ನೌ ಸಂಘ, ಲೋಕೇಶ್ citu ತುಮಕೂರು, ಸುಬ್ರಹ್ಮಣ್ಯ BSNLEU ಮೈಸೂರು, ಈರಣ್ಣ BSNLEU ದಾವಣಗೆರೆ, ನಾಗರಾಜ್ ಧನ್ ಪೌಂಡೇಷನ್ ಬೆಂಗಳೂರು, ಮನೋಹರ ಕೇರ್ ಬೆಂಗಳೂರು, ಅಶ್ರಫ್ ಎಂ. ಸಾಲೆತ್ತೂರು, ನಾಗಯ್ಯಸ್ವಾಮಿ Cwfi ಕಲುಬುರಗಿ. ●

ಕೊರೊನಾ ವೈರಸ್ ಕುರಿತು 10 ಸುಳ್ಳು ಸುದ್ದಿಗಳು



10 ಸುಳ್ಳು ಸುದ್ದಿಗಳಿಂದ ಎಚ್ಚರವಹಿಸಿ ದೂರವಿರಿ.

1– ಅನೇಕ ಶವಗಳನ್ನು ಹೊಂದಿರುವ ಇಟಲಿ ನಗರದ ಚಿತ್ರ.
ಸತ್ಯ– ಇದು ಕ್ಯಾಂಟೋನೀಸ್ ಸಿನಿಮಾದ ಒಂದು ದೃಶ್ಯವಾಗಿದೆ.

2– 498 / – ಜಿಯೋ ಉಚಿತ ರೀಚಾರ್ಜ್.
ಸತ್ಯ– ಕಂಪನಿಯು ಅಂತಹ ಯಾವುದೇ ಹಕ್ಕುಗಳನ್ನು ನೀಡಿಲ್ಲ.

3– ನೆಲದ ಮೇಲೆ ಮಲಗಿರುವ ಸಹಾಯಕ್ಕಾಗಿ ಅನೇಕ ಜನರು ಕಿರುಚುತ್ತಿದ್ದಾರೆ.
ಸತ್ಯ– 2014 ರ ಕಲಾ ಯೋಜನೆಯ ಚಿತ್ರ.

4– ಡಾ.ರಮೇಶ್ ಗುಪ್ತಾ ಅವರ ಪುಸ್ತಕ ಪ್ರಾಣಿ ವಿಜ್ಞಾನದಲ್ಲಿ ಕರೋನದ ಚಿಕಿತ್ಸೆಯಾಗಿದೆ.
ಸತ್ಯವಲ್ಲ.

5– ಮೆಡಂತ ಆಸ್ಪತ್ರೆಯ ಡಾ.ನರೇಶ್ ಟ್ರೆಹನ್ ಅವರು ರಾಷ್ಟೀಯ ತುರ್ತು ಪರಿಸ್ಥಿತಿಗೆ ಮನವಿ ಮಾಡುತ್ತಾರೆ.
ಸತ್ಯ– ಡಾ. ಟ್ರೆಹನ್ ಯಾವುದೇ ಮನವಿ ಮಾಡಲಿಲ್ಲ.

6– 134 ಸಂತ್ರಸ್ತರಿಗೆ ಚಿಕಿತ್ಸೆ ನೀಡಿದ ನಂತರ ಸೋಂಕಿಗೆ ಬಲಿಯಾದ ದಂಪತಿಗಳ ಛಾಯಾಚಿತ್ರ.
ಸತ್ಯ– ಚಿತ್ರವು ವೈದ್ಯ ದಂಪತಿಗಳಲ್ಲ. ವಿಮಾನ ನಿಲ್ದಾಣದಲ್ಲಿ ಒಂದೆರಡು ಇದೆ.

7– ಕೋವಿಡ್ 19 ಕರೋನಾ .ಔಷಧ.
ಸತ್ಯ – ಇದು ಔಷಧವಲ್ಲ, ಇದು ಪರೀಕ್ಷಾ ಕಿಟ್ ಆಗಿದೆ.

8– ಕರೋನಾ ವೈರಸ್ ಜೀವಿತಾವಧಿಯು 12 ಗಂಟೆಗಳವರೆಗೆ.
ಸತ್ಯ – 3 ಗಂಟೆಗಳಿಂದ 9 ದಿನಗಳು.

ರಷ್ಯಾದಲ್ಲಿ

9– 500 ಸಿಂಹ ರಸ್ತೆಗಳು.
ಸತ್ಯ– ಇದು ಒಂದು ಚಲನಚಿತ್ರ ದೃಶ್ಯ.

10– ಇಟಲಿಯ ಶವಪೆಟ್ಟಿಗೆಯ ಚಿತ್ರ.
ಸತ್ಯ– ಇದು 7 ವರ್ಷದ ಹಿಂದಿನ ಘಟನೆಯ ಚಿತ್ರ, ಇದಕ್ಕೆ ಕರೋನಾಗೆ ಯಾವುದೇ ಸಂಬಂಧವಿಲ್ಲ.

ಸ್ನೇಹಿತರೇ, ಸುಳ್ಳು ವದಂತಿಗಳಿಂದಾಗಿ ನಿಮ್ಮ ತಾಳ್ಮೆ ಕಳೆದುಕೊಳ್ಳಬೇಡಿ. ಪೋಸ್ಟ್ ಅನ್ನು ಹಂಚಿಕೊಳ್ಳಿ ಮತ್ತು ಎಲ್ಲರಿಗೂ ಸರಿಯಾದ ಮಾಹಿತಿಯನ್ನು ಕಳುಹಿಸಿ. ನಿಮ್ಮ ಆತ್ಮಸಾಕ್ಷಿ ಮತ್ತು ತಾಳ್ಮೆ ನಿಮ್ಮ ಸಂಗಾತಿ. ಪ್ರಕೃತಿ ಮತ್ತು ಸರ್ಕಾರವನ್ನು ನಂಬಿರಿ. ಮನೆಯಲ್ಲಿಯೇ ಇರಿ, ಸುರಕ್ಷಿತವಾಗಿರಿ.

... ಶುಭವಾಗಲಿ.

Phoenix Phoenix

ನವ–ಉದಾರವಾದಿ ವೈರಸಿನ ಭಸ್ಮಾಸುರ ನರ್ತನ..........

ಪುಟ 16 ರಿಂದ

ಕೋಷ್ಟಕ–1 ಕೊವಿದ್–19 ಸೋಂಕಿನಿಂದಾದ ಸಾವು–ನೋವುಗಳು

ಒಟ್ಟು ಸೋಂಕಿತರು	ಒಟ್ಟು ಸಾವುಗಳು	ಒಟ್ಟು ಸಕ್ರಿಯ ಪ್ರಕರಣಗಳು	ಸೋಂಕಿತರ ಪ್ರಮಾಣ ಪ್ರತಿ ದಶಲಕ್ಷ ಜನರಿಗೆ	ಸತ್ತವರ ಪ್ರಮಾಣ ಪ್ರತಿ ದಶಲಕ್ಷ ಜನರಿಗೆ
ಯು.ಎಸ್ 85,762	ಇಟಲಿ 8,215	ಯು.ಎಸ್ 82,588	ಲಕ್ಸಂಬರ್ಗ್ 2321	ಇಟಲಿ 136
ಚೀನಾ 81,340	ಸ್ಪೈನ್ 4,858	ಇಟಲಿ 62,023	ಸ್ವಿಟ್ಜರ್‌ಲ್ಯಾಂಡ್ 1422	ಸ್ಪೈನ್ 104
ಇಟಲಿ 80,589	ಚೀನಾ 3,292	ಸ್ಪೈನ್ 49,844	ಸ್ಪೈನ್ 1370	ನೆದರ್‌ಲ್ಯಾಂಡ್ಸ್ 32
ಸ್ಪೈನ್ 64,059	ಇರಾನ್ 2,378	ಜರ್ಮನಿ 41,415	ಇಟಲಿ 1333	ಇರಾನ್ 28
ಜರ್ಮನಿ 47,373	ಫ್ರಾನ್ಸ್ 1,696	ಫ್ರಾನ್ಸ್ 22,511	ಆಸ್ಟ್ರಿಯ 821	ಫ್ರಾನ್ಸ್ 26
ಇರಾನ್ 32,332	ಯು.ಎಸ್ 1,306	ಇರಾನ್ 18,821	ನಾರ್ವೆ 680	ಬೆಲ್ಜಿಯಂ 25

(ಎಲ್ಲ ಅಂಕೆ ಸಂಖ್ಯೆಗಳು https://www.worldometers.info/coronavirus/ ಎಂಬ ವೆಬ್ ಸೈಟಿನಲ್ಲಿ ಮಾರ್ಚ್ 27ರ ರಾತ್ರಿ 8 ಗಂಟೆಗೆ ವರದಿಯಾದ್ದು.)

ಸಾಂಕ್ರಾಮಿಕವೇನಲ್ಲ. ಈವರೆಗಿ ಬಂದದ್ದರಲ್ಲಿ ಇದು ಹೆಚ್ಚು ಮಾರಣಾಂತಿಕ ಮತ್ತು ವೇಗವಾಗಿ ವ್ಯಾಪಕವಾಗಿ ಹಬ್ಬಿದ ಸಾಂಕ್ರಾಮಿಕವಷ್ಟೇ. ಇತ್ತೀಚೆಗೆ ಮತ್ತು ಹಿಂದೆ SARS, H5N2, H1N1, ಎಬೊಲಾ, ಜೈಕಾ ವೈರಾಣುಗಳ ಸಾಂಕ್ರಾಮಿಕಗಳು ಹಲವು ದೇಶಗಳಲ್ಲಿ ವ್ಯಾಪಕವಾಗಿ ಹಬ್ಬಿದ್ದವು. ಅದರ ನಂತರ ಹಲವು ಪರಿಣತರು ಅಭಿವೃದ್ಧ ದೇಶಗಳು ಸೇರಿದಂತೆ ಹೆಚ್ಚಿನ ದೇಶಗಳ ಆರೋಗ್ಯ ವ್ಯವಸ್ಥೆ ಇಂತಹ ಸಾಂಕ್ರಾಮಿಕಗಳನ್ನು ನಿಭಾಯಿಸುವ ಕುರಿತು ಎಚ್ಚರಿಸಿದ್ದರು. ಕೆಲವರು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸದೆ ಇವನ್ನು ನಿಭಾಯಿಸಲು ಸಾಧ್ಯವಿಲ್ಲ ಎಂದೂ ಎಚ್ಚರಿಸಿದ್ದರು. ಆದರೆ ನವ–ಉದಾರವಾದಿ ನೀತಿಗಳ ಗುಂಗಿನಲ್ಲಿದ್ದ ಅಭಿವೃದ್ಧ ಜಗತ್ತಿನ ನಾಯಕರು, ಜನ ಇದನ್ನು ನಿರ್ಲಕ್ಷಿಸಿದ್ದರು. ಅದರ ಫಲವೇ ಈ ಅಭಿವೃದ್ಧ ದೇಶಗಳಲ್ಲಿ ಸಹ ಇಷ್ಟು ವ್ಯಾಪಕವಾದ ಸಾವು–ನೋವುಗಳ ಸಂಖ್ಯೆ ಮತ್ತು ಇನ್ನೂ ಹತೋಟಿಗೆ ಬರದಿರುವುದು. ಇದರಿಂದಾಗಿಯೇ ಕೊವಿದ್–19ನ್ನು ಕೆಲವು ಪರಿಣತರು 'ನವ–ಉದಾರವಾದಿ ವೈರಸ್' ಎಂದೂ ಕರೆದಿದ್ದಾರೆ. ನವ–ಉದಾರವಾದಿ ನೀತಿಗಳ ಕಠೋರ ಆಳ್ವಿಕೆಯಲ್ಲದಿದ್ದರೆ ಇದು ಇಷ್ಟೊಂದು ದೊಡ್ಡ ಜಾಗತಿಕ ಬಿಕ್ಕಟ್ಟು ಆಗಬೇಕಾಗಿರಲಿಲ್ಲ ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಅದರಲ್ಲೂ ಉತ್ತರ ಅಮೆರಿಕ ಮತ್ತು ಯುರೋಪಿನ ಹೆಚ್ಚಿನ ದೇಶಗಳ ರಾಜಕೀಯದಲ್ಲಿ ಬಂಡವಾಳಶಾಹಿಯ ಅಮಾನವೀಯತೆಯನ್ನು ಸಂಭ್ರಮಿಸುವ ಶಕ್ತಿಗಳು ಮೇಲುಗೈ ಪಡೆದಿದ್ದು, ಅದರ ಪರಿಣಾಮವೇ ಈಗಿನ ದುರಂತ. ಜನವರಿ ಕೊನೆಯ ಹೊತ್ತಿಗೆ ಕೊವಿದ್–19ರ ತೀವ್ರ ಸಾಂಕ್ರಾಮಿಕ ಸ್ವರೂಪ ಸ್ಪಷ್ಟವಾದಾಗಲೂ ಈ ದೇಶಗಳ ಸರಕಾರಗಳು ತುರ್ತು ಕ್ರಮಗಳಿಗೆ ಮುಂದಾಗಲಿಲ್ಲ. ಶೇರು ಮಾರುಕಟ್ಟೆಯ ಮತ್ತು ದೈತ್ಯ ಕಂಪನಿಗಳ ಭಾವನೆಗಳಿಗೆ ಮಾತ್ರ ಹೆಚ್ಚು ಸ್ಪಂದಿಸುವ ಮತ್ತು ಜನಸಾಮಾನ್ಯರ ಆರೋಗ್ಯದ ಬಗ್ಗೆ ದಿವ್ಯ ನಿರ್ಲಕ್ಷ ಇರುವ ಸರಕಾರಗಳು ಇದಕ್ಕೆ ಪ್ರತಿಕ್ರಿಯಿಸುವುದರಲ್ಲಿ ವಿಳಂಬ ಮಾಡಿದವು. ಚೀನಾದ ಲಾಕ್–ಡೌನ್ ಮುಂತಾದ ಪರಿಣಾಮಕಾರಿ ತುರ್ತು ಕ್ರಮಗಳನ್ನು ನೋಡಿದ ಮೇಲೂ ಸಹ, ಇಂತಹ 'ಸರ್ವಾಧಿಕಾರಿ' ಕ್ರಮಗಳನ್ನು ತಮ್ಮ 'ಪ್ರಜಾಸತ್ತಾತ್ಮಕ' ವ್ಯವಸ್ಥೆಯಲ್ಲಿ ತೆಗೆದುಕೊಳ್ಳುವುದು ಸಾಧ್ಯವಿಲ್ಲ ಎಂದು ನೆಪ ಹೇಳಿದವು. ನಾಗರಿಕರ ಆರೋಗ್ಯ ಮತ್ತು ಪ್ರಾಣ ಹಾನಿಯ ಕುರಿತು ತುರ್ತು ಕ್ರಮ ಕೈಗೊಳ್ಳದ ವ್ಯವಸ್ಥೆ 'ಪ್ರಜಾಸತ್ತಾತ್ಮಕ'ವೇ ಎಂದು ಯಾರೂ ಕೇಳಲಿಲ್ಲ.

ಕೆಲವು ನಾಯಕರಂತೂ ಇದು ಒಂದು ಸಮಸ್ಯೆಯೇ ಅಲ್ಲ ಎಂದು ನಿರಾಕರಿಸಿದ್ದರು. ಇದರಲ್ಲಿ ಮುಂಚೂಣಿಯಲ್ಲಿದ್ದವರು 'ಅತ್ಯಂತ ಉಗ್ರ ಭಂಡ ನವ–ಉದಾರವಾದಿ'ಗಳು ಎಂದು ಕುಖ್ಯಾತರಾದ ಯು.ಎಸ್ ಅಧ್ಯಕ್ಷ ಟ್ರಂಪ್ ಮತ್ತು ಬ್ರಿಟಿಷ್ ಪ್ರಧಾನಿ ಜಾನ್ಸನ್. ಇಂತಹ ತುರ್ತು ಕ್ರಮಗಳು ಆರ್ಥಿಕ ವ್ಯವಸ್ಥೆಗೆ ಅಥವಾ ಶೇರು ಮಾರುಕಟ್ಟೆಯ ಭಾವನೆಗಳಿಗೆ ಘಾಸಿ ಮಾಡುತ್ತವೆಯೆಂದರು. ಜಾನ್ಸನ್ 'ಸಾಮಾಜಿಕ ಅಂತರ'ದಂತಹ ಕ್ರಮಗಳು ಬೇಕಾಗಿಲ್ಲ ಎಂದು ಸಾರ್ವಜನಿಕವಾಗಿಯೇ ವಾದಿಸಿದರು. ಆದರೆ ಇಟಲಿ, ಜರ್ಮನಿ ಗಳಲ್ಲಿ ಸೋಂಕಿತರ ಮತ್ತು ಸಾವುಗಳ ಸಂಖ್ಯೆ ಸ್ಫೋಟವಾಗುತ್ತಿದ್ದಂತೆ ಹಲವು ದೇಶಗಳಲ್ಲಿ ಲಾಕ್ ಡೌನ್ ಗಳು ಘೋಷಣೆಯಾಗುತ್ತಿದ್ದಂತೆ, ಶೇರು ಮಾರುಕಟ್ಟೆ ಅಲ್ಲೋಲ ಕಲ್ಲೋಲವಾಗುತ್ತಿದ್ದಂತೆ ಕೆಲವು ಕ್ರಮಗಳನ್ನು ಕೈಗೊಳ್ಳಲು ಮುಂದಾದರು. ಈ ಬಿಕ್ಕಟ್ಟಿನಲ್ಲಿ ಹಲವರು ಅದರಲ್ಲೂ ವೃದ್ಧರು ಸಾಯುವುದು ಅನಿವಾರ್ಯ ಎಂದು ಈ ಇಬ್ಬರೂ ನಾಯಕರು ಹೇಳಲೂ ಹಿಂಜರಿಯಲಿಲ್ಲ. ಇಟಲಿಯ ನಾಯಕರು ಹೀಗೆ ಹೇಳದಿದ್ದರೂ ಕಾರ್ಯತಃ ಐಸಿಯು, ವೆಂಟಿಲೇಟರ್ ಮುಂತಾದ ಸೀಮಿತ ವೈದ್ಯಕೀಯ ಸೌಲಭ್ಯಗಳ ಹಂಚಿಕೆಯನ್ನು ದೊಡ್ಡ ಸಂಖ್ಯೆಯಲ್ಲಿ ಹಲವು ವೃದ್ಧರಿಗೆ ನಿರಾಕರಿಸಲಾಯಿತು ಮತ್ತು ಆ ಮೂಲಕ ಸಾಯಲು ಬಿಡಲಾಯಿತು ಎಂಬ ದಾರುಣ ವರದಿಗಳು ಬಂದಿವೆ.

ಯು.ಎಸ್.ನ ಸೋಂಕಿತರ ಸಂಖ್ಯೆ ಸ್ಫೋಟವಾಗಿ ಹಲವಾರು ರಾಜ್ಯಗಳು ಲಾಕ್–ಡೌನ್ ಘೋಷಿಸಿದ ನಂತರವೂ, ನಿನ್ನೆಯಷ್ಟು ಇತ್ತೀಚೆಗೆ (ಮಾ.26) 'ದೇಶವನ್ನು ನಾವು ಕಟ್ಟಿದ್ದು ಮುಚ್ಚಲು ಅಲ್ಲ', 'ಪರಿಹಾರ ಸಮಸ್ಯೆಗಿಂತ ಭೀಕರವಾಗಿರಬಾರದು' ಮತ್ತು ಇವರೆಲ್ಲ 'ದೇಶವನ್ನು ಸಾಧ್ಯವಾದಷ್ಟು ದಿನ ಮುಚ್ಚಿ ಬಿಟ್ಟು ನನ್ನ ಪುನರಾಯ್ಕೆ ಆಗದಂತೆ' ಪಿತೂರಿ ಮಾಡಿದ್ದಾರೆ ಎಂದು ಅಧ್ಯಕ್ಷ ಟ್ರಂಪ್ ಸಾರ್ವಜನಿಕವಾಗಿ ಗೊಣಗಿದ್ದಾರೆ. ಶೇರು ಮಾರುಕಟ್ಟೆ ಮತ್ತು ಉದ್ಯೋಗಗಳು ವೀಲಾಗುತ್ತಿರುವ ದುಷ್ಪರಿಣಾಮಗಳಿಂದಾಗಿ ತನ್ನ ಪುನರಾಯ್ಕೆ ಕಷ್ಟ ಎಂಬ ಆತಂಕ ಟ್ರಂಪ್ ಕಾಡುತ್ತಿದೆ, ದೇಶದ ಜನರಿಗೆ ಏನಾಗುತ್ತದೆ ಎಂದಲ್ಲ. ವಾಸ್ತವ ಪರಿಸ್ಥಿತಿಯನ್ನು ಅಂದಾಜು ಮಾಡುವಲ್ಲಿ ವಿಳಂಬ, ನಿರ್ಲಕ್ಷ ಗಳಿಂದಾಗಿ ಟ್ರಂಪ್ ಅವರ 'ಜನಪ್ರಿಯತೆ' ಪಾತಾಳಕ್ಕೆ ಕುಸಿದಿದೆ ಎಂದು ಹೇಳಲಾಗುತ್ತದೆ. ಆದ್ದರಿಂದ ಚೀನಾದ ಅಧ್ಯಕ್ಷ, ಚೀನಾದ ಕಮ್ಯುನಿಸ್ಟ್ ಪಕ್ಷ, ಲಿಬರಲ್ ಮಾಧ್ಯಮ, ಡೆಮೊಕ್ರಾಟಿಕ್ ಪಕ್ಷ ಎಲ್ಲರ 'ಪಿತೂರಿ'ಯನ್ನು ಈ ಕುಸಿತಕ್ಕೆ ದೂಷಿಸುತ್ತಿದ್ದಾರೆ. 'ಚೀನೀ ವೈರಸ್' ಎಂದು ಪದೇ ಪದೇ ಹೇಳುತ್ತಾ, ಇದು ಚೀನಾ ಸರಕಾರದ ಪಿತೂರಿ ಎಂದು ಜನಾಂಗ ನಿಂದನೆಯ ನುಡಿಗಟ್ಟು ಬಳಸಿ ಬೇಜವಾಬ್ದಾರಿಯಿಂದ ಹೇಳುತ್ತಿದ್ದಾರೆ. ಉತ್ತರ ಅಮೆರಿಕ ಮತ್ತು ಯುರೋಪಿನ ಆಳುವ ವಲಯಗಳು ಮತ್ತು ಮಾಧ್ಯಮಗಳು ಸಹ ಮಾಮೂಲಿನ 'ಶೀತ ಸಮರ'ದ ಮತ್ತು ಜನಾಂಗೀಯ ನುಡಿಕಟ್ಟು ಬಳಸಿ ಇದು ಚೀನಾದ ಪಿತೂರಿ ಎಂದು ಹೇಳುತ್ತಿದ್ದಾರೆ.

ಆದರೆ ಕೊವಿದ್–19ರ ಜಾಗತಿಕ ಹರಡುವಿಕೆ ಎಷ್ಟು ತೀವ್ರವಾಗಿದಯೆಂದರೆ. ಹಲವು ತುರ್ತು ಆರ್ಥಿಕ ಕ್ರಮಗಳನ್ನು ಘೋಷಿಸದೆ ಬೇರೆ ದಾರಿಯೇ ಇಲ್ಲವೆಂದಾಗಿದೆ. ನವ–ಉದಾರವಾದದ ಚಾಂಪಿಯನುಗಳಾಗಿದ್ದ ಟ್ರಂಪ್ ಮತ್ತು ಜಾನ್ಸನ್ ಅವರೇ ಅತಿ ದೊಡ್ಡ ಆರ್ಥಿಕ ಪ್ಯಾಕೇಜುಗಳನ್ನು ಘೋಷಿಸಿದ್ದಾರೆ. ಹೆಚ್ಚಿನ ಯುರೋಪಿನ ದೇಶಗಳು ಸಹ ದೊಡ್ಡ ಪ್ಯಾಕೇಜುಗಳನ್ನು ಘೋಷಿಸಿವೆ. ಇವುಗಳಲ್ಲಿ ದೊಡ್ಡ ಭಾಗ ಉದ್ಯಮಗಳ ಶ್ರೀಮಂತರ ಆಸ್ತಿಗಳ ರಕ್ಷಣೆ, ನಷ್ಟ ಪರಿಹಾರಗಳಿಗೆ ಮೀಸಲಿದ್ದರೂ, ದುಡಿಯುವ ಜನರಿಗೂ ಪರಿಹಾರಗಳನ್ನು ಘೋಷಿಸಬೇಕಾಗಿ ಬಂದಿದೆ. ಇದು ನವ–ಉದಾರವಾದದ ತರ್ಕವನ್ನು ಪ್ರಶ್ನಿಸದಿದ್ದರೂ ಅದನ್ನು ಸಡಿಲಗೊಳಿಸಿದೆ. ಹಿಂದೆ ದುಡಿಯುವ ಜನರಿಗೆ ಕೊಡುವ ಯಾವುದೇ ನೆರವು ಸಬ್ಸಿಡಿ ಆರ್ಥಿಕಕ್ಕೆ ಒಳ್ಳೆಯದಲ್ಲ, 'ಕೆಲಸದ ನೈತಿಕತೆಗೆ' ಹಾನಿಕಾರಕ ಎಂದೆಲ್ಲ ಮಾತು ಕೇಳಬರುತ್ತಿತ್ತು. ಈಗಿನ ಪರಿಸ್ಥಿತಿಯಲ್ಲಿ ಈ ದೇಶಗಳ ನಾಯಕರಿಗೆ ಬೇರೆ ಆಯ್ಕೆಯೇ ಇರಲಿಲ್ಲ. ಒಮ್ಮೆಗೆ 'ನವ–ಉದಾರವಾದಿ ವೈರಸ್ಸಿನ' ಬಣ್ಣ ಜನರ ಮುಂದೆ ಬಯಲಾಗುತ್ತಿದ್ದು, ಯು.ಎಸ್ ನಲ್ಲಿ ಬರ್ನಿ ಸ್ಯಾಂಡರ್ಸ್ ಮತ್ತು ಬ್ರಿಟನಿನಲ್ಲಿ ಲೇಬರ್ ನಾಯಕ ಕೊರ್ಬಿನ್ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಗಟ್ಟಿಗೊಳಿಸುವುದನ್ನು ಚುನಾವಣಾ ಪ್ರಶ್ನೆಯಾಗಲು ಹೆಣಗಿದ್ದು ಜನರಿಗೆ ಅರ್ಥವಾಗಲು ಆರಂಭವಾಗಿದೆ. ಜನರ ಆರೋಗ್ಯ, ಪ್ರಾಣ ಬಲಿ ಕೊಟ್ಟೂ ಮೌಲ್ಯ ಮತ್ತು ಲಾಭ ರಕ್ಷಿಸಿಕೊಳ್ಳುವ ಬಂಡವಾಳದ ಭಂಡತನ ತಿಳಿಯಲು ಆರಂಭವಾಗಿದೆ. ಹೆಚ್ಚಿನ ಸರಕಾರಗಳು ಸಂಘಟಿತ ವಲಯದ ಕಾರ್ಮಿಕರ 2–3 ತಿಂಗಳ ವೇತನವನ್ನು ತಾನೇ ಕೊಡುವುದಾಗಿ ಘೋಷಿಸಿವೆ. ಅಸಂಘಟಿತ ವಲಯದವರಿಗೆ ಕೆಲವು ಪರಿಹಾರ ಧನ ಕೊಡುವುದಾಗಿ ಘೋಷಿಸಿವೆ. ವಿವಿಧ ದೇಶಗಳ ಪರಿಹಾರ ಪ್ಯಾಕೇಜುಗಳು ಕೆಲವು ವಿವರಗಳು ಕೋಷ್ಟಕ–2ರಲ್ಲಿ ಇವೆ. ಕೊವಿದ್–19 ಸಾಂಕ್ರಾಮಿಕ್ ಆರ್ಥಿಕ ಪರಿಣಾಮ ಇನ್ನೂ ದೀರ್ಘ ಕಾಲ ಇರಲಿದೆ. ಅದು ನವ–ಉದಾರವಾದದ ತರ್ಕದ ತೀವ್ರ ಬಿಕ್ಕಟ್ಟಿಗೂ ಕಾರಣವಾಗಬಹುದು. ನವ–ಉದಾರವಾದಿ ವೈರಸಿನ ಭಸ್ಮಾಸುರ ನರ್ತನ ಮುಂದುವರೆದಿದ್ದರೂ ಅದರ ಅವಸಾನ ಕಾಲ ಸಮೀಪಿಸಿದಂತೆ ಕಾಣುತ್ತದೆ.

ಕೋಷ್ಟಕ 2 – ಸರಕಾರಗಳು ಘೋಷಿಸಿದ ಕೊವಿದ–19 ಆರ್ಥಿಕ ಪ್ಯಾಕೇಜುಗಳು

ದೇಶ	ಆರ್ಥಿಕ ಪ್ಯಾಕೇಜ್	ದುಡಿಯುವ ಜನರಿಗೆ ಪರಿಹಾರ ಕ್ರಮಗಳು*	ಉದ್ಯಮ/ವ್ಯವಹಾರ ಗಳಿಗೆ ಪರಿಹಾರ ಕ್ರಮಗಳು	ಇತರ ಕ್ರಮಗಳು
ಬ್ರಿಟಿನ್	ಜಿಡಿಪಿಯ ಶೇ. 15 ರಷ್ಟು	* ಲೇ_ಆಫ್ ಆಗದ ಸಂಘಟಿತ ವಲಯದ ಕಾರ್ಮಿಕರಿಗೆ 3 ತಿಂಗಳುಗಳ ಕಾಲ ಶೇ. 80 ವೇತನ * ಸ್ವ–ಉದ್ಯೋಗಿಗಳಿಗೆ ಅವರು ಆದಾಯ ತೆರಿಗೆ ಸಂದಾಯದಲ್ಲಿ ಘೋಷಿಸಿದ ಸರಾಸರಿ ತಿಂಗಳ ಆದಾಯದ ಶೇ. 80 ಪಾವತಿ	330 ಶತಕೋಟಿ ಪೌಂಡು ಸಾಲ 20 ಶತಕೋಟಿ ಪೌಂಡು ಇತರ ನೆರವು	
ಯು.ಎಸ್.ಎ	2200 ಶತಕೋಟಿ ಡಾಲರು (ವಾರ್ಷಿಕ ಬಜೆಟಿನ ಅರ್ಧ)	* ಪ್ರತಿ ವಯಸ್ಕರಿಗೆ 1200 ಡಾಲರ್ ಮತ್ತು ಮಕ್ಕಳಿಗೆ 500 ಡಾಲರ್ ನೇರ ಪಾವತಿ * 6 ತಿಂಗಳುಗಳ ಕಾಲ ವಿದ್ಯಾರ್ಥಿ ಸಾಲ ಪಾವತಿ ಮಾಡಬೇಕಾಗಿಲ್ಲ * ನಿರುದ್ಯೋಗಿಗಳಿಗೆ 600 ಡಾಲರು ಹೆಚ್ಚಿನ ನಿರುದ್ಯೋಗ ಭತ್ಯೆ	* ವಿಮಾನಸೇವೆ ಮುಂತಾದ ಉದ್ಯಮಗಳಿಗೆ 500 ಶತಕೋಟಿ ಡಾಲರ್ ಸಾಲ ಸಬ್ಸಿಡಿ	* 130 ಶತ ಕೋಟಿ ಡಾಲರ್ ಆಸ್ಪತ್ರೆ ಗಳಿಗೆ ಅನುದಾನ * 45 ಶತಕೋಟಿ ಡಾಲರ್ ತುರ್ತು ಪರಿಸ್ಥಿತಿ ನಿರ್ವಹಣೆ ನಿಧಿಗೆ
ಕೆನಡಾ	82 ಶತಕೋಟಿ ಡಾಲರ್ (ಜಿಡಿಪಿಯ ಶೇ.3)	* ಪ್ರತಿ ವಯಸ್ಕರಿಗೆ 400, ದಂಪತಿಗಳಿಗೆ 600 ಮತ್ತು ಮಕ್ಕಳಿಗೆ 300 ಡಾಲರ್ ನೇರ ಪಾವತಿ	55 ಶತಕೋಟಿ ಡಾಲರು ನೆರವು	27 ಶತಕೋಟಿ ಡಾಲರು ಕಾರ್ಮಿಕರಿಗೆ ಮತ್ತು ಸಣ್ಣ ಉದ್ಯಮಗಳಿಗೆ
ಜರ್ಮನಿ	1000 ಶತಕೋಟಿ ಯುರೊ (ಜಿಡಪಿಯ ಶೆ. 20)	* ಮಾಲಕ ಕಡಿತಗೊಳಿಸಿದ ವೇತನದ ಶೇ. 60 ಭಾಗ ಪಾವತಿ * ಶಾಲಾ ಬಂದ್ ನಿಂದಾಗಿ 13 ವರ್ಷದ ಮಕ್ಕಳ ಜತೆ ಮನೆಯಲ್ಲಿರಬೇಕಾದರೆ ವೇತನದ ಶೇ. 67 ಭಾಗ ಪಾವತಿ	* 400 ಶತಕೋಟಿ ಯುರೊ ಸಾಲ ಮತ್ತು ಗ್ಯಾರಂಟಿ * 100 ಶತಕೋಟಿ ಯುರೊ ಬಂಡವಾಳ ಹೂಡಿಕೆ ವಿಪತ್ತಿನಲ್ಲಿರುವ ಕಂಪನಿಗಳಿಗೆ	
ಫ್ರಾನ್ಸ್		45 ಶತಕೋಟಿ ಯುರೊ ತೆರಿಗೆ ವಿನಾಯಿತಿ ಮತ್ತು ನೇರ ಪಾವತಿಗಳು	300 ಶತಕೋಟಿ ಸಾಲಗಳು	

* ಹೆಚ್ಚಿನ ಈ ದೇಶಗಳಲ್ಲಿ ಕೆಲಸ ಕಳೆದುಕೊಂಡ ಕಾರ್ಮಿಕರಿಗೆ ನಿರುದ್ಯೋಗ ಭತ್ಯೆಯ ಸೌಲಭ್ಯವಿದೆ. ಈ ಪರಿಹಾರಗಳು ಲಾಕ್–ಡೌನ್ ಅವಧಿಗೆ ಮತ್ತು ತಾತ್ಕಾಲಿಕ ಕೆಲಸವಿಲ್ಲದ ಅವಧಿಗೆ

* ಲೇ–ಆಫ್ ಆಗದ ಕಾರ್ಮಿಕರಿಗೆ ನೆದರ್ ಲ್ಯಾಂಡ್ಸ್ ಶೇ. 90, ಡೆನ್ಮಾರ್ಕ್ (ಶೇ. 75), ನಾರ್ವೆ (ಮೊದಲ 3 ವಾರ ಪೂರ್ಣ ವೇತನ, ಉಳಿದ ಅವಧಿಗೆ ಶೇ.90) ಸ್ವೀಡನ್ (ಶೇ.90) ಸರಕಾರಗಳು ವೇತನ ಪಾವತಿ ಮಾಡಲಿವೆ.

JANASHAKTHI KANNADA VARA PATRIKE March 30- April 5, 2020 Price: Rs. 10/- Date of Publication: 27 March 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ನವ-ಉದಾರವಾದಿ ವೈರಸಿನ ಭಸ್ಮಾಸುರ ನರ್ತನ



ಅತ್ಯಂತ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿದ ಉತ್ತರ ಅಮೆರಿಕ ಮತ್ತು ಯುರೋಪಿನ ದೇಶಗಳಲ್ಲೂ ಸಹ ವ್ಯಾಪಕವಾದ ಸಾವು-ನೋವುಗಳು ಆಗಿವೆ ಮತ್ತು ಇನ್ನೂ ಹತೋಟಿಗೆ ಬಂದಿಲ್ಲ. ಇದರಿಂದಾಗಿಯೇ ಕೊವಿದ್-19ನ್ನು ಕೆಲವು ಪರಿಣತರು 'ನವ-ಉದಾರವಾದಿ ವೈರಸ್' ಎಂದೂ ಕರೆದಿದ್ದಾರೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ದುರ್ಬಲಗೊಳಿಸಿದ ನವ-ಉದಾರವಾದಿ ನೀತಿಗಳ ಕಠೋರ ಆಳ್ವಿಕೆಯಲ್ಲದಿದ್ದರೆ ಇದು ಇಷ್ಟೊಂದು ದೊಡ್ಡ ಜಾಗತಿಕ ಬಿಕ್ಕಟ್ಟು ಆಗಬೇಕಾಗಿರಲಿಲ್ಲ ಎಂಬುದು ಅವರು ಅಭಿಪ್ರಾಯ. ಆದರೆ ಈಗ ಒಮ್ಮೆಗೆ 'ನವ-ಉದಾರವಾದಿ ವೈರಸ್ಸಿನ' ಬಣ್ಣ ಜನರ ಮುಂದೆ ಬಯಲಾಗುತ್ತಿದ್ದು.. ಜನರ ಆರೋಗ್ಯ, ಪ್ರಾಣ ಬಲಿ ಕೊಟ್ಟೂ ಮೌಲ್ಯ ಮತ್ತು ಲಾಭ ರಕ್ಷಿಸಿಕೊಳ್ಳುವ ಬಂಡವಾಳದ ಭಂಡತನ ತಿಳಿಯಲು ಆರಂಭವಾಗಿದೆ. ಆದ್ದರಿಂದ ದೇಶಗಳು ದೊಡ್ಡ ಆರ್ಥಿಕ ಪ್ಯಾಕೇಜುಗಳನ್ನು ಘೋಷಿಸಬೇಕಾಗಿದೆ. ಕೊವಿದ-19 ಸಾಂಕ್ರಾಮಿಕದ ಆರ್ಥಿಕ ಪರಿಣಾಮ ಇನ್ನೂ ದೀರ್ಘ ಕಾಲ ಇರಲಿದೆ. ಅದು ನವ-ಉದಾರವಾದದ ತರ್ಕದ ತೀವ್ರ ಬಿಕ್ಕಟ್ಟಿಗೂ ಕಾರಣವಾಗಬಹುದು. ಈ 'ನವ-ಉದಾರವಾದಿ ವೈರಸಿನ' ಭಸ್ಮಾಸುರ ನರ್ತನ ಮುಂದುವರೆದಿದ್ದರೂ, ಅದರ ಅವಸಾನ ಕಾಲ ಸಮೀಪಿಸಿದಂತೆ ಕಾಣುತ್ತದೆ.

ವಸಂತರಾಜ ಎನ್.ಕೆ.

ಕೊರೊನಾ ವೈರಸ್ ಅಥವಾ ಕೊವಿದ್-19 ಬಹುಶಃ ಹಿಂದಿನ ಎಲ್ಲಾ ಸಾಂಕ್ರಾಮಿಕ ರೋಗಗಳನ್ನು ಮೀರಿಸಿ 175 ದೇಶಗಳಿಗೆ ಕಳೆದ ಮೂರು ತಿಂಗಳುಗಳಲ್ಲಿ ಹರಡಿದೆ. ಜಗತ್ತಿನಲ್ಲಿ ಒಟ್ಟು 5 ಲಕ್ಷಕ್ಕೂ (5.36 ಲಕ್ಷ) ಹೆಚ್ಚು ಜನರನ್ನು ಬಾಧಿಸುತ್ತಿದೆ. ಸತ್ತವರ ಸಂಖ್ಯೆ 24 ಸಾವಿರಕ್ಕೂ (24.11 ಸಾವಿರ) ಹೆಚ್ಚು. ಒಂದೇ ಸಮಾಧಾನಕರ ಅಂಶವೆಂದರೆ ಸೋಂಕಿತರಲ್ಲಿ 1.24 ಲಕ್ಷ (ಅಂದರೆ ಸುಮಾರು ಕಾಲು ಭಾಗ) ಜನ ಚೇತರಿಸಿಕೊಂಡಿದ್ದಾರೆ. ಜಾಗತಿಕ ಅಂಕೆಸಂಖ್ಯೆಗಳನ್ನು ನೋಡಿದರೆ ಅತ್ಯಂತ ಹೆಚ್ಚು ಸೋಂಕು ತಗಲಿದವರ ಸಂಖ್ಯೆ ಇರುವ 15 ದೇಶಗಳ ಪಟ್ಟಿಯಲ್ಲಿ ಚೀನಾ, ಇರಾನ್, ದ.ಕೊರಿಯಾ ಬಿಟ್ಟರೆ ಎಲ್ಲವೂ ಉತ್ತರ ಅಮೆರಿಕ ಮತ್ತು ಪಶ್ಚಿಮ ಯುರೋಪಿನ ಅಭಿವೃದ್ಧ ದೇಶಗಳೇ ಇವೆ. ಇಂದು ಮೊದಲ ಬಾರಿಗೆ ಈ ಪಟ್ಟಿಯಲ್ಲಿ ಯು.ಎಸ್ ಮೊದಲ ಸ್ಥಾನಕ್ಕೇರಿದೆ. ಚೀನಾ, ಇಟಲಿ, ಸ್ಪೈನ್, ಜರ್ಮನಿ ಅನುಕ್ರಮವಾಗಿ 2ರಿಂದ 5 ನೇ ಸ್ಥಾನದಲ್ಲಿವೆ. ಅತ್ಯಂತ ಹೆಚ್ಚು ಒಟ್ಟು ಸತ್ತವರ ಸಂಖ್ಯೆಯಲ್ಲೂ 15 ದೇಶಗಳ ಪಟ್ಟಿಯಲ್ಲಿ ಚೀನಾ, ಇರಾನ್, ದ.ಕೊರಿಯಾ, ಬ್ರೆಜಿಲ್ ಬಿಟ್ಟರೆ ಎಲ್ಲವೂ ಉತ್ತರ ಅಮೆರಿಕ ಮತ್ತು ಪಶ್ಚಿಮ ಯುರೋಪಿನ ಅಭಿವೃದ್ಧ ದೇಶಗಳೇ ಇವೆ. ಈ ಪಟ್ಟಿಯಲ್ಲಿ ಇಟಲಿ ಮೊದಲ ಸ್ಥಾನದಲ್ಲಿದ್ದರೆ ಸ್ಪೈನ್, ಚೀನಾ, ಇರಾನ್, ಫ್ರಾನ್ಸ್ ಅನುಕ್ರಮವಾಗಿ 2ರಿಂದ 5 ನೇ ಸ್ಥಾನದಲ್ಲಿವೆ.

ಅತ್ಯಂತ ಹೆಚ್ಚು ಇನ್ನೂ ಚೇತರಿಸಿಕೊಳ್ಳದ ಸೋಂಕಿತರ ಸಕ್ರಿಯ ಪ್ರಕರಣಗಳ ಸಂಖ್ಯೆಯ 15 ದೇಶಗಳ ಪಟ್ಟಿಯಲ್ಲಿ ಮತ್ತೆ ಚೀನಾ, ಇರಾನ್, ದ.ಕೊರಿಯಾ ಬಿಟ್ಟರೆ ಎಲ್ಲವೂ ಉತ್ತರ ಅಮೆರಿಕ ಮತ್ತು ಪಶ್ಚಿಮ ಯುರೋಪಿನ ಅಭಿವೃದ್ಧ ದೇಶಗಳೇ ಇವೆ. ಯು.ಎಸ್ ಈ ಪಟ್ಟಿಯಲ್ಲೂ ಮೊದಲ ಸ್ಥಾನದಲ್ಲಿದೆ. ಇಟಲಿ, ಸ್ಪೈನ್, ಜರ್ಮನಿ, ಫ್ರಾನ್ಸ್ ಇವು ಅನುಕ್ರಮವಾಗಿ 2-5 ಸ್ಥಾನಗಳಲ್ಲಿವೆ. ಆದರೆ ಈ ಪಟ್ಟಿಯಲ್ಲಿ ಈಗ ದ.ಕೊರಿಯಾ 12ನೇ ಮತ್ತು ಚೀನಾ 15 ನೇ ಸ್ಥಾನದಲ್ಲಿವೆ. ಅಂದರೆ ಇವು ಸಾಂಕ್ರಾಮಿಕವನ್ನು ಹತೋಟಿಯಲ್ಲಿ ತಂದು ಸಕ್ರಿಯ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಜನಸಂಖ್ಯೆಯ ಪ್ರಮಾಣದಲ್ಲಿ 10 ಲಕ್ಷ ಜನರಲ್ಲಿ ಅತ್ಯಂತ ಹೆಚ್ಚು ಸೋಂಕಿತರ ಪಟ್ಟಿಯಲ್ಲಿ ಮೊದಲ 15 ದೇಶಗಳಲ್ಲಿ ಹಿಂದುಳಿದ ಸಣ್ಣ/ದ್ವೀಪ ದೇಶಗಳನ್ನು ಬಿಟ್ಟರೆ ಮೊದಲ 5 ಸ್ಥಾನದಲ್ಲಿರುವುದು ಮತ್ತೆ ಯುರೋಪಿನ ಅಭಿವೃದ್ಧ ದೇಶಗಳಾದ ಲಕ್ಸಂಬರ್ಗ್, ಸ್ವಿಟ್ಝರ್‌ಲ್ಯಾಂಡ್, ಸ್ಪೈನ್, ಇಟಲಿ, ಆಸ್ಟ್ರಿಯ. ಜನಸಂಖ್ಯೆಯ ಪ್ರಮಾಣದಲ್ಲಿ 10 ಲಕ್ಷ ಜನರಲ್ಲಿ ಅತ್ಯಂತ ಹೆಚ್ಚು ಸತ್ತವರ ಸಂಖ್ಯೆಯ ಪಟ್ಟಿಯಲ್ಲಿ (ಇರಾನ್ ಬಿಟ್ಟರೆ) ಸಹ ಇದೇ ಕತೆ. ಮೊದಲ 5 ಸ್ಥಾನಗಳಲ್ಲಿರುವುದು (ಹಿಂದುಳಿದ ಸಣ್ಣ/ದ್ವೀಪ ದೇಶಗಳನ್ನು ಬಿಟ್ಟರೆ) ಇಟಲಿ, ಸ್ಪೈನ್, ಇರಾನ್, ಫ್ರಾನ್ಸ್, ನೆದರ್‌ಲ್ಯಾಂಡ್ಸ್. ಕೋಷ್ಟಕ-1ರಲ್ಲಿ ಈ ಪಟ್ಟಿಯ ಅತ್ಯಂತ ಹೆಚ್ಚಿನ 6 ದೇಶಗಳ ಸಂಖ್ಯೆಗಳು ಇವೆ.



ಸಾರ್ವಜನಿಕ ಆರೋಗ್ಯ ವ್ಯವಸ್ಥೆ ದುರ್ಬಲ

ಈ ಅಂಕೆಸಂಖ್ಯೆಗಳು ಏನನ್ನು ಹೇಳುತ್ತವೆ? ಅತ್ಯಂತ ಅಭಿವೃದ್ಧ ಮತ್ತು ಅತ್ಯಂತ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿದ ಉತ್ತರ ಅಮೆರಿಕ ಮತ್ತು ಯುರೋಪಿನ ದೇಶಗಳಲ್ಲೂ ಈ ಸಾಂಕ್ರಾಮಿಕವನ್ನು ಶೀಘ್ರವಾಗಿ ಗುರುತಿಸಿ ವೇಗವಾಗಿ ಹತೋಟಿಗೆ ತರಲು ಸಾಧ್ಯವಾಗಲಿಲ್ಲ. ಏಕೆ? ಎಂಬುದು ಪ್ರಶ್ನೆ. ಚೀನಾ, ದಕ್ಷಿಣ ಕೊರಿಯಾ ಬಿಟ್ಟರೆ ಯಾವ ದೇಶಕ್ಕೂ ಈ ಸವಾಲನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗಿಲ್ಲ. ಇದಕ್ಕೆ ಹಲವರು ಪರಿಣತರು ಕೊಡುವ ಉತ್ತರವೆಂದರೆ ಈ ಎಲ್ಲ ದೇಶಗಳಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಅತ್ಯಲ್ಪ ಸಂಪನ್ಮೂಲಗಳನ್ನು ಮಾತ್ರ ಕೊಡುವ ಮೂಲಕ ದುರ್ಬಲಗೊಳಿಸಿರುವುದು, ಹೆಚ್ಚು ಕಡಿಮೆ ಸಂಪೂರ್ಣವಾಗಿ ಖಾಸಗೀಕರಣಗೊಳಿಸಿರುವುದು. ಹಾಗೂ ಖಾಸಗಿ ವೈದ್ಯಕೀಯ ವ್ಯವಸ್ಥೆ ಸಾಂಕ್ರಾಮಿಕ ರೋಗಗಳನ್ನು ನಿಭಾಯಿಸಲು ಸಜ್ಜಾಗಿಲ್ಲದಿರುವುದು. ಸಾಂಕ್ರಾಮಿಕ ರೋಗಗಳನ್ನು ಶೀಘ್ರವಾಗಿ ಗುರುತಿಸಿ ವೇಗವಾಗಿ ಹತೋಟಿಗೆ ತರುವ ಕೆಲಸ ನಿಭಾಯಿಸಲು ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬೇಕಾಗುತ್ತದೆ. ಯುರೋಪಿನ ಹಲವು ಅಭಿವೃದ್ಧ ದೇಶಗಳಲ್ಲಿ ಕಲ್ಯಾಣ ರಾಜ್ಯದ ಭಾಗವಾಗಿ ಹಿಂದೆ ಇದ್ದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸಹ 90ರ ದಶಕದ ನವ-ಉದಾರವಾದಿ ನೀತಿಗಳ ಭಾಗವಾಗಿ ಬಹುಪಾಲು ದುರ್ಬಲಗೊಳಿಸಲಾಗಿದೆ. ಇಂತಹ ವ್ಯವಸ್ಥೆ ಇದ್ದಲ್ಲಿ ಸಹ ಅವು ಸಾಂಕ್ರಾಮಿಕ ರೋಗಗಳನ್ನು ನಿಭಾಯಿಸಲು ಸಜ್ಜುಗೊಳಿಸಲಾಗಿಲ್ಲ.

ಕೊವಿದ್-19 ಜಾಗತಿಕವಾಗಿ ಹಬ್ಬಿದ ಮೊದಲ

ಪುಟ 15 ಕ್ಕೆ

ಕೊರೊನಾ ಕುಣುದೈತಣ್ಣ

ಕವನ


ರೋಗ ಬಂದೈತಣ್ಣಾ ದೊಡ್ಡ ರೋಗ ಬಂದೈತಣ್ಣಾ
ಜಾಗತೀಕರಣ ಗಂಟೆ ಹೊಡೆದು
ಜಗದ ಗರಡೀ ಮನೆಯೊಳಗ
ಲಾಭದ ಎಣ್ಣೆ ಮತ್ತಿನೊಳಗ
ತೋಳುತೊಡೆ ತೋಡಿಕೊಂಡು
ರೋಗ ಬಂದೈತಣ್ಣಾ ದೊಡ್ಡ ರೋಗ ಬಂದೈತಣ್ಣಾ.

ಕುಸ್ತಿಗೆ ಬಿದ್ದೈತ್ರಣ್ಣ ರೋಗ ಕುಸ್ತಿಗೆ ಬಿದ್ದೈತ್ರಣ್ಣ
ಜನ ಮರಣ ಮರಳಿನೊಳಗ ಸಡ್ಡು ಹೊಡೈತ್ರಣ್ಣ
ದೊಡ್ಡ ದೊಡ್ಡ ಪೈಲ್ವಾನ್ರೆಲ್ಲ ಪಲ್ಟಿ ಹೊಡದಾರಣ್ಣ
ಹುಲಿಯಂತಿದ್ದವ್ರು ಇಲಿಯಂತಾಗಿ ಮಣ್ಣು ಮಕ್ಕಿದ್ರಣ್ಣ ಕಕ್ಕಾ ಬಿಕ್ಕಿಯಾದ್ರಣ್ಣ

ಮುಕ್ಕಾಮುಕ್ತ ಮಾಯದೊಳಗ
ಚಕ್ರ ಹಿಡಿಯ ಗರಗರದೊಳಗ
ಸುತ್ತಾಡಿ ಬಂದೈತಣ್ಣಾ ರೋಗ ಸುತ್ತಾಡಿ ಬಂದೈತಣ್ಣ
ಯಂತ್ರ ಮಂತ್ರ ತಂತ್ರದೊಳಗ ಕುತಂತ್ರಿಯಾಗೈತಣ್ಣ ರೋಗ ಮಂತ್ರಿಯಾಗೈತಣ್ಣ
ಬಾಬಾ ಗೀಬಾ ಬಣ್ಣ ಕಳಚಿ
ಯೋಗಿ ಜೋಗಿ ಜಾಗಬಿಟ್ಟು
ಕಂಗಾಲಾಗ್ಯಾರಣ್ಣ ಕುಂತಲ್ಲೆ
ಅಂಗಾತ ಬಿದ್ದಾರಣ್ಣ.

ಕ್ಯಾಕಿ ಹಾಕೈತಣ್ಣ ರೋಗ ಕ್ಯಾಕಿ ಹಾಕೈತಣ್ಣ
ದೊಡ್ಡ ದೊಡ್ಡ ಧಣೇರೆಲ್ಲ ಬೆಸ್ತು ಬಿದ್ದಾರಣ್ಣ
ಬೇಡದ ಬಾಯಿ ಮುಗಿಯದ ಕೈ ಬಗ್ಗದ ಗೋಣು ತಿರುಮುರು ತಿರುಗಿ ಬೆವರೊಡದೈತಣ್ಣ
ಲಾಭದ ಬಾನಕ ಬಿಕ್ಕು ಬಿತ್ತಿ ಲೋಬನ ಹಾಕೈತಣ್ಣ ರೋಗ ಲೋಬನ ಹಾಕೈತಣ್ಣ.

ಜಾತ್ರೆ ಬ್ಯಾಡ ಯಾತ್ರಿ ಬ್ಯಾಡ
ಹಬ್ಬ ಹರಿದಿನ ಗೊಬ್ಬರ ಬ್ಯಾಡ
ಮಂದಿರ ಬ್ಯಾಡ, ಮಸೀದಿ ಬ್ಯಾಡ
ಚರ್ಚ್ ಗಿರ್ಚ್ ಗೀಳು ಬ್ಯಾಡ
ಮಾತು ಬ್ಯಾಡ ಮೈಲಿಗಿ ಬ್ಯಾಡ ಮುಟ್ಟುಬ್ಯಾಡ ಮಳ್ಳುಬ್ಯಾಡ ಕುಲಬ್ಯಾಡ ಕಲಕಲಬ್ಯಾಡ ಸಾವಿನ ಹಟ್ಟಿ
ದರ್ಬಾರ್ ದೊಳಗ ಸೋರಿ ಹೋಗ್ಯಾರಣ್ಣ
ದ್ಯಾವ್ರು ದರಗುಟ್ಟಿ ಹೋಗ್ಯಾವಣ್ಣ.



ಬಂದ್ ಮಾಡೈತೋ ಅಣ್ಣಾ ಬಂದ್ ಮಾಡೈತೋ
ಕದ ಕಿಟಿಕಿ ಎಲ್ಲಾ ಬಂದ್
ರಸ್ತಿ ಗಿಸ್ತಿ ಗಸ್ತಿ ಬಂದ್ ಕುಸ್ತಿ ಮಸ್ತಿ ಧಸ್ತಿ ಬಂದ್
ಮಾತು ಬಂದ್ ಮಾರಿಬಂದ್
ಜಾಗತೀಕರಣ ಗಂಟೆಯೊಳಗೆ
ಕೊರೊನಾ ಕುಣುದೈತಣ್ಣ
ಸಾವಿನ ಕುಣಿಕೆ ಹೆಣದೈತಣ್ಣ.

-ಪಿ.ಆರ್. ವೆಂಕಟೇಶ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**